ಲೇ: ನರಸಿಂಹಶಾಸ್ತ್ರಿಗಳು

1895

ಶ್ರೀಃ

ಯಕ್ಷಗಾನ ರುಗ್ಮವತೀಕಲ್ಯಾಣ

(ಪಾರಿಜಾತಾಪಹಾರ)

ಬರೆದವರು:

ದಿವಂಗತ ಹಲಸಿನಹಳ್ಳಿ ನರಸಿಂಹಶಾಸ್ತ್ರಿಗಳು

ಉಡುಪಿ

ಪಾವಂಜೆ ಗುರುರಾವ್ ಅಂಡ್ ಸನ್ಸ್

Yakṣagāna Rugmavatī Kalyāṇa
(Pārijātāpahāra)

ನಾಲ್ಕನೆಯ ಅಚ್ಚು:
ಶಾ. ಶಕ ೧೮೯೫

ಪ್ರಕಾಶಕರು:
ಪಾವಂಜೆ ಗುರುರಾವ್ ಅಂಡ್ ಸನ್ಸ್
ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ
ಉಡುಪಿ

ಅಚ್ಚುಗಾರರು:
ಪಾವಂಜೆ ಗುರುರಾವ್ ಅಂಡ್ ಸನ್ಸ್
ಶ್ರೀಕೃಷ್ಣಮುದ್ರಣಾಲಯ
ಉಡುಪಿ

ರೂ. 1.00

ಶ್ರೀಃ



॥ ಶ್ರೀಕೃಷ್ಣಾಯ ನಮಃ ॥

ಶ್ರೀಮದ್ಭಾಗವತದೊಳಗಣ

ಯಕ್ಷಗಾನ ರುಗ್ಮವತೀಕಲ್ಯಾಣ

(ಪಾರಿಜಾತಾಪಹಾರ)

ಶಾರ್ದೂಲವಿಕ್ರೀಡಿತಂ

ಗೋಪಾಲಂ ಸುರಸೇವ್ಯಮಾನಚರಣಂ ಗೋವರ್ಧನೋದ್ಧಾರಣಂ
ಆಪದ್ಬಾಂಧವ ಭಕ್ತವತ್ಸಲವಿಭುಂ ಶ್ರೀರಾಧಿಕಾವಲ್ಲಭಮ್ ।
ಶ್ರೀಪದ್ಮಾಸನಶಂಕರಾದಿವಿನುತಂ ಲೋಕೇಶ್ವರಂ ಕೇಶವಂ
ಗೋಪಸ್ತ್ರೀಪರಿವೇಷ್ಟಿತಂ ಮುರಹರಂ ಧ್ಯಾಯಾಮಿ ಕಂಠೀರವಮ್ ॥

ರಾಗ ನಾಟಿ ಝಂಪೆತಾಳ

ಜಂಭಾರಿನುತಪಾತ್ರ । ಶಂಭುಮೋಹನಪುತ್ರ । ನಂಬಿಕೊಂಡರ ಮಿತ್ರ । ...ತ್ರೆಂಭಗಜವಕ್ತ್ರ ॥ ಜಯಂ ಜಯತು ಜಯತು ॥ ೧ ॥ ಕಿರಿಡೊಳ್ಳ ವಿಘ್ನೇಶ । ...ಗಿರಿಜೆಮನಸಂತೋಷ । ವರತೀರ್ಥಾವಳಿವಾಸ । ಧರೆಮೂರಾಘೋಷ ॥ ...ಜಯ ಜಯತು ಜಯತು ॥ ೨ ॥ ಇನಕೋಟಿಲಾವಣ್ಯ । ಘನವಿಬುಧ ...ವರೇಣ್ಯ । ಸನಕಾದಿಸ್ತುತ ಮಾನ್ಯ । ಗಣಪಾಗ್ರಗಣ್ಯ ॥ ಜಯಂ ಜಯತು ...ಜಯತು ॥ ೩ ॥

ರಾಗ ಕಾಂಭೋಜಿ ಅಷ್ಟತಾಳ

ತೀರ್ಥರಾಜಾಪುರದೊಳಗಿರ್ಪ ಜಗದಂಬೆ । ಶ್ರೀದುರ್ಗಾಂಬಾ ॥ ಕೀರ್ತಿಪ ...ಭಜಕರ ದುರಿತನಿವಾರಿಣಿ । ಶ್ರೀದುರ್ಗಾಂಬಾ ॥ ೧ ॥ ಭೃಗುಕ್ಷೌಮ ...ವಾಸರದೊಳಗೆಯಾನಂದದಿ । ಶ್ರೀದುರ್ಗಾಂಬಾ ॥ ಮಿಗೆ ಕುಂಕುಮಾರ್ಚನೆ

ಗೆಯ್ವರು ಭಕ್ತಿಯೊಳ್ । ಶ್ರೀದುರ್ಗಾಂಬಾ ॥ ೨ ॥ ನಿತ್ಯಮಂಗಲೆ ಸರ್ವಜನ ರಭೀಷ್ಟಮನೀವೆ । ಶ್ರೀದುರ್ಗಾಂಬಾ ॥ ನಿತ್ಯನಿರಂಜನೆ ಕಾಳಿ ಕಾತ್ಯಾಯನೀ । ಶ್ರೀದುರ್ಗಾಂಬಾ ॥ ೩ ॥

ಕಂದ

ನಾರದಗಜನಿಗೆ ಮೆಚ್ಚುತ । ಸಾರಥಿಯಾದಗೆ ನಮಿಸುವೆನೆನಿಸಲ್ ಸಂಖ್ಯೆಗೆ॥ ಮೂರೆರಡಂಬಂ ಪಿಡಿದನ । ಕ್ರೂರದಿ ದಹಿಸಿದ ಪುರುಷಗೆ ನಮಿಪೆನಂ ಮುದದಿಂ ॥ ೧ ॥

ದ್ವಿಪದಿ

ಶಾರದಾಂಬಿಕೆಯಡಿಗೆ ನಮಿಸಿ ಭಕ್ತಿಯಲಿ । ವಾರಿಜಾಸನಹರಿಹರಾದ್ಯರೊಲುಮೆಯಲಿ ॥ ೧ ॥ ನಾರದಾದಿ ಸಮಸ್ತ ಮುನಿಗಳಿಗೆ ನಮಿಸಿ । ಧಾರಿಣಿಯಂ ಪುಣ್ಯನದಿಗಳನಂ ಸಂಸ್ತುತಿಸಿ ॥ ೨ ॥ ವರಮಹಾಭಾಗವತ ಪೌರಾಣದೊಳಗೆ । ಹರಿಯ ಮಹಿಮೆಯ ಶುಕರಂ ಪೇಳ್ದ ತೆರನೊಳಗೆ ॥ ೩ ॥ ಪಾರಿಜಾತದ ವೃಕ್ಷ ಭೂಮಿಗಿಳಿದುದನಂ । ವಾರಿಜಾಕ್ಷನ ಪುಣ್ಯಕಥನವೆಲ್ಲವನು ॥೪॥ ದ್ವಾರಕಾನಗರ ನಿರ್ಮಾಣಸಂಗತಿಯ । ಘೋರ ವಾನರರೊಡನೆ ಸೆಣಸಿರ್ಪ ಕಥೆಯ ॥ ೫ ॥ ಕುಂಡಿನಾನಗರದೊಳು ರುಗ್ಮಭೂಪತಿಯ । ದಂಡಿಸುತ ಕರ ಬಿಗಿದು ಸಂತೆ ರುಕ್ಮವತಿಯ ॥ ೬ ॥ ಮುರಹರನು ತನ್ನ ಸುತ ಮನ್ಮಥಗೆ ಮುದದಿ । ಪರಿಣಯವ ಗೆಯ್ದುದನಂ ಪೇಳ್ವೆ ಸಂತಸದಿ ॥ ೭ ॥ ಕೃತಿಯೊಳಿರೆ ತಪ್ಪುಗಳು ತಿದ್ದಿ ಧರೆಯೊಳಗೆ । ಮತಿಯುತರು ಮೆರೆಸುವುದಂ ಪೂರ್ಣ ದಯದೊಳಗೆ ॥ ೮ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಶುಕಮುನೀಂದ್ರನ ಚರಣ ವಂದಿಸಿ । ಭಕುತಿಯೊಳಗಭಿಮನ್ಯುತನಯನು । ಮುಕುತಿದಾಯಕ ವಾಸುದೇವನ । ಚರಿತೆಗಳನು ॥ ೧ ॥ ಅರುಹಬೇಹುದಂ ಪಾರಿಜಾತವು । ಸುರರ ಪುರದಿಂ ಧರಣಿಗಿಳಿದುದ । ಮುರಹರನಂ ಮಧುರೆಯನು ತ್ಯಜಿಸುತ । ಶರಧಿಯೊಳಗೆ ॥ ೨ ॥ ದ್ವಾರಕೆಯ ನಿರ್ಮಿಸಿದನೇತಕೆ । ಪಾರಮಾರ್ಥಿಕ ಪೇಳು ದಯದೊಳು । ಶೂರ ಮೈಂದ ದ್ವಿವಿದ ವಾನರ । ರೇಕೆ ಹಳಚಿ ॥ ೩ ॥ ಹರಿಯೊಡನೆ ಯುದ್ಧವನು ಗೆಯ್ದರು । ಪರಮಪುರುಷನಂ ರುಗ್ಮಸುತೆಯನು । ತರಳ ಮದನಗೆ ಲಗ್ನ ಗೆಯ್ದಿಹ । ಪರಿಗಳನ್ನು ॥ ೪ ॥ ಕರುಣದಲಿ ಪೇಳೆನುತ ಮುನಿಪನ । ಚರಣಕೆರಗಲು ಹರುಷದಿಂದಲಿ । ಧರಣಿಪನ ನೆಗಹುತ್ತ ಮನ್ನಿಸು । ತೊರೆದ ದಯದಿ ॥ ೫ ॥

ರಾಗ ಭೈರವಿ ಝಂಪೆತಾಳ

ಧರೆಯು ಭಾರವನೆಲ್ಲ ಪರಿಹರವ ಗೆಯ್ವುದಕೆ । ಸುರರ ಪ್ರಾರ್ಥನೆಯಂತೆ ನರಹರಿಯು ದಯದಿ ॥ ನರನಟನೆಯಿಂದ ವಸುದೇವದೇವಕಿಗುದಿಸಿ । ದುರುಳ ಕಂಸಾದಿಗಳನರಿದು ಮೆರೆದಿರಲು ॥ ೧ ॥ ಇರಲಿತ್ತ ವರಬಲದಿ (ಧರಣಿಯಲಿ) ಮುರನರಕರೆಂಬವರು । ಸುರರನೆಲ್ಲರ ಬಡಿದು ಸೆರೆಯಿಕ್ಕುತಾಗ ॥ ಧರೆಮೂರ ಕರಸತರ್ಾವೆಂದು ನಾಕದೊಳಿರ್ಪ । ಪರಿಪರಿಯ ವಸ್ತುಗಳನಪಹರಿಸಿಕೊಂಡು ॥ ॥ ೨ ॥ ದುರುಳರದಿತಿಯ ಕರ್ಣಕುಂಡಲವ ಸೆಳೆದಿರಲು । ಸುರರಾಜ ಚಿಂತಿಸುತಲೊರೆಯೆ ಶ್ರೀಹರಿಗೆ ॥ ಸುರರಿಗಭಯವನಿತ್ತು ಧುರದಿ ಮುರನರಕರನು । ಶಿರವರಿದು ಮಾಧವನು ದಯದಿಂದಲಾಗ ॥ ೩ ॥ ಮದಮುಖನ ಸೆರೆಯೊಳಿಹ ಪದಿನಾರು ಸಾಸಿರದ । ಸುದತಿಸಂಕುಲಗಳನು ಬಿಡಿಸಿ ದಯದಿಂದ ॥ ಅದಿತಿ ದೇವಿಯ ಕರ್ಣಕುಂಡಲಂಗಳ ಕೊಂಡು । ಮದಗಜಾಶ್ವಾದಿಗಳ ಕೂಡಿ ಮಾಧವನು ॥ ೪ ॥ ತೆರಳೆ ಮಧುರಾಪುರಕೆ ಸುರಲೋಕದೊಳಗಿಂದ್ರ । ತರಣಿನಂದನನಗ್ನಿ ಮರುತರೊಡಗೂಡಿ ॥ ಹರುಷದಿಂದೋಲಗಕೆ ನಡೆತಂದನೊಂದು ದಿನ । ತರುಣಿ ರಂಭಾದಿಗಳ ನಾಟ್ಯವಿಭವದಲಿ ॥ ೫ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಸುರಪನಾ ಕ್ಷಣ ಅಗ್ನಿ ಮಾರುತ । ತರಣಿಜಾತಾದಿಗಳೊಳೆಂದನು । ಮುರನರಕರುಪಟಳವ ಶ್ರೀಹರಿ । ಗೊರೆದೆನ್ನೈಸೆ ॥ ೧ ॥ ದುರುಳ ನರಕಾಸುರನ ಸತಿಯರ । ಚರಣಸೇವಕರೆಮ್ಮ ವಧುಗಳು । ಪರಮಪುರುಷನ ದಯಗಳೆಂದಿಗೆ । ದೊರೆವುದೆಮಗೆ ॥ ೨ ॥ ತಡೆಯಲಸದಳ ಖಳರ ಬಾಧೆಯ । ಜಡಜನೇತ್ರನು ಸುಮ್ಮನಿರುತಿಹ । ಒಡಲ ಉರಿಯೇನೆಂಬೆ ಮುಂದಕೆ । ಮೃಡನೆ ಬಲ್ಲ ॥ ೩ ॥

ರಾಗ ಕೇದಾರಗೌಳ ಅಷ್ಟತಾಳ

ಸುರಪತಿ ಎಂದುದ ಕೇಳುತ್ತ ನಸುನಗು । ತರುಹಿದನಂತಕನು ॥ ಮುರನರಕಾಸುರರುಭಯರ ಜೀವಿಗಳ್ । ಹರಿತಂದುದೆಮ್ಮಲ್ಲಿಗೆ ॥ ೧ ॥ ಒಸಗೆಯ ನಾನಿನಗುಸಿರಬೇಕೆನ್ನುತ್ತ । ಕುಶಲದಿ ಬಂದೆನಯ್ಯ ॥ ಕುಸುಮನೇತ್ರನು ಮೊನ್ನೆ ದಿನವೆ ಸುಹರಿಸಿದ । ನಸುರರನೆಲ್ಲರನ್ನು ॥ ೨ ॥ ತರಣಿಜನೆಂದುದ ಕೇಳುತ್ತ ಸುರಪಾಲ । ಹರುಷಾಬ್ಧಿಯೊಳು ಮುಳುಗಿ ॥ ದುರುಳರ ಹನನವ ಗೆಯ್ದನೆ ಶ್ರೀಹರಿ । ಕರುಣದಿ ಭಳಿಭಳಿರೆ ॥ ೩ ॥ ಸುರತರು ಹಯ ಗಜ ಧೇನು ಕುಂಡಲಗಳ । ದುರುಳನೊಯ್ದಿರ್ಪುದನು ॥ ತಿರುಗೆಮ್ಮ ನಗರಿಗೆ ಕಳುಹಲಿಲ್ಲೈ ಹರಿ । ಪರಿಗಳನರುಹಿರಯ್ಯ ॥ ೪ ॥

ರಾಗ ಮಾರವಿ ಏಕತಾಳ

ಅನಿಮಿಷಪಾಲಕನೆಂದುದ ಕೇಳುತ । ಅನಲನಂ ಕೈಮುಗಿದು ॥ ದನಂಜ
ವಶದೊಳಗಿರುತಿಹ ವಸ್ತುವ । ಚಿನುಮಯನೊಯ್ದಿಹನು ॥ ೧ ॥ ಹಿಂ
ಸತ್ರಾಜಿತನನಂಜನ ಮಣಿಯನಂ । ನಂದಜ ಯುಕ್ತಿಯೊಳಂ ॥ ಬಂಧಿಸಿ ಸೆ
ದುದನರಿಯೆಯಂ ಸಿಕ್ಕಿದ । ನೆಂದಿಗು ಕೊಡನವನು ॥ ೨ ॥ ವರ ವೈಶ್ವಾನರನಿ
ಪರಿಯುಸಿರಲು । ಮರುತನು ನಸುನಗುತ ॥ ಮುರುಳಿ ಧನಂಜಯು ಶರಣ
ವಸ್ತುವ । ಮುರಹರ ಕೊಳ್ಳುವನೆ ॥ ೩ ॥ ಜಲರುಹನೇತ್ರನಂ ಖಳನೊಶವಿರ
ತಿಹ । ಸುಲಲಿತವಸ್ತುಗಳ ॥ ಬಲವೈರಿಯೆಂ ಕೇಳ್ ಕಳುಹುವ ನಿನ್ನೆಡೆ ।
ಗೊಲಿದೀ ಕ್ಷಣ ದಯದಿ ॥ ೪ ॥

ವಾರ್ಧಿಕ

ಸುರಪ ಯೋಚಿಸುತಂದಿನಿರುಳ ಕಳೆಯುತ್ತಿರಲ್ । ನರಕಾರಿ ಸಂತಸದೊ
ಳರುಣನುದಯಂದೊಳೆದ್ದು । ವಿರಚಿಸುತ ನಿತ್ಯಾನುಷ್ಠಾನ ಕರ್ಮಂಗಳಂ ತರು
ಯರನೊಡಗೊಳ್ಳುತ ॥ ಸರಸಸವಿನುಡಿಯಾಟಪಾಟಲೀಲೆಗಳಿಂದ । ಸ್ಮರಕೇಳಿ
ಚುಂಬನಾಲಿಂಗನಂಗಳ ಗೆಯ್ದು । ಭರಿತಸಂತೋಷದಿಂದೋಲಗಕೆ ನಡೆತಂದು
ಮೆರೆದಿರ್ದ ವೈಕುಂಠನು ॥ ೧ ॥

ರಾಗ ನವರೋಜು ಆದಿತಾಳ

ಲೀಲಾಮಾನುಷಧಾರಿ । ಹರಿ । ನೀಲಮೇಘಶರೀರಿ ॥ ಖೂಳಕೈಟಭ ಕಂಸ
ನರಕಸಂಹಾರಿ । ಪಾಲಿತಸುಮನಸಮೌಳಿಮಂದಾರಿ ॥ ೧ ॥ ಲಲನೆಯರೆಲ್ಲರ
ಕೂಡಿ । ಅತಿ । ಚೆಲುವ ಕೃಷ್ಣನು ಪ್ರೌಢಿ ॥ ಘಲಂ ಘಲು ಎಂಬ ಕಾಲ್ಗೆಜ್ಜೆ ಯ
ರವದೊಳು । ನಲಿಯುತ ಒಲಿಯುತ ಬಂದ ಮುರಾರಿ ॥ ೨ ॥ ಗಳದೊಳ್
ಕೌಸ್ತುಭಮಾಲಾ । ಪೊಸ । ಪೊಳೆವ ಪೀತದುಕೂಲ ॥ ನಳಿದೋಳ ಬಾಪುರಿ
ಕಂಕಣೋಡ್ಯಾಣವು । ತಿಲಕ ಕಸ್ತೂರಿಯು ವೇಣುಗೋಪಾಲ ॥ ೩ ॥ ಮುರಲೀ
ನಾದವ ತೋರಿ । ಸ್ಮರ । ನುರುಬೆಯ ಮೋಹವ ಬೀರಿ ॥ ತರುಣಿಯರೆಲ್ಲರ
ಮರುಳುಗೆಯ್ಯುತ ರೂಪ । ಮೆರೆಸುತ ತೋರುತ ಬಂದನು ಮುರಹರ ॥ ೪ ॥

ರಾಗ ಕೇದಾರಗೌಳ ಅಷ್ಟತಾಳ

ಈ ರೀತಿಯೊಳು ಲಕ್ಷ್ಮೀರಮಣನಾನಂದದಿ । ನಾರಿಯರೊಡನೆ ಬಂದು ॥
ಸಾರಿ ಸಿಂಹಾಸನವೇರಿ ಮಂದಿರುತಿಹ । ದಾರುಕನೊಡನೆಂದನಂ ॥ ೧ ॥ ಸಾರಥಿ
ಪೋಗಯ್ಯ ಸುರಪುರಕೀಕ್ಷಣ । ಧೀರ ಶಚೀಂದ್ರನೊಳು ॥ ಕ್ರೂರನರಕದೈತ್ಯ
ಗೆಯ್ದು ಸಂಗ್ರಾಮವ । ಭೂರಿವಸ್ತುಗಳೆಲ್ಲವ ॥ ೨ ॥ ಸೆಳೆದುಕೊಂಡೊಯ್ದಿ ದ
ನದನು ನಾನೀಗಳು । ಖಳನ ಸಂಹರಿಸಿ ತಂದು ॥ ನಿಳಯದೊಳಿರಿಸಿಹೆ ಬಂದ

ನೆಲ್ಲವ । ಫಳಿಲನೆ ಒಯ್ಯುವೆಂದು ॥ ೩ ॥ ಪುರುಹೂತನನು ಬೇಗ ಕರೆತಾರೆಂದೆನಲಾಗ । ಲೆರಗುತ್ತ ದಾರುಕನು ॥ ತೆರಳೆ ಶಚೀಂದ್ರನಂ ಓಲಗದೊಳಗಿರೆ । ಹರುಷದೊಳಿಂತೆಂದನು ॥ ೪ ॥

ರಾಗ ಮುಖಾರಿ ಆದಿತಾಳ

ಪುರುಹೂತ ಲಾಲಿಸೆನ್ನ ನುಡಿಯಂ । ಸುಮನಸರೊಡೆಯ ॥ ಪುರುಹೂತ ಲಾಲಿಸೆನ್ನ ನುಡಿಯಂ ॥ ಪ ॥ ದುರುಳತ್ವದಿಂದ ನರಕಾಸುರನು । ನಿನ್ನರಮನೆಯಂ। ಸಿರಿಯಂನೆಲ್ಲವನೊಯ್ದಿರ್ಪುದನ್ನು ॥ ಹರಿಯು ಚಿತ್ತವಿಸಿಯೆ ಸಮರದಿ ದುರುಳನ । ಶಿರವರಿದುಚ್ಚೈಶ್ರವವೈರಾವತ । ಮೆರೆವ ಕಲ್ಪದ್ರುಮ ಮೊದಲಾಗಿಹುದನಂ । ಹರುಷದಿ ಮಥುರಾಪುರದೊಳಗಿರಿಸಿಹ॥ ಪುರುಹೂತ ॥ ೧ ॥ ಕರುಣದೊಳೀವೆ ತಾನೆಂದೆನುತ ಇಂದ್ರನ ಬೇಗ । ಕರೆದುತಾರೆಂದೆನ್ನ ತ್ವರಿತ ॥ ಮುರಹರ ಕಳುಹಲು ತವಕದಿ ಬಂದೆನು । ತೆರಳಿ ಬಾರೈ ಮಥುರಾಪುರಕೀ ಕ್ಷಣ । ಕರುಣೆಗಳರಸನ ನೇಮದಿ ನಿನ್ನಯ । ಪರಿ ಪರಿ ವಸ್ತುವ ತರುವರೆ ಏಳೈ ॥ ಪುರುಹೂತ ॥ ೨ ॥

ರಾಗ ಕೇದಾರಗೌಳ ಝಂಪೆತಾಳ

ದಾರುಕನ ನುಡಿ ಕೇಳುತ । ಸುರರಾಜ । ಭೂರಿತೋಷವ ತಾಳುತ ॥ ಕ್ರೂರ ಪಾಪಿಯ ತರಿದನೆ । ದಿವಿಜರಿಗೆ । ಮಾರಪಿತ ಸುಖವಿತ್ತನೆ ॥ ೧ ॥ ಬರುವೆ ನಾನೀಗಳೆನುತ । ಶಚಿವರನು । ಪೊರಟನಾ ಕ್ಷಣದಿ ನಗುತ ॥ ಭರದಿಂದ ಮಥುರ ಪುರಿಗೆ । ನಡೆತಂದ । ಹರಿಯಿರ್ಪ ನಿಳೆಯದೆಡೆಗೆ ॥ ೨ ॥ ವಜ್ರಮಯಕುಡ್ಯಗಳನು । ಮಧ್ಯದೊಳ್ । ಪ್ರಜ್ವಲಿಪ ಗೋಪುರವನು ॥ ವಜ್ರಿ ಕಾಣುತ ಹರುಷದಿ । ಶ್ರೀಹರಿಯು । ಸಜ್ಜೆಯೊಳು ಕಾಂಬ ಮನದಿ ॥ ೩ ॥ ದ್ವಾರಪಾಲರ ದಾಂಟುತ । ಅರಮನೆಯ । ಭೂರಿ ಶೋಭೆಯ ಕಾಣುತ ॥ ಸಾರಿ ಬರುತಿರಲಿಂದ್ರನು । ವಿಷ್ಟರದಿ । ಮಾರಪಿತನಿರೆ ಕಂಡನು ॥ ೪ ॥

ವಾರ್ಧಿಕ

ಪರಮಜ್ಯೋತಿರ್ಮಯ ಪುರಾಣಪುರುಷೋತ್ತಮಂ । ತರಣಿಕೋಟಿಸಹಸ್ರ ತೇಜ ಮುಖಪದ್ಮದೊಳ್ । ಮೆರೆವ ಕಸ್ತುರಿತಿಲಕ ನೊಸಲ ನವಮೌಕ್ತಿಕದಿ ಮುರಲಿನಾದವ ಗೆಯ್ಯುತ ॥ ತರುಣಿಗಣಪರಿವೇಷ್ಟಿತಾಂಗ ಶ್ರೀಗೋವಿಂದ । ವರ ರತುನಮಯ ಸಿಂಹವಿಷ್ಟರದಿ ಮಂಡಿಸಿರೆ । ಹರುಷಶರಧಿಯೊಳಾಡಿ ಶಚಿವರನು ಭಕ್ತಿಯೊಳ್ ಸಾಷ್ಟಾಂಗದಿಂದೆರಗುತ ॥ ೧ ॥

ಭಾಮಿನಿ

ಜಯ ನಮೋ ಜಗದಾದ್ಯ ಜಗದಾ । ಶ್ರಯ ನಮೋ ಜಗದೀಶ ಜನನ ।

ವ್ಯಯಂ ನಮೋ ಜಗದಾದಿವಿಗ್ರಹ ದೇವ ಕಂಸಾರಿ ॥ ಜಯ ಜಗಜ್ಜೀವನ ನಿರಾ
ಮಯ । ಜಯ ಜಗತ್ಪಾವನ ಗುಣೋದಯಂ । ಜಯ ನಮೋಸ್ತು ನಮೋಸ್ತು
ಜಗದಾತ್ಮಕ ಜಗನ್ಮಯನೆ ॥ ೧ ॥

ಕಂದ

ಕರಗಳ ಜೋಡಿಸಿ ಸುರಪತಿ । ಹರುಷದಿ ಭಜಿಸಲ್ ಕರುಣದಿ ಪೊಗಳಂತ
ಶ್ರೀಹರಿ ॥ ದುರುಳನ ದೆಸೆಯಿಂ ಸುಮನಸ । ಸರಣಿಯು ದಣಿದುದೆ ವ್ಯರ್ಥ
ದೊಳೆನಲವನೆಂದಂ ॥ ೧ ॥

ರಾಗ ಭೈರವಿ ಆದಿತಾಳ

ದುರುಳ ನರಕನಿಂದ ತರುಣೀಸುತರನೆಲ್ಲ । ಗಿರಿಗುಹೆಯೊಳಗಿಟ್ಟು ಮರು
ಗುತ್ತ ನಾವು ॥ ೧ ॥ ಚರಿಸಿದೆವೈ ದೇವ ಕರುಣದಿ ಖಳರನ್ನು । ತರಿದೆಮ್ಮ
ಸಲಹಿದೆ ಪರಮದಯಾಳು ॥ ೨ ॥ ದೇವರ ದೇವ ನಿನ್ನಾತ್ಮಜರಾದೆಮ್ಮ ।
ಕಾಯುವರಾರಯ್ಯ ಶ್ರೀರಮಾಧವನೆ ॥ ೩ ॥ ಎಂದು ಸನ್ನುತಿ ಗೆಯ್ಯೆ ನಂದ
ಗೋಪಜನಾಗ । ಚೆಂದದಿಂದಪ್ಪಿ ಮನ್ನಿಸುತ ಪೇಳಿದನಂ ॥ ೪ ॥

ರಾಗ ಕಾಪಿ ಅಷ್ಟತಾಳ

ಕೇಳಯ್ಯ ಬಲವೈರಿ ಪೇಳುವ ನುಡಿಯಂ । ಖೂಳರ ತರಿದೆನು ಬಿಡು ನಿನ್ನ
ವ್ಯಥೆಯಂ ॥ ಶೀಲ ನೀ ಕೊಳ್ಳಯ್ಯ ಮದಗಜಾಶ್ವಗಳ । ಮೇಲಾದ ಸುರತರು ।
ಖಳನೊಯ್ದ್ದ ವಸ್ತುಗಳ ॥ ೧ ॥ ಧೇನು ಮುಂತಾದುದನೀಯಲಾ ಕ್ಷಣದಿ । ದೀನ
ರಕ್ಷಕನನ್ನು ಪೊಗಳುತ್ತ ಮುದದಿ ॥ ದಾನವಾಂತಕ ನೀನು ಕೇಳೆನ್ನ ಮಾತ ।
ಮಾನನಿಧಿಯೆ ಪೇಳ್ವೆ ಮೂಲೋಕಖ್ಯಾತ ॥ ೨ ॥ ದೇವ ನೀನೆನ್ನಯ ಪುರಕಾಗಿ
ಬಂದು । ಸೇವೆಯನವಧರಿಸಯ್ಯ ಗುಣಸಿಂಧು ॥ ಪಾವನಾತ್ಮಕನೆನ್ನ ಗೃಹವನ್ನು
ದಯದಿ । ರಾವಣಾರಿಯೆ ರಂಜನೆಯ ಗೆಯ್ಯೊ ಮುದದಿ ॥ ೩ ॥ ಸುರರಾಜ
ನಿಂತು ಸನ್ನುತಿಗೆಯ್ಯಲಾಗ । ನರಹರಿ ತಥಾಸ್ತ್ವೆಂದು ಉಸಿರುತ್ತ ಬೇಗ ॥ ಸುರ
ನಗರಿಗೆ ಪೋಪ ಮನಮಾಡಲಂದು । ತರುಣಿಯು ಸತ್ಯಾಭಾಮಕಿ ಬೇಗ ಬಂದು

ರಾಗ ಬೇಗಡೆ ತ್ರಿವುಡೆತಾಳ

ಸ್ಮರನರಗಿಣಿಯಂತೆ ಬಂದಳೊಯ್ಯಾರಿ । ಕಿರುನಗೆ ನಗುತಾಗ ಮೋಹನ
ಕಾರಿ ॥ ಸರಸಿಯೊಳ್ ನಲಿವ ಹಂಸನ ಗತಿ ಮೀರಿ । ಮರಿದುಂಬಿಗುರು
ಗೋಪಾಲನ ನಾರಿ ॥ ಉರುತರಾಕ್ಷಿಗಳೆಂಬ ಸರಳನು । ಪರಮ ಭ್ರೂಧನುವಿಂ
ಪೂಡುತ । ಪರಿಕಿಸುವ ವಿಟಮೃಗಗಳುದರವ । ಪರಮ ರೋಷದಿ ಸೀಳ್ವ
ತರುಣಿಯು ॥ ೧ ॥

ರಾಗ ಸೌರಾಷ್ಟ್ರ ಮಟ್ಟೆತಾಳ

ಭೂವರೇಣ್ಯ ಕೇಳು ಮುಂದದಲಿ । ಅಮರಪುರಿಗೆ । ದೇವ ಪೊರಡಲಂದು ಭರವಲಿ ॥ ಪ ॥ ದೇವರಾಜನೊಡನೆ ತೆರಳುವ । ನೆಂದು ಸತ್ಯ । ಭಾವೆ ಪಿಡಿದು ಹರಿಯ ಚರಣವ ॥ ಸೋವ ತಿಳಿಸದಿಸಿತು ರಾ । ಜೀವನೇತ್ರ ಜೊತೆಯನಗಲಿ । ಭಾವಕಿಯರ ಮನೆಗೆ ಪೋಪೆಯ । ಬಲ್ಲೆ ಬಲ್ಲೆ । ದೇವ ಎನ್ನ ಬಿಟ್ಟು ತೆರಳ್ವೆಯ ॥೧॥ ಎನುತ ಸತ್ಯಭಾಮೆ ನುಡಿಯಲು । ಕೇಳ್ದು ಮಂದದಿ । ವನಧಿಶಯನ ನಗುತಲಾಗಳಂ ॥ ಮುನಿಸು ಬೇಡ ಸುದತಿ ನಾನು । ಅನಿಮಿಷೇಂದ್ರನಿಳೆಯಕೀಗ । ಘನತೆಯಿಂದ ಪೋಪ ಮನದೊಳಂ । ಪೊರಟೆ ನಾನು । ವನಿತೆಯರ ಮೋಹಕಲ್ಲವು ॥ ೨ ॥

ವಾರ್ಧಿಕ

ಕರುಣನಿಧಿ ನಿನ್ನೊಡನೆ ಬರುವೆನಮರಾವತಿಗೆ । ಹರುಷದಿಂದೊಡಗೊಂಡು ಪೋಗೆನಲ್ ಮುರಹರಂ । ತರುಣಿಯಂ ಬರಸೆಳೆದು ಚುಂಬಿಸುತ ಜೊತೆಗೊಂಡು ತೆರಳಿದಂ ಸುರನಗರಕೆ ॥ ಪರಿಯ ಕರಮಂ ಪಿಡಿದು ಬಲವೈರಿ ವೇಗದಿಂ । ದರಮನೆಯ ಪೊಗಿಸಿ ಸಿಂಹಾಸನದಿ ಕುಳ್ಳಿರಿಸಿ । ಪರಮ ಸಂತಸದಿಂದ ಮನ್ನಿಸುತಲಡಿಗಡಿಗೆ ಚರಣಸೇವೆಯ ಗೆಯ್ಯುತ ॥ ೧ ॥

ರಾಗ ನಾದನಾಮಕ್ರಿಯೆ ಅಷ್ಟತಾಳ

ತ್ರಿದಶಾಧಿಪತಿ ತೋಷ ತಾಳುತ್ತ । ವಿಧ । ವಿಧವಾದ ಸೇವೆಯ ಗೆಯ್ಯುತ್ತ॥ ಮುದದಿ ಷಡ್ರಸಯುಕ್ತ ಭೋಜ್ಯದಿ । ಹರಿ । ಗಧಿಕ ಸಂಪ್ರೀತಿಯೊಳ್ ಕುಶಲದಿ ॥ ೧ ॥ ಅರಿಯ ಸಂಹರಿಸಿದಾನಂದದಿ । ಪುರಂ । ದರನು ನಿರ್ಜರರ ಸಮ್ಮೇಳದಿ ॥ ಪರಿವಿಡಿದಾಗ ಸುಸ್ತುತಿಸುತ್ತ । ಸುರ । ತರುಣಿಯರ್ ನಾಟ್ಯವ ಗೆಯ್ಸುತ ॥ ೨ ॥ ಸರಿಗಮಪಧನಿಸವೆನ್ನುತ್ತ । ತರ । ತರದ ಸಂಗೀತವ ಪಾಡುತ್ತ ॥ ತರುಣಿ ಮೇನಕೆ ತಿಲೋತ್ತಮೆಯರು । ಮುಖ್ಯ । ಸುರತಕಲಾ ಕೋವಿದೆಯರು ॥ ೩ ॥

ರಾಗ ಯರಕಲಕಾಂಭೋಜಿ ಏಕತಾಳ

ನಟಿಸಿದರಬಲೆಯರು । ಸಂತಸದಿ । ನಟಿಸಿದರಬಲೆಯರು ॥ ಪ ॥ ನಟನೆಯ ಗೆಯ್ಯುತ್ತ । ಕುಟಿಲತೆಯಿಂದಲಿ । ಪಟುಕುಸಟಿಕಿನಿಂಪಡಿಯಿಡುತೊಯ್ಯನೆ ॥ ಅ ॥ ರಘಣರಘಣರೆನ್ನುತಲಿ । ವಯ್ಯಾರದಿ । ಕುಣಿವ ಕಾಲ್ಗೆಜ್ಜೆಯುಲಿ ॥ ಫಣಿರಾಜಶಯನನ । ಗುಣಗಳ ಪೊಗಳುತ್ತ । ಪೂರ್ಣಿಮೆಚಂದಿರಕಾಂತಿ ಗಣಿಕಾಂಗನೆಯರು ॥ ನಟಿಸಿದರಬಲೆಯರು ॥ ೧ ॥ ಉರಗವೇಣಿಯೊಳೊಪ್ಪುವ । ಪುಷ್ಪ

ಗಳಲ್ಲಿ । ಮೆರೆವಾಳಿರ್ಶ್ಶೋಂಕೃತವ ॥ ವರ ಶ್ರುತಿಗಳ ಗೆಯ್ದು । ಗುರಂಪಯೋಧರಮಧ್ಯಾ । ಪರಿವಿಡಿದಲುಂಗುವ । ಸರದಾಳಿ ತಾಳದಿ ॥ ನಟಿಸಿದರಬಲೆಯರು ॥ ೨ ॥ ವಾಮಹಸ್ತವ ಮೋದದಿ । ಬಳುಕುತಿಹ । ಕಾಮಿನಿ ಕಟಿದೇಶದಿ ॥ ಪ್ರೇಮಂದೊಳಿರಿಸುತ್ತ । ರಾಮಣೀಯಕನೇತ್ರ । ಕಾಮಬಾಣದಿ ಸಂರ । ಸ್ತೋಮವ ಸವರುತ್ತ ॥ ನಟಿಸಿದರಬಲೆಯರು ॥ ೩ ॥

ರಾಗ ಮಧುಮಾಧವಿ ತ್ರಿವುಡೆತಾಳ

ತರುಣಿಯರ ನಟನೆಯನು ಕಾಣುತ । ಹರಿಯು ಸಂತೋಷದಲಿ ವೀಕ್ಷಿಸುವ । ಕರುಣಿಸಲು ನಮಿಸುತ್ತ ತೆರಳಿದ । ರಂದು ಗೃಹಕೇ ಹರುಷದಿ ॥ ೧ ॥ ದೇವ ಮಾತೆಗೆ ಕುಂಡಲಂಗಳ । ದೇವನಿತ್ತುಪಚರಿಸಿ ಹರುಷದಿ । ಭಾಮೆಯುಳ ಜೊತೆಯೊಳಗೆಯಿರ್ದನು । ಪಾವನಾತ್ಮಕ ನಿಶಿಯೊಳು ॥ ೨ ॥ ಮರುದಿವಸ ಹರಿ ತನ್ನ ನಿಳಯಂಕೆ । ತೆರಳಬೇಕೆಂದೆಂಬ ತವಕದಿ । ಸುರಪತಿಯು ಪೊಗಳುತ್ತ ಪೊರಟನು । ತರುಣಿಸಹಿತಾ ವೇಗದಿ ॥ ೩ ॥ ಬರುತಿರುವ ಮಾರ್ಗದಲಿ ನಂದನ । ವನವು ಶೋಭಿಸುತಿರಲು ಕಾಣುತ । ತರುಣಿಯುಳ ಕರವಿಡಿದು ಪೊಳಯಿಕೆ । ಪೊಕ್ಕನಂದು ಶ್ರೀಹರಿ ॥ ೪ ॥

ಭಾಮಿನಿ

ಹೊತೆಸೆವ ಸಂಪಿಗೆಯು ಬಕುಳವು । ಕೇತಕಿಯು ಪುನ್ನಾಗ ಕುಸುಮಿತ । ಚೂತ ವರ ಖರ್ಜೂರವರಳಿನಶೋಕ ವಲ್ಲಿಗೆಯು ॥ ಬೀತ ಕದಳೀ ಪೂಗ ಮೊದಲಾ । ಗಾ ತಳೋದರಿಗದನು ತೋರುತ । ಮಾತುಳಾಂತಕ ತೆರಳುತಿರಲಾ ಭಾಮೆ ಪೇಳಿದಳು ॥ ೧ ॥

ರಾಗ ಕೋರೆ ಏಕತಾಳ

ಅತಿ ಮನೋಹರವಾಗಿ ವನವು ಶೋಭಿಪುದು । ಪತಿಯೆ ಕೇಳೆನ್ನಯ ತನು ಪುಬ್ಬುತಿಹುದು । ಅತಿ ಮನೋಹರವಾಗಿ ವನವು ಶೋಭಿಪುದು ॥ ಪ ॥ ನಲ್ಲ ನೀ ಪರಿಕಿಸು ವನದ ಮಧ್ಯದೊಳು । ವಲ್ಲರಿನಿಬಿಡಿತ ದೀರ್ಘ ಶಾಖೆಯೊಳು ॥ ಉಲ್ಲಾಸಗೊಂಬಳಿಗಳ ಸಂದೋಹದೊಳು । ಇಲ್ಲಿ ಶೋಭಿಪ ತರು ಬಹು ವಿಚಿತ್ರದೊಳು ॥ ಅತಿ ಮನೋಹರವಾಗಿ ॥ ೧ ॥ ಅರವಿಂದಾಕ್ಷನೆ ಪೇಳೀ ತರುವಾವುದೆಂದು । ಧರೆಯೊಳೆಲ್ಲಿಯು ಕಾಣೆ ಕೇಳ್ ಗುಣಸಿಂಧು ॥ ಸುರಪುರ ತುಂಬಿದೆ ಪರಿಮಳದಿಂದು । ಸೆರಗೊಡ್ಡಿ ಬೇಡುವೆ ಪೇಳ್ ದೀನಬಂಧು ॥ ಅತಿ ಮನೋಹರವಾಗಿ ॥ ೨ ॥ ವರ ಮನೋಹರೆ ಕೇಳೀ ಪಾರಿಜಾತಕವು । ಶರಧಿ ಮಥನದೊಳು ಪುಟ್ಟಿರ್ದ ತರುವು ॥ ಪರಮಪಾವನ ಪುಷ್ಪದಿಂದ ಶೋಭಿ

ಪುದು । ಸುರರಿಗೆಲ್ಲವು ಸಂಪ್ರೀತಿಯಾಗಿಹುದಂ ॥ ಅತಿ ಮನೋಹರವಾಗಿ ॥ ೩ ॥ ದೇವ ಕೇಳಿದನೆನ್ನ ಗೃಹಕೆ ಒಯ್ಯುವೆನು । ಪಾವನಾತ್ಮಕ ನಿನ್ನ ಮನವ ತೋಷಿಪೆನು ॥ ದೇವತರುವನೆಮ್ಮಂಗಳದಿ ರಕ್ಷಿಪೆನು । ಭಾವಕಿಯರಿಗೆಲ್ಲ ಮೇಲೆನಿಸುವೆನು ॥ ಅತಿ ಮನೋಹರವಾಗಿ ॥ ೪ ॥

ಭಾಮಿನಿ

ಬೇಡ ಸಾಕೀ ಮಾತನೆನ್ನೊಡ । ನಾಡದಿರು ವನಪಾಲರರಿತರೆ । ಕೇಡು ಬಹುದೆಲೆ ಕಾಂತೆ ಕಲ್ಪದ್ರುಮದ ಸೇವದಿಂದ ॥ ಮಾಡದಿರು ಸುರರೊಡನೆ ಕದನವ । ಹೂಡದಿರು ನೀನಿದಕೆ ಎನ್ನನು । ಕಾಡದಿರು ನಡೆ ನಡೆ ಎನುತ್ತಿಂತೆಂದನಸುರಾರಿ ॥

ರಾಗ ನೀಲಾಂಬರಿ ಏಕತಾಳ

ಫುಲ್ಲನಯನ ನೀನೇನೆಂದರೂ । ಈ ದ್ರುಮವ ಕೊಳದೆ । ನಿಲ್ಲದಯ್ಯ ಮನವು ಸ್ಥಿರದೊಳು ॥ ವಲ್ಲಭ ನೀನೆನ್ನ ಮರುಕವ । ಶಮಿಸುತ್ತಲೀಗ । ಉಲ್ಲಾಸದೊಳೀಯೊ ವೃಕ್ಷವ ॥ ೧ ॥ ಬೇಡ ಬೇಡ ನಾರಿ ಕೇಳದೆ । ಮೀರ್ದರೆ ಮಾತ । ಕೇಡು ಬಹುದು ಕಡೆಗೆ ಸಾರಿದೆ ॥ ಖೋಡಿತನವ ಮಾಡಲಾಗದು । ನಡಿ ನಡೀಪುರಕೆ । ಗಾಢದಿಂದ ಪೋಪರೀಗಳು ॥ ೨ ॥

ರಾಗ ಕೇದಾರಗೌಳ ಝುಂಪೆತಾಳ

ಎರೆಯ ಕೇಳೆನ್ನ ಮನೆಯ । ಮುಂದಿರ್ಪ । ಸುರುಚಿರೋದ್ಯಾನದೆಡೆಯ ॥ ತರುವ ನೆಡುವೆನು ಮುದದಲಿ । ನಿನ್ನೊಡನೆ । ಮೆರೆವೆನನುದಿನ ಸುಖದಲಿ ॥ ॥ ೧ ॥ ಎನೆ ಕೇಳಿ ಗೋವಿಂದನು । ಸತಿ ನಿನ್ನ । ಮನದಂತೆ ಮಾಡೆಂದನು ॥ ಎನಗೇನು ಕೊರತೆಯಿಲ್ಲ । ಮುಂದಹುದ । ನನುಭವಿಸು ಸಟೆಯಿದಲ್ಲ ॥ ೨ ॥ ಪತಿಯ ನುಡಿಗಾಗ ತರುಣಿ । ಮುದದಿಹ । ವ್ಯಥೆ ನೋಳ್ಪೆ ಚಕ್ರಪಾಣಿ ॥ ಹಿತದಿ ಕೊಂಡೊಯ್ವೆನೆಂದು । ವೃಕ್ಷವನು । ಅತಿ ಜವದಿ ಕಿತ್ತಳಂದು ॥ ೩ ॥ ಅನಿತರೊಳು ವನಪಾಲರು । ಬಿಡು ಬಿಡೆಂ । ದೆನುತ ಬಹು ಪರಿ ಪೇಳ್ದರು ॥ ವನಿತೆ ಕೊಡು ಕೊಡು ಎನ್ನುತ । ಮುಂಬರಿದು । ವಿನಯದಿಂದಡಗಟ್ಟುತ ॥ ॥ ೪ ॥ ತರುಣಿ ಮುಂಬರಿದಾಗಳು । ಧಿಕ್ಕರಿಸಿ । ತರುಸಹಿತಲಯ್ದುತಿರಲು ॥ ಹರಿಯು ಸತಿಯೆಂದು ಚರರು । ಸಂಗರವ । ವಿರಚಿಸದೆ ಸುಮ್ಮನಿರಲು ॥ ೫ ॥ ಹರಿ ಸತ್ಯಭಾಮೆ ಸಹಿತ । ಪಟ್ಟಣಕೆ । ತಿರುಗಿ ಪೋಪುದ ಕಾಣುತ ॥ ಸುರಪನೆಡೆಗಾಗ ಚರರು । ದುಗುಡದೊಳು । ತೆರಳಿ ಬಂದಾಗೊರೆದರು ॥ ೬ ॥

ರಾಗ ಸಾರಂಗ ಅಷ್ಟತಾಳ

ಸುರರಾಜ ಲಾಲಿಸಯ್ಯ । ಪೇಳ್ವುದನೆಲ್ಲ । ಕರುಣದೊಳೀಗ ಜೀಯ ॥ ಪ ॥ ದೇವ ನಿನ್ನಯ ಸಿರಿನಂದನವನದೊಳು । ವರ ಪಾರಿಜಾತವು ಪರಮಪಾವ

ತರು ॥ ಅ ॥ ಹರಿಪೇಳಿಹದರಸಿ ತಾನು । ಸತ್ಯಭಾಮಾ । ದುರುಳತ್ವದಿಂ
ದನಂ ॥ ಧರಣಿಗೆ ಕೊಂಡೊಯ್ವೆನೆಂದು ಕಿತ್ತುದ ಕಂಡು । ಒರೆದೆವು ಬೇ
ಬೇಡೆಂದು ಸಾರುತ ನಾವು ॥ ೧ ॥ ದಿಂಡೆತನದೊಳವಳು । ಕೋಪದಿ ನವ್ಮ
ದಂಡಿಸಂತಲೆ ಮುಳಿದಳಂ ॥ ಗಂಡನೊಡನೆ ರಥವೇರಿ ಗರ್ವದಿ ವೃಕ್ಷ । ಕೊಂಡ
ಪೋದಳು ತ್ರಿಮಂಡಲಾಧಿಪ ಕೇಳು ॥ ೨ ॥

ರಾಗ ಘಂಟಾರವ ಏಕತಾಳ

ಚರರು ಪೇಳಿದ ನುಡಿಗಳ ಲಾಲಿಸಿ । ಸುರಪ ಕಿಡಿಕಿಡಿಯಾಗಿ ವಜ್ರವ । ತಿರ
ಹುತಾ ಕ್ಷಣವೆಂದನು ॥ ೧ ॥ ಅರರೆ ನಮ್ಮುಪವನದೊಳಗಿರುತಿಹ । ತರುವ
ತನ್ನಧಿಕಾರದಿಂದಲೆ । ತರುಣಿಯೊಯ್ದಳೆ ಭಾಪುರೆ ॥ ೨ ॥ ವಾರಿಜಾಕ್ಷನ ಪತ್ನಿ
ತಾನೆಂಬಹಂ । ಕಾರದಿಂದಲೆ ಕೊಂಡುಪೋದಳೆ । ಮಾರಮಣಗ್ಗಿತವಾದುದೆ ॥
॥ ೩ ॥ ಕರೆಯಿರೀ ಕ್ಷಣ ದಿಗುಪಾಲರೆಲ್ಲರ । ಸುರರ ಬಲ ಪೊರಮಡಲಿ ಸುದ
ತಿಯು । ಗರುವ ನಿಲಿಪೆನು ಕ್ಷಣದಲಿ ॥ ೪ ॥ ಎನೆ ಶಚೀಂದ್ರನೇಮವ ಕೇಳಿ
ಚಾರರು । ಘನ ಜವದಿ ಕರೆಯಲ್ಕೆ ದಿಗಧಿಪರ್ । ತ್ವರಿತದೊಳಗಬ್ಬಂದರು ॥

ರಾಗ ಕೇದಾರಗೌಳ ಅಷ್ಟತಾಳ

ಹರಿತಂದ ವರುಣಾಗ್ನಿ ತರಣಿಜ ಮಾರುತ । ನಿರ್ಋತಿ ಧನಪತಿಯು ॥ ಪರಿ
ಕಿಸುತೆಲ್ಲರ್ಗೆ ಪೇಳ್ದನು ಸುರಪತಿ । ತರುಣಿ ಗೆಯ್ದುದನೆಲ್ಲವ ॥ ೧ ॥ ಅರಿತಿರ
ಸಂತಾನತರುಪಾರಿಜಾತವ । ದುರುಳೆ ಕದ್ದೊಯ್ದಿದಳಂ ॥ ತೆರಳಬೇಕೀ ಕ್ಷಣ
ಶಿರವರಿದಾಕೆಯು । ದ್ರುಮವನ್ನು ತಹರೆ ಬೇಗ ॥ ೨ ॥ ಏಳಿರೇಳೆನಲಾಗ ದಿಕ್ಪಾಲ
ರೆಲ್ಲರು । ತಾಳುತ್ತ ರೋಷವನ್ನು ॥ ಪಾಳೆಯಸಹಿತ ದುಂದುಭಿಯ ಘೋಷ
ಗಳಿಂದ । ಕಾಳಗ ಮನದೊಳಗೆ ॥ ೩ ॥

ಭಾಮಿನಿ

ಏರಿದನು ಟಗರನು ಹುತಾಶನ । ನೇರಿದನು ಮಹಿಷನನು ಯಮ ನೆಗ ।
ಳೇರಿದನು ವಾರುಣನು ಪುರುಷನ ನಿಋುತಿಯಾ ಕ್ಷಣದಿ ॥ ಏರಿದನು ಎರಳೆ
ಯನು ಮಾರುತ । ನೇರಿದನು ತುರಗವ ಕುಬೇರನು । ಏರಿಯೈರಾವತ
ಶಚೀಂದ್ರನು ತೆರಳೆ ರೋಷದಲಿ ॥ ೧ ॥

ವಾರ್ಧಿಕ

ಪಿಡಿದು ತಂತಮ್ಮಾಯುಧಂಗಳು ರೋಷದಿಂ । ನಡೆದು ದಿಕ್ಪಾಲಾದಿಸುಮ
ನಸರ ಸೇನೆಗಳ್ । ಬಡಬಶಿಖಿಗಿದಿರಾಗಿ ಬರುವ ತೂಲಾದ್ರಿಯೆನೆಪೊಡವಿಪಥಮ
ಪಿಡಿವುತ ॥ ಮಡದಿಯನ್ನೊಡಗೊಂಡು ಪುರಿಯ ಮಾರ್ಗದಿ ಪೋಪ । ಕಡ

ಶಯುನನ ರಥವಲಿಕ್ಕಿಲದಿ ಸುಮನಸರ್ । ಘುಡುಘುಡಿಸಿ ಕವಿಯುತಿಪರಂ ಕಂಡು ಹರಿಯೊಡನೆ ಜಡಜಾಕ್ಷಿಯಿಂತೆಂದಳು ॥ ೧ ॥

ರಾಗ ಘಂಟಾರವ ರೂಪಕತಾಳ

ಸುರರ ಪಡೆಯನು । ಹರಿಯೆ ಪರಿಕಿಸು । ತರುವ ಕೊಡದೆ ನೀ । ಧುರವ ವಿರಚಿಸು ॥ ಎರೆಯ ನಿನ್ನಯ । ಸತಿಗೆ ತೋಷವ । ಕರುಣದಿಂ ದಯ । ದೋರೊ ಮಾಧವ ॥ ೧ ॥ ಬೇಡವೆಂದರೆ । ಮಾತ ಕೇಳದೆ । ಕೇಡ ತಂದಿಹೆ । ಸಹಿಸು ಹೆದರದೆ ॥ ಮೂಢ ಸುಮನಸ । ರೊಡನೆ ಕಲಹವ । ಮಾಡೆನೆಂದಿಗು । ನೋಡು ಕಾರ್ಯವ ॥ ೨ ॥ ನಿನ್ನ ಬಲದಲಿ । ನಂಬಿ ವೃಕ್ಷವ । ಮುನ್ನ ತಂದೆ ಸಂ । ಪನ್ನ ಕೇಶವ ॥ ತನ್ನ ಸತಿಯಳ । ವ್ಯಥೆಯ ಜಗದೊಳು । ಚೆನ್ನವಾಗಿ ಕಾಂ । ಬಂವರೆ ಪತಿಗಳು ॥ ೩ ॥ ನೋಡೆ ಪೂರ್ವದಿ । ಕಂಸಮುಖ್ಯರ । ಕೂಡೆ ಸಮರದಿ । ಕುಂದಿ ಶಕ್ತಿಯ ॥ ಹೇಡಿಯಾಗಿಹೆ । ಯಾತಕೆನ್ನನು । ಕಾಡು ತಿರ್ಪೆಯೆ । ಏಳಲಾರೆನು ॥ ೪ ॥ ಬಿಡು ಬಿಡಿಂಥ ಜಾ । ಣ್ನುಡಿಗಳೇತಕೆ । ಜಡಜ ನೇತ್ರನೆ । ಸುರರ ವಿಜಯಕೆ ॥ ತುಡುಕಿ ಪೋಗುವ । ದುಂಟೊ ಇಲ್ಲವೊ । ಬೆಡಗು ತೋರ್ಪುದೀ । ಗೇನು ಸಹಜವೊ ॥ ೫ ॥ ಎನ್ನ ಕುವರರ । ತೆರದೊಳಿರ್ಪರ । ನಿನ್ನ ದೆಸೆಯೊಳಾ । ಗೆಯ್ದು ಸಂಗರ ॥ ಗನ್ನಗತಕವ । ಮಾಡಲಾರೆನು । ಕನ್ನೆ ಕೊಡು ಕೊಡು । ಸುರರ ದ್ರುಮವನು ॥ ೬ ॥

ರಾಗ ಸಾವೇರಿ ಆದಿತಾಳ

ಹರಿಯೆಂದ ನುಡಿ ಕೇಳುತ । ಕಂಬನಿದುಂಬಿ । ಒರೆದಳು ಶೋಕಿಸುತ ॥ ಸರಿ ಬಂತೆ ನಿನ್ನ ಮನಸಿಗೆ । ಸತಿಯಳ ಮೋಹ । ತೊರೆವೆಯ ಮುನಿದು ಹೀಗೆ ॥ ॥ ೧ ॥ ಚರಣ ನಂಬಿದ ಭಕ್ತರ । ಪೊರೆಯುವನೆಂಬ । ಬಿರುದುಂಟೆ ಇನ್ನು ನಗಧರ ॥ ಸುರರನ್ನು ಜಯಿಸಿ ತರುವನ್ನು । ಎನಗೀಯದಿರಲು । ತೊರೆವೆನು ಪ್ರಾಣವನ್ನು ॥ ೨ ॥ ಸೆರಗೊಡ್ಡಿ ಬೇಡಿಕೊಂಬೆನು । ವಿಳಯ್ಯ ದೇವ । ಧುರಕೀಗ ದಯದಿ ನೀನು ॥ ಸೆರಗಿನೊಳ್ ಗಂಟಸಿಕ್ಕಿಕೊ । ಸ್ತ್ರೀಹತ್ಯ ಬಹುದು । ಮರೆಯಂ ಮಾತಲ್ಲ ನೋಡಿಕೊ ॥ ೩ ॥

ಭಾಮಿನಿ

ಧರಣಿಪತಿ ಕೇಳಿಂತು ತರುಣಿಯು । ಮೊರೆಯಿಡಲು ಮಾಧವನು ಪೇಳಿದ । ಪರಿಕಿಸಲು ಬೇಡೆನ್ನ ಸುಪ್ಪ್ರನೆ ತರುವನಿತ್ತೀಗ ॥ ತೆರಳು ಸುಮನಸರೊಡನೆ ಸಂಗರ । ವಿರಚಿಪನು ನಾಸಲ್ಲ ಪೂರ್ವದೊ । ಳೊರೆಯಲಿಲ್ಲವೆ ಕೊಡು ಕೊಡೀಕ್ಷಣ ಸಾರಿ ಪೇಳಿದೆನು ॥ ೧ ॥

ರಾಗ ಮಾರವಿ ಏಕತಾಳ

ಕುಂದರೋದ್ಧರನೀಂತೆಂದುಂದ ಕೇಳುತ । ಕುದಿಯುವ ಕೋಪದೊಳು ॥ ಬೆದರಿಕೆಯಿಲ್ಲೆನಗೀ ಕ್ಷಣ ದಿವಿಜರ । ವಧಿಸುವೆ ನೀ ಕೇಳು ॥ ೧ ॥ ಪುರಹರ ನಯ್ತಾರೆ ಧುರದೊಳು ಸೋಲಿಸಿ । ಸುರರನು ಸಂಹರಿಸಿ ॥ ತರುವನು ಕೊಳ್ಳದೆ ಪೋದರೆ ನಿನ್ನಯ । ತರುಣಿಯೆ ಕೇಳ್ ಸಹಸಿ ॥ ೨ ॥ ಅರಸನೆ ಕೊಡುಂ ನೀ ಶಾರ್ಙ್ಗದ ಧನುವನುಂ । ಪರಿಕಿಸುಂ ಸಾಹಸವ ॥ ಸುರರೊಳುಂ ಕೃಪೆಯಿಂರೆ ಮೌನದಿ ಕುಳ್ಳಿರು । ವಿರಚಿಸಬೇಡ್ ರಣವ ॥ ೩ ॥ ತರುಣಿಯು ರೋಷದೊಳಿರುವುದ ಕಾಣುತ । ಮುರಹರನಾ ಕ್ಷಣದಿ ॥ ಧುರದೊಳು ತನ್ನರ್ಧಾಂಶದ ಶಕ್ತಿಯು । ಕರುಣಿಸಿದನು ಮುದದಿ ॥ ೪ ॥ ವನಿತೆಯು ರೋಷದಿ ಕಾಸೆಯ ಬಿಗಿಯುತ । ಧನುವನೆ ಕೊಳ್ಳುತಲಿ ॥ ಇನಯುಗೆ ವಂದಿಸಿ ಪೊರಟಳುಂ ಗರ್ಜಿಸಿ । ಯುನುವರ ಕೆನ್ನುತಲಿ ॥ ೫ ॥ ನಾರಿಯು ಶೌರ್ಯದಿ ಬರುತಿರೆ ಸಮರಕೆ । ಶೂರ ವೈಶ್ವಾನರನು ॥ ಘೋರನೆ ಜ್ವಲಿಸುತ । ತರುಣಿಯ ಸರಿಸದಿ । ಮಾರಾಂತುಸಿರಿದನು ॥

ರಾಗ ಶಂಕರಾಭರಣ ಮಟ್ಟೆತಾಳ

ತರುಣಿ ಭಾಪು ಭಳಿರೆ ಶೂರಪುರುಷರಿದಿರೊಳು । ಮೆರೆವುದಹುದೆ ನಿನ್ನ ಶೌರ್ಯ ಬರಿದೆ ಮದಗಳು ॥ ೧ ॥ ನುಡಿಯ ಕೇಳುತಾಗ ಭಾಮೆ ಕಿಡಿಯ ನುಗುಳುತ । ಫಡ ಫಡೆಲವೊ ಪುರುಷತನವ ತೋರ್ಪೆನೆನ್ನುತ ॥ ೨ ॥ ಬೇಡ ಸಾರ್ದೆ ತರುವನಿತ್ತು ಪೋಗು ಪೋಗೆಲೆ । ಮೂಢೆ ವ್ಯರ್ಥ ಸಾಯಬೇಡ ಮರುಳು ತನದಲೆ ॥ ೩ ॥ ಕೊಡೆನು ಕೇಳೊ ತರುವ ನಿಮಗೆ ಸಾಮದಿಂದಲಿ । ಮೃಡನು ಬರಲಿ ಗೆಲುವೆನೈ ಸಂಗ್ರಾಮಮುಖದಲಿ ॥ ೪ ॥ ಗೊಲ್ಲತರುಣಿ ಕೇಳೆ ನಿನ್ನೊಡನೆ ಧುರದಲಿ । ಮಲ್ಲಸಹಸಿ ಶಿಖಿಯು ಸೋಲ್ವುದುಂಟೆ ಜಗದಲಿ ॥ ೫ ॥

ರಾಗ ಭೈರವಿ ಏಕತಾಳ

ಜಾತವೇದನ ನುಡಿ ಕೇಳಿ । ಲೋಕ । ನಾಥನ ಸತಿ ರೋಷತಾಳಿ ॥ ಪೂತುರೆ ತಾಳೆಂದೆನುತ । ಶರ । ವ್ರಾತವನೆಸೆಯೆ ಗರ್ಜಿಸುತ ॥ ೧ ॥ ಅನಲನು ಬಹ ಶರ ತರಿದು । ಬಹು । ಘನತರದಸ್ತ್ರವ ತೆಗೆದು ॥ ವನಿತೆಗೆ ಎಸೆಯಲ್ ರವದಿ । ಅದ । ಕಿನಿಸಿನೊಳ್ ಮುರಿದಳು ಭರದಿ ॥ ೨ ॥ ಭಾಮೆಯು ತಾಳಿಕೊಳ್ಳೆನುತ । ಪತಿ । ದೇವನಿಗೊಂದಿಸಿ ತ್ವರಿತ ॥ ಕೋವಿದಶರವುಂ ಪೂಡಿ । ರಿಪು । ಸಾವನು ನೆನೆದಳುಂ ಪ್ರೌಢಿ ॥ ೩ ॥

ಭಾಮಿನಿ

ಸೆಳೆದು ಕರ್ಣಾಂತದಲಿ ತರುಣಿಯು । ಪೊಳೆವ ಬಾಣವನೆಸೆಯಲಗ್ನಿಯು ।

ಇಳೆಗೆ ಧೊಪ್ಪನೆ ಬೀಳಲಾ ಕ್ಷಣ ಕಾಣುತ್ತಂತಕನು ॥ ಗರಗರನೆ ತರಿದೀಗ ಳೀಕೆಯ । ಭರಿತ ಶೋಣಿತಗಳನು ಕುಡಿಸುತ । ಮೆರೆಸುವೆನು ಹೆಮ್ಮಾರಿಗಣ ಗಳನೆನುತಲಿದಿರಾದ ॥ ೧ ॥

ರಾಗ ಭೈರವಿ ಅಷ್ಟತಾಳ

ತರಣಿಜ ಬರೆ ಕಾಣುತ್ತ । ಸತ್ಯಭಾಮೆ । ಪರಮ ಕ್ರೋಧವ ತಾಳುತ್ತ ॥ ಭರದಿಂದ ಶರಮಳೆ ಸುರಿಸುತ್ತ ಪೇಳ್ದಳು । ಸರಿ ಸರಿ ಹಿಂದೆನುತ ॥ ೧ ॥ ಶಿರ ವರಿಯದೆ ನಿನ್ನನು । ಪಿಂತಿರುಗಿಯೆ । ತೆರಳುವನಲ್ಲ ನಾನು ॥ ತರುವನ್ನು ಕೊಟ್ಟೀಗ ತರುಣಿ ಪೋಗೆನ್ನುತ್ತಾ । ಶರಗಳ ಖಂಡಿಸಿದ ॥ ೨ ॥ ತರುವಿಗೆ ಬಳುವಳ್ಳಿಯ । ಕೊಂಬೆನು ನಿನ್ನ । ಶಿರವನ್ನು ಕೇಳ್ ಪರಿಯ ॥ ಮರುಳೆ ನೀ ತಾಳಿಕೊಳ್ಳೆನುತಲಿ ಸಾಣೆಯ । ಶರದಿಂದ ಪೊಯ್ದಳಾಗ ॥ ೩ ॥ ಬರುವ ಶರಂಗಳನ್ನು । ಅಂತಕನಾಗ । ತರಿದೊಟ್ಟಿ ಕೆಡಹಿದನು ॥ ಅರಿಭಯಂಕರಿ ಮಹಾ ಕಾಳಿಯಂದದಿ ಭೋ । ರ್ಗರೆಯುತ್ತ ಪೇಳಿದಳು ॥ ೪ ॥

ರಾಗ ಮೋಹನ ಮಟ್ಟೆತಾಳ

ತರಣಿಜಾತ ಕೇಳೊ ನೀನು । ಧರೆಯ ಜನರನೆಲ್ಲರನ್ನು । ಮರುಗಿಸುವೆ ಪಾಪಿ ನಿನ್ನ । ಶಿರವನರಿವೆನು ॥ ೧ ॥ ನರರ ಕುಲದಿ ಪುಟ್ಟಿ ಎನ್ನ । ಪರಮ ದಂಡನೆಗೆ ಸಿಲುಕಿ । ತರುಣಿ ನಿನ್ನ ಶಿಕ್ಷಿಸದೆ । ಬರಿದೆ ಪೋಪೆನೆ ॥ ೨ ॥ ರಕ್ಷೆ ಶಿಕ್ಷೆ ಭಾಗಕೆಲ್ಲ । ಕರ್ತೃವೆನ್ನ ಪತಿಯು ಕೇಳೊ । ಮಕ್ಷಿಕವು ಮದಗಜವ । ಭಕ್ಷಿಪು ದುಂಟೆ ॥ ೩ ॥ ಎಂದ ಮಾತ ಕೇಳಿ ಕಾಲ । ನಂಧಕಾರಿಯಂತೆ ರೋಷ । ದಿಂದ ಖಡ್ಗವೆತ್ತುತಾಗ । ಶಿರಕೆ ಎರಗಿದ ॥ ೪ ॥ ಖಂಡಿಸುತ್ತ ಧರೆಗೆ ಕೆಡಹಿ । ಚಂಡಿ ಸತ್ಯಭಾಮೆ ಗದೆಯ । ಕೊಂಡು ಪೊಯ್ಯೆ ಯಮನು ನೆಲಕೆ । ಮಂಡೆಯಿಕ್ಕಿದ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಇಳೆಗೆ ಮೈಯಿಕ್ಕಿರ್ಪ ಕಾಲನ । ಲಲನೆ ಕಾಣುತ ಶೌರ್ಯದಿಂದಲಿ । ಎಲೆಲೆ ಸುರಕುರಿಗಳಿರ ಸಮರಕೆ । ಬನ್ನಿ ಬೇಗ ॥ ೧ ॥ ಹೆಂಗಸಿನ ಹತಿಯೊಳಗೆ ಸಮ ರದಿ । ಭಂಗಪಟ್ಟಿಹರೊಡನೆ ನಿಮ್ಮನು । ಸಂಗಡಲೆ ಕೂಡಿಸುವೆ ಬೆದರಿಕೆ । ಯಿಲ್ಲ ನಿಮಗೆ ॥ ೨ ॥ ಗಂಡುಸರು ನೀವೀಗಲದರೊಳು । ಚಂಡ ಸುಮನಸರಾಗಿ ಸರಿ ದರೆ । ಹೆಂಡಿರಿಗೆ ಮೋರೆಯನು ತೋರ್ಪಿರೆ । ಭಂಡತನದಿ ॥ ೩ ॥ ಲಲನೆಯೀ ಪರಿಯಿಂದ ಜರೆಯಲು । ಅನಿಲಪಾವಕವರುಣಧನಪ ಮುಖ್ಯರು । ಅನುವರದೊ ಳಿಮಶಿಖಿಗಳುಭಯರು । ಸೋತಮೇಲೆ ॥೪॥ ಧರದಿ ಜಯ ನಮಗಿಲ್ಲವೆನ್ನುತ। ತಿರುಗಿ ಪೋಗಲು ಕಾಣುತಿಂದ್ರನು । ಬೆರಳ ಮೂಗಿನೊಳಿಟ್ಟು ಶೋಕವ । ತಾಳುತಾಗ ॥ ೫ ॥

ರಾಗ ನೀಲಾಂಬರಿ ಆದಿತಾಳ

ಹರ ಹರ ಈ ತರುಣಿಯೊಳು । ತರಣೀಜಾತಾಗ್ನಿಗಳು ॥ ಧುರಧಿ ಸೋತ
ರಯ್ಯೋ ವಿಧಿಯು । ಹರಿಯು ವ ಓಮೆಯೆಂತೊ ॥ ೧ ॥ ಮರುತ ಧನಪ
ಮುಖ್ಯರೆಲ್ಲ । ತರುಣೀಪತಿಗೆ ಬೆದರಿ ॥ ಪುರಕೆ ಪೋದರಯ್ಯ ಇವಳ । ಪರಮ
ಶೌರ್ಯವೇನೊ ॥ ೨ ॥ ತರುವಿನಾಸೆಗಾಗಿ ಬಂದು । ದುರುಳೆ ಕಯ್ಯೊಳಿಂದು ॥
ಬರಿದೆ ನಗೆಗೇಡಾಗಿ ನಾನು । ಪುರಕೀಗೆಂತು ಪೋಪೆ ॥ ೩ ॥ ದುಷ್ಟ ಸತಿಯ
ಗೆಲಲು ನಮ್ಮ । ಅಷ್ಟದಿಕ್ಪಾಲರೊಳು ॥ ಶ್ರೇಷ್ಠನು ಈಶಾನನೋರ್ವ । ಸೃಷ್ಟಿ
ಮೂರ ದಾತ ॥ ೪ ॥ ತರುಣಿಯೊಡನೆ ಸೋತರೆಂಬಾ । ಸುರರವಮಾನವನು॥
ಹರಿಸಿ ಎಮ್ಮ ಸಲಹೊ ಶಿವನೆ । ಭರದಿ ಬಂದು ದೇವ ॥ ೫ ॥ ಮಾರಾರಿ
ನೀನಲ್ಲದೀಗ । ನಾರಿಯನ್ನು ಗೆಲಲಂ ॥ ಸೂರರಿಲ್ಲ ಮೃಡನೆ ಹರನೆ । ಘೋರ
ತ್ರಿಪುರಾಂತಕನೆ ॥ ೬ ॥

ರಾಗ ಕಾಪಿ ಅಷ್ಟತಾಳ

ಅನಿತರೊಳ್ ಭಾಮೆಯು ಕರದಿ । ಇಹ । ಧನುವ್ವಲ್ಲಂಘಿಸುತಾಗ ಮಂದದಿ ॥
ಚಿನುಮಯನೆಡೆಗೈದಿ ರಂಜಿಪ ಕರದೊಳು । ಘನವೇಗ ನಿಲ್ಲಲು ಕಂಡು ಶ್ರೀಹರಿ
ಯಾಗ ॥ ೧ ॥ ಸತ್ಯಭಾಮೆಯು ಕರದಿಂದ । ಈ । ಯುತ್ತಮ ಧನು ಬೇಗ
ಯಿಂದ ॥ ಸುತ್ತಿಕೊಂಡೀಗೆನ್ನ ಕರಕೆ ಬಂದಿಹುದೇಕೆ । ಅತ್ಯಾಶ್ಚರ್ಯಗಳೆಂದು
ಹರಿಯು ತಾ ತಿಳಿದಾಗ ॥ ೨ ॥ ಕಾಲಾಗ್ನಿ ರುದ್ರನಯ್ಯುಹನು । ಸತಿ । ತಾಳ
ಲಾರಳು ಜ್ವಾಲೆಗಳನು ॥ ಏಳು ಸಂಗರಕೆ ನೀನೆಂಬ ಸೂಚನೆಯಿಂದ । ಶೀಲೆಯ
ಕರದಿಂದ ಬಂದಿದೆ ಚಾಪವು ॥ ೩ ॥ ಮನ್ನಿಸಿ ಧನುವನ್ನು ಬೇಗ । ಹರಿ
ಚೆನ್ನಾಯ್ತು ಎನ್ನುತಲಾಗ ॥ ತನ್ನಯ ವಾಮಪಾಣಿಯೊಳದ ಧರಿಸುತ್ತ
ಚೆನ್ನಿಗ ನಿಂತುಕೊಂಡಿರಲಾ ಶಚೀಂದ್ರನು ॥ ೪ ॥

ವಾರ್ಧಿಕ

ಮಾರವೈರಿಯು ಸ್ತುತಿಯ ಮಾಡುತಿರಲಡಿಗಡಿಗೆ । ಮೇರುಗಿರಿಯುನ್ನತ
ಘೋರ ರೂಪವ ತಾಳ್ದು । ಭೂರಿ ನೇತ್ರಗಳಿಂದ ಚಲಿಪ ಕಿಡಿಗಳ ಸುರಿ
ಘೋರ್ಗರೆಯುತಾ ಕ್ಷಣದಲಿ ॥ ಹಾರಿಸುತ ಕಾರ್ಬೊಗೆಯ ಕಟ್ಟುಗ್ರವದ
ದೊಳ್ । ಮೂರು ಸಾವಿರ ರುಂಡಮಾಲೆ ಕರದೊಳ್ ಡಮರು । ಚಾ
ಶೂಲವ ಧರಿಸುತೀಶಾನ ಕಲ್ಪಾಂತ ಕಾಲಭೈರವನಾಗುತ ॥ ೧ ॥

ಭಾಮಿನಿ

ಪ್ರಳಯಮೂರುತಿ ರುದ್ರದೇವನು । ಜ್ವಲಿಸುವಕ್ಷಿಗಳಿಂದ ಸಾವಿರ । ತ
ಗಳಲಿ ಬಹುಬಾಹುದಂಡಗಳೆರಡು ಸಾವಿರದಿ ॥ ಪೊಳೆವ ಕೆಂಜಡೆ ಜೋ

ತಯ್ತುರೆ । ಲಲನೆಯನು ಹಿಂದಿರಿಸಿ ಕೃಷ್ಣನು । ವಿಲಯರುದ್ರನಿಗಿದಿರು ನಿಲ್ಲಲು
ಕಂಡು ಗರ್ಜಿಸುತ ॥ ೧ ॥

ರಾಗ ಭೈರವಿ ಅಷ್ಟತಾಳ

ಎಲೆ ಗೊಲ್ಲರಧಮ ಕೇಳು । ಪಾಮರ ನೀಚ । ಲಲನೆಯ ಮಾತಿನೊಳು ॥
ಬಲವೈರಿಯುಪವನತರುವ ಕೊಂಡೆಲ್ಲಿಗೆ । ಚಲಿಪೆಯೊ ಘಡ ಮರುಳೆ ॥ ೧ ॥
ತರುಣಿ ತಂದಿಹಳಿದನು । ಪಿಂದಕೆ ಕೊಡೆ । ಸುರರು ನಿಂದಿಪರೆಮ್ಮನು ॥ ತರು
ವಿಗೆ ನಿಮ್ಮಯ ಶೋಣಿತ ಜಲವಿತ್ತು । ಪುರಕೊಯ್ದು ಸಲಹುವೆನು ॥ ೨ ॥
ಭಳಿಭಳಿರೆಲವೊ ನಿನ್ನ । ಸಾಹಸವನ್ನು । ಲಲನೆಯರೊಡನೆ ಮುನ್ನ ॥ ನಿಳೆಯು
ನಿಳೆಯು ಪೊಕ್ಕು ಮೆರೆದ ವಿಕ್ರಮವನ್ನು । ನಿಲಿಪೆನು ಅರೆಕ್ಷಣದಿ ॥ ೩ ॥ ಸುಡು
ಗಾಡಿನೊಳು ಭಸ್ಮವ । ಲೇಪನ ಗೆಯ್ದು । ಜಡೆಯು ಜೋಗಿಯು ಜಂಗಮ ॥
ಹಿಡಿದು ಕಪಾಲವ ಮನೆಮನೆ ತಿರುಗಿದ । ನಡತೆಯಲ್ಲವು ಸಮರ ॥ ೪ ॥

ರಾಗ ಮಾರವಿ ಏಕತಾಳ

ಸುರತರುವನು ನೀ ಕೊಡದಿರೆ ಶಿರವನು । ಗರಗರನರಿದೀಗ ॥ ಪರಿ ಪರಿ
ಭೂತವೇತಾಳಕೆ ಔತಣ । ವಿರಚಿಪೆ ನಾ ಬೇಗ ॥ ೧ ॥ ಪುರುಷೋತ್ತಮ
ನೆಂತೆಂಬರು ಎನ್ನನು । ಧೀರದೊಳು ನಿನಗಂಜಿ ॥ ಸರಿಯಲು ಪಿಂದಕೆ ನಗದಿಹ
ರೇನ್ಯೆ । ತರುವೀಯೆನು ಗುಣದಿ ॥ ೨ ॥ ಹರಿಯೆಂದುದಕಾ ಧೂರ್ಜಟಿ ಕೆರ
ಳುತ । ತಿರುಹಿ ತ್ರಿಶೂಲವನು ॥ ಗುರಿಯಿಂದೆಸೆಯಲು ಬರುತಿಹುದನು ಕಂ ।
ಡರುಹಿದ ಮುರಹರನು ॥ ೩ ॥ ತೆರಳು ಸುದರ್ಶನ ಬರುತಿಹ ಶೂಲವ । ಮುರಿ
ದಿಕ್ಕಿಯೆ ನೀನು ॥ ತ್ವರೆಯೊಳು ಬಹುದೆಂದೆನುತಲೆ ಕಳುಹಿದ । ಸಿರಿವರ ಚಕ್ರ
ವನು ॥ ೪ ॥ ಗರಗರ ತಿರುಹುತ ಚಕ್ರವು ಬಂದಾ । ಪುರಹರ ಶೂಲವನು ॥
ಸರಸರನರಿಯುತ ಬರಲಾ ಶೂಲವು । ಕೊರೆಯಲು ಚಕ್ರವನು ॥ ೫ ॥ ಹರ
ಗೋವಿಂದರ ಶೂಲ ಸುದರ್ಶನ । ಧುರವನು ಗೆಯ್ಯುತಲಿ ॥ ಮೆರೆದವು ಅಂಬರ
ಪಥದೊಳು ರೋಷದಿ । ಸರಿಸಮವಾಗುತಲಿ ॥ ೬ ॥

ರಾಗ ಕೇದಾರಗೌಳ ಅಷ್ಟತಾಳ

ಹರಿಹರರಿತ್ತ ನಿರಾಯುಧರಾಗುತ್ತ । ಲಿರುತಿಹ ಕಾಲದೊಳು ॥ ಕಿರುನಗೆ
ನಗುತ ಮುರಾರಿ ಪೇಳಿದನೊಂದ । ಪುರಹರ ಕೇಳೆನುತ ॥ ೧ ॥ ಬೇಡವೈ
ಸಂಗರ ಸರ್ವೊಳು ಭೇದವ । ಮಾಡಲು ಜಗದೊಳಗೆ ॥ ಮೂಢರು ಎಮ್ಮನು
ನಿಂದಿಪರೆನೆಪೊಲೆ । ದಾಡುತ್ತ ಹರ ಶಿರವ ॥ ೨ ॥ ಅಷ್ಟದಿಕ್ಪಾಲರೊಳ್ ಸೇರಿದ
ಕಾರಣ । ಶ್ರೇಷ್ಠ ಕೇಳ್ ಬಂದೆ ನಾನು ॥ ನಿಷ್ಠುರ ಬೇಡ ನಾ ಪೋಪೆನೆನ್ನುತ

ಲಾಗ । ತಟ್ಟನೆ ಗಮಿಸಿದನು ॥ ೩ ॥ ಸಮಸತ್ತ್ವವಾಗಿ ಚಕ್ರವು ಪಿಂದ
ಕಮ್ಮಂದು । ಕಮಲನಾಭನ ಸೇರಲು ॥ ಗಮಿಸೆ ತ್ರಿಶೂಲವು ಪುರಹರನೆಡೆಗತ್ತ
ಲಮರೇಂದ್ರ ಖತಿಯೊಳಗೆ ॥ ೪ ॥ ಅಸಮ ವಿಕ್ರಮದಿಂದ ಪರಿತಂದಂ ವೇಗದಿ
ಬಿಸಜಾಕ್ಷನಿದಿರು ನಿಂದು ॥ ವಿಶಿಖಂಗಳನು ತೂರುತಿರಲು ಶ್ರೀಹರಿ ಕಂಡು
ನಸುನಗುತಿಂತೆಂದನು ॥ ೫ ॥

ರಾಗ ಕೇದಾರಗೌಳ ಝಂಪೆತಾಳ

ಸುರರಾಜ ಕೇಳೊ ನೀನು । ಧೀರನೆಂ । ದರಿದಿರ್ಪೆನೆಲ್ಲ ನಾನು ॥ ತರುವಿ
ನಾಸೆಯು ಮರೆತುಕೊ । ಮರುಳೆ ನಿ । ನ್ನ ಹರಣವನು ಕಾಪಾಡಿಕೊ ॥ ೧
ತರುವಿಂಗೆ ಪ್ರತಿನಿಧಿಯನು । ಹರಿ ನಿನ್ನ । ಶಿರವನ್ನು ಹರಿಸಿರ್ಪೆನು ॥ ತ್ವರಿತ
ದಿಂದೊಯ್ವೆ ನಾನು । ಕೆಡಬೇಡ । ತೆರಳು ದ್ರುಮವಿತ್ತು ನೀನು ॥ ೨ ॥ ನರ
ದೈತ್ಯನ ಭಯದೊಳು । ಗಿರಿಗುಹೆಯೊ । ಳಿರುತಿರ್ದ ಶೂರ ಕೇಳು ॥ ದುರುಳ
ನನು ತರಿದೆ ನಾನು । ಉಪಕೃತಿಯ । ಮರೆಸಿದೆ ಪಾಪಿ ನೀನು ॥ ೩ ॥ ಕಿಡಿ
ಗೆದರಿ ಸುರಪನಾಗ । ತಿರುಹುತಲೆ । ಬಿಡೆ ವಜ್ರ ಹರಿಗೆ ಬೇಗ ॥ ಎಡದ ಹಸ್ತದಿ
ಪಿಡಿದನು । ಶ್ರೀಕೃಷ್ಣ । ಮಡದಿಗಾಕ್ಷಣವಿತ್ತನು ॥ ೪ ॥ ಪುರುಹೂತ ನಾಚಿ
ಮನದಿ । ಪಿಂತಿರುಗಿ । ತೆರಳುತಿರೆ ಕಂಡು ಮುಂದದಿ ॥ ಹರಿಯರಸಿಯಾಗ
ನಗುತ । ಪೇಳಿದಳು । ಪರಿಪರಿಯ ಮೂದಲಿಸುತ ॥ ೫ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಗಂಡನಲ್ಲಲೆ ಮೂರು ಲೋಕಕೆ । ಗಂಡನಹುದೊ ಪುಲೋಮಪುತ್ರಿಗೆ
ಕೊಂಡುಹೋಗೀ ವಜ್ರವನು ಎಲೆ । ಭಂಡ ಸುರಪ ॥ ೧ ॥ ಗಂಡುಗಲಿ ಹೆಂ
ಸಿನ ಸರಿಸದಿ । ಮಂಡೆ ತಗ್ಗಿಸಿ ರಣಪಲಾಯನ । ಪಂಡಿತನೆ ಬಾರೆಂದು ಕರೆ
ದಳು । ಸತ್ಯಭಾಮೆ ॥ ೨ ॥ ಎಲೆಲೆ ಮೂಢಳೆ ಏಕೆ ಗರ್ವದಿ । ಚೆಲುವ ಕೃಷ್ಣ ನ
ರಮಣಿಯೆನ್ನುತ । ಛಲದಿ ನಿಂದಿಪೆ ಮೂಢೆ ನಿನ್ನನು । ಕೇಳ್ವರ್ಯಾರು ॥ ೩
ಜನಿಸುವರು ಶತಕೋಟಿ ಶಕ್ರರು । ಜನಿಸುವರು ಶತಕೋಟಿ ರುದ್ರರು । ಜನಿ
ಸುವರು ಶತಕೋಟಿ ಕಮಲಜ । ರಿವನ ಪದದಿ ॥ ೪ ॥ ಜನನ ವಿಲಯವಿಹೀನ
ಸಜ್ಜನ । ಜನಕನೀ ಮುರವೈರಿ ತಂದೆಗೆ । ತನಯರಪರಾಧಿಗಳೆ ಮೂರ್ಖಳೆ
ನಿನಗೆ ಏಕೆ ॥ ೫ ॥ ಕೊಂಬಡೀತನು ಕೊಡುವಡೀತನು । ನಂಬಿಹೆವು ನಾವೀತ
ನಂಘ್ರಿಯು । ಬೆಂಬಲವು ನಾವೀಗಲೀತಗೆ । ಎಂದನಿಂದ್ರ ॥ ೬ ॥

ರಾಗ ಮಧುಮಾಧವಿ ಆದಿತಾಳ

ಈ ರೀತಿಯೊಳು ಭಾಮೆಯೊಡನೆ ಕೋಪಿಸುತ । ಭೂರಿನೇತ್ರನು ತನ್

ಮನದಿ ಯೋಚಿಸುತ ॥ ನಾರಿಯೊಳೇಕೆ ಮಾತುಗಳ್ ತನಗೆಂದು । ವಾರಿಜ ನಾಭನ ಬಳಿಗಾಗಿ ಬಂದು ॥ ೧ ॥ ಜಯ ಜಯಂ ಕ್ಷೀರವಾರಿಧಿವಾಸ ಶ್ರೀಶ । ಜಯು ಜಯು ಸಜ್ಜನಪ್ರೋಷ ಸರ್ವೇಶ ॥ ಜಯಂ ಸೂರ್ಯಕೋಟಿಸಂಕಾಶ ಖಳ ನಾಶ । ಜಯು ಜಯು ಪಾಹಿ ಮಾಂ ಮೂಲೋಕಾಧೀಶ ॥ ೨ ॥ ತರಳ ಮಾಡಿದ ತಪ್ಪ ಪಾಲಿಸೆಂದೆನುತ । ಲೆರಗಲು ಮಾಧವ ಪೇಳ್ದ ನಸುನಗುತ ॥ ಧುರದೊಳೆಮ್ಮನು ಗೆದ್ದು ತರುವ ನೀ ಕೊಳದೆ । ಬರಿದೇಕೆ ಸ್ತುತಿಸುವೆ । ಸುಮನಸದೊರೆಯೆ ॥ ೩ ॥

ರಾಗ ಸಾಂಗತ್ಯ ರೂಪಕತಾಳ

ಪರಮಾತ್ಮ ಕೇಳು ಹೆಬ್ಬುಲಿಯೊಳು ಸಮರದಿ । ಕುರಿಗಳು ಗೆಲ್ಲುವುದುಂಟೆ ॥ ನಿರತ ಅಜ್ಞಾನದೊಳ್ ಬಂದೆನು ಮನಸಿಗೆ । ತರದೆ ಶ್ರೀಹರಿ ಎನ್ನ ಸಲಹೊ ॥ ॥ ೧ ॥ ಯಾತಕೋಸುಗವೆನ್ನೊಳ್ ಸಮರಕಯ್ತಂದಿಹೆ । ಭೂತಳದೊಳಗಪ ಹಾಸ್ಯ ॥ ಈ ತರುವಿನ ದೆಸೆಯಿಂದಲಿ ಸುಮ್ಮನೆ । ಖಾತಿಗೊಂಡಿರಿಯೇಕೆ ಸುರರು ॥ ೨ ॥ ಸುರಕಲ್ಪವೃಕ್ಷವು ಧರೆಗೆ ಪೋದರೆ ಎಮ್ಮ । ಪುರಕೆ ನಿಂದಿತ ವಾಯಿತೆನುತ ॥ ಮರುಳು ಬುದ್ಧಿಗಳಿಂದ ಚರಣಕೆ ನೆಗಳಿದ । ಪರಮ ದ್ರೋಹವ ಕ್ಷಮಿಸಯ್ಯ ॥ ೩ ॥

ರಾಗ ಕಾಂಭೋಜಿ ಝಂಪೆತಾಳ

ನಾಕಾಧಿಪತಿ ಕೇಳು । ಏಕೆನ್ನ ಸತಿಗೀಗ । ಪೋಕತನದೊಳು ನಿಂದೆ ಗೈದೆ ॥ ಈ ಕೋಮಲಾಂಗಿಯನು ಸಂತಯಿಸಿ ಕುಲಿಶವನು । ಬೇಕಾದರೊಯ್ಯುವುದು ನೀನು ॥ ೧ ॥ ಎಂದ ನುಡಿ ಕೇಳಿ ಸಂ । ಕ್ರಂದನನು ನಾಚುತಲೆ । ಮುಂದಮಂತಿ ಯೊಳು ಜರೆದೆ ನಾನು ॥ ಇಂದುಮುಖಿಯುಳ ಮನವ ಸಂತಯಿಸುವರೆ ಬೇರೆ । ಒಂದು ಯತ್ನವ ಮಾಳ್ಪೆನೆನುತ ॥ ೨ ॥ ಮಾತಲಿಯೆ ಪೋಗಯ್ಯ । ಈ ತಳೋದರಿ ಮನವ । ನೀ ತತುಕ್ಷಣದಿ ಸಂತಯಿಸಿ ॥ ಸೋತವರು ನಾವೆನುತ ವಜ್ರಮಂ ಕೊಂಡೀಗ । ಛಾತುರದಿ ಬಹುದೆಂದು ಕಳುಹೆ ॥ ೩ ॥

ರಾಗ ಜಂಜೂಟಿ ಏಕತಾಳ

ವಂದಿಸಿ ಮಾತಲಿ ತಾನು । ನಡೆ । ತಂದು ಕಂಡನು ಭಾಮೆಯನು ॥ ಚೆಂದದಿ ಮಣಿಯುತಲೆಂದನು ಕುಲಿಶವ । ನಿಂದು ತರಲೆಂದಟ್ಟಿದನು ಸುರ । ವೃಂದದರಸನು ಮೋದದಿಂದಲಿ ॥ ೧ ॥ ಹರಿರಾಣಿ ಕಳಕೀರವಾಣಿ । ನಿನ್ನ । ಚರಣಕೊಂದಿಪೆ ನಾಗವೇಣಿ ॥ ಧುರದಿ ಸೋತವರಾವು ತರದಿರು ಖತಿಯನ್ನು । ಎರಗನೊಡ್ಡುತ ಬೇಡಿಕೊಂಬೆನು । ಕರುಣದಿಂದೆಸಗಿತ್ತು ಕಳುಹಿಸು ॥ ೨ ॥

ಎನಲಾ ಮಾತಿಗೆ ನಸುನಗುತ । ಹರಿ । ವನಿತೆ ಪೇಳಿದಳೊಂದು ಮಾತ ॥
ಬಿನುಗು ಸುರೇಂದ್ರನು ಕುಲಿಶ ಬೇಕಾದರೆ । ಘನಮದೋನ್ಮತ ಬಿಟ್ಟು ತಾನೇ ।
ವಿನಯದಿಂದಯ್ತುರಲು ಕೊಡುವೆನು ॥ ೩ ॥ ನಂಡಿ ಕೇಳಿ ತಿರುಗಿ ಮಾತಲಿಯು ।
ಬಂ । ದೊಡನುಸಿರಿದನು ಸಂಗತಿಯು ॥ ಜಡಜಲೋಚನೆ ಪೇಳ್ದಳ್ವಜ್ರ ಬೇಕಾ
ದರೆ । ಒಡನೆ ತಾನೇ ಬಂದು ಕೇಳ್ದರೆ । ಕಡೆಯೊಳವನಿಗೆ ಕೊಡುವೆನೆಂದಳು ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಶಿರವ ತಗ್ಗಿಸಿಕೊಂಡು ಸುರಪತಿ । ತರುಣಿಯೆಂಡೆಗಯ್ತುರಲಿಕಾ ಕ್ಷಣ । ಧುರ
ಪರಾಕ್ರಮಿ ಬಂದೆಯೇತಕೆ । ಮೌನದಿಂದ ॥ ೧ ॥ ಪೇಳೆ ವದನವು ಬರದೆ ಸುರ
ಪನು । ಶೀಲೆ ಕೊಡು ನೀನೆನ್ನ ಕುಲಿಶವ । ಖೂಳತನದೊಳು ನಿನ್ನ ಜರೆದೆನು ।
ಪಾಪಿ ನಾನೌ ॥ ೨ ॥ ಹರಿಯೆಮಗೆ ಪಿತ ನೀನು ಆತನ । ಅರಸಿಯಾದುದರಿಂದ
ಮಾತೆಯು । ತರಳನಾಡಿದ ಮಾತ ಮನಸಿಗೆ । ತರದೆ ಈಗ ॥ ೩ ॥ ಹರಸಿ ಕಳು
ಹೆನೆ ಕರುಣದಿಂದಲಿ । ಸುರಪತಿಯು ಮನ್ನಿಸುತ ವಜ್ರವ । ಹರುಷದಿಂ ಕೊಡ
ಲಾಗ ತನ್ನಯ । ಕರದಿ ಕೊಂಡು ॥ ೪ ॥ ಪರಿಪರಿಯು ಸ್ತುತಿಸುತ್ತಲೆರಗಲು । ಹರಿಯು
ಕರುಣಾರಸದೊಳೆಂದನು । ತೆರಳು ಸುರಪತಿ ನಿನ್ನನನುದಿನ । ಪಾಲಿಸುವೆನು ।

ಭಾಮಿನಿ

ಸುರಪ ಕೇಳ್ ಧರೆಯೊಳಗೆ ನಾನಿಹ । ವರೆಗೆ ಸುರತರುವಿರ್ದು ಕಡೆಯಲಿ ।
ಹರಿತಹುದು ಸುರಪುರಕೆ ಪೋಗೆಂದೆನುತ ಕಳುಹುತಲಿ ॥ ತರುಣಿ ಸಹಿತಲೆ ತಿರುಗಿ
ಮಥುರಾ । ಪುರಕೆ ಬರುತಿರೆ ಕಂಡು ಸರ್ವರು । ಪರಮಸಂತೋಷದೊಳಿದಿರು
ಗೊಳ್ಳಲು ಹರಿಯು ಮೋದದಲಿ ॥ ೧ ॥

ವಾರ್ಧಿಕ

ಅರಮನೆಯ ಪೊಕ್ಕು ವಸುದೇವದೇವಕಿಯರಿಗೆ । ಅರುಹಿ ವಾರ್ತೆಗಳೆಲ್ಲ
ಮುರವೈರಿ ವೇಗದಿಂ । ಸುರಪಾರಿಜಾತಮಂ ಸತ್ಯಭಾಮೆಯ ಗೃಹದ ಹೊರಗಿ
ನಂಗಣಮಧ್ಯದಿ ॥ ಹರುಷದಿಂ ಸ್ಥಾಪಿಸುತ ತರುಣಿಸಮುದಾಯದೊಳ್
ಮೆರೆಯುತಿರಲತ್ತಲಾ ನರಕಪತಿ ಸಿಂಹಮುಖಿ । ಹರಿಯಿಂದ ತನ್ನ ಪತಿ ಮ
ಣವಂ ತಿಳಿದಾಗ ಮರುಗಿ ಸುಯ್ಸುತಲೆಂದಳು ॥ ೧ ॥

ರಾಗ ಭೈರವಿ ಆದಿತಾಳ

ಹರ ಹರ ಎನ್ನಯ । ಪತಿಯು ಸಂಗರದಲ್ಲಿ । ಸುರನರೋರಗ ಯಕ್ಷ
ಮುಂತಾದವರಿಂಗೆ ॥ ಧುರದಿ ಹಿಂಜರಿಯದ । ಶೂರಂಗೆ ಇಂದಿನೊಳ್ । ಹ
ಯಿಂದ ದೊರಕಿತೆ । ಮರಣ ಶಂಕರನೆ ॥ ೧ ॥ ಮೂರುಲೋಕದಿ ನರಕ । ನೆಂ
ವಾರ್ತೆಯು ಕೇಳಿ । ವಾರಿಜಭವ ಪುರು । ಹೂತ ಮುಂತಾಗಿ ॥ ಗಾರುಗೆದ

ತಲಿರ್ಪ । ವೀರನ ಸಮರದಿ । ಪೋರನೋರ್ವನಂ ಕೊಂದ । ವಿಧಿಯನೇನೆಂಬೆ ॥ ॥ ೨ ॥ ಎತ್ತ ಪೋಗಲಿಯೆನ್ನ । ದೇಹವ ಬಡಬಾಗ್ನಿ । ಹೊತ್ತಿ ಸುಡುತಲಿದೆ ಯೆಂತು ಬಾಳುವೆನು ॥ ಕೃತ್ತಿವಾಸನೆ ಎನ್ನ । ಸಲಹೊ ಸದಾಶಿವ । ಮೃತ್ಯುಂಜಯನೆ ಹರನೆ । ಮೃಡನೆ ತ್ರ್ಯಂಬಕನೆ ॥ ೩ ॥

ರಾಗ ದೇವಡಿ ರೂಪಕತಾಳ

ಮರುಗಿದರೇನಹುದಿದಕೆ ಬೇರೊಂದುಂಟು । ನರಕನಿಗಾಪ್ತ ಸ್ನೇಹಿತರು ॥ ಇರುವರು ಮೈಂದದ್ವಿವಿದರೆಂಬ ತರುಚರ । ವರರು ವಿಂಧ್ಯಾದ್ರಿಯೊಳೀಗ ॥೧॥ ದೂರ ಪೇಳುವೆನೆಂದು ನಡೆದಳು ವೇಗದಿ । ಕ್ರೂರೆ ಸಿಂಹಾಸ್ಯೆ ಶೋಕಿಸುತ ॥ ಘೋರ ಕಾನನದೊಳು ಶ್ರೀರಾಮಸ್ಮರಣೆಯೊಳ್ । ವೀರರಿರಲು ವಂದಿಸುತಲಿ॥ ॥ ೨ ॥ ಧರೆಯೊಳು ಪೊರಳಿ ಶೋಕಿಸುತಿಹ ಸತಿಯನ್ನು । ನರಕಾಸುರನ ಪತ್ನಿಯೆಂದು ॥ ಅರಿತು ವಾನರರಾಗ ಕಷ್ಟಗಳೇನೆನೆ । ದುರುಳೆಯು ಪೇಳಿದಳವರ್ಗೆ॥

ರಾಗ ಕಾಂಭೋಜಿ ಅಪ್ಪತಾಳ

ಧುರಪರಾಕ್ರಮರೆ ನೀ । ವೆನ್ನಯ ಪರಿಗಳ । ಕೇಳಿರಯ್ಯ ॥ ಕರುಣೆಗಳ್ ನೀವೆನ್ನ । ರಕ್ಷಿಸಬೇಕಯ್ಯ । ಕೇಳಿರಯ್ಯ ॥ ೧ ॥ ಪತಿ ನರಕಾಸುರ । ನಿಮಗತಿಯಾಪ್ತನು । ಕೇಳಿರಯ್ಯ ॥ ಹಿತದಿ ರಾಜ್ಯವನಾಳಿ । ಕೊಂಡಿರಲೊಂದಿನ । ಕೇಳಿರಯ್ಯ ॥ ೨ ॥ ಯದುಕುಲೋದ್ಭವನಂತೆ । ಕೃಷ್ಣನೆಂಬುವನಂತೆ । ಕೇಳಿರಯ್ಯ॥ ಮದಮುಖ ಬಂದು ಸಂ । ಗರದಿ ಸಂಹರಿಸಿದ । ಕೇಳಿರಯ್ಯ ॥ ೩ ॥ ಸುರಪನೊಳ್ ತಂದಿಹ । ವಸ್ತುವಾಹನವನ್ನು । ಕೇಳಿರಯ್ಯ ॥ ತರುಣಿವಿಂಡುಗಳನ್ನು। ಹರಿಯು ಕೊಂಡೊಯ್ದನು । ಕೇಳಿರಯ್ಯ ॥ ೪ ॥ ಅರಿಯ ಸಂಹರಿಸೆನ್ನ । ಪತಿಗೆ ತೃಪ್ತಿಯ ಗೆಯ್ಸಿ । ಕೇಳಿರಯ್ಯ ॥ ನಿರತವೆನ್ನನು ಕಾಪಾ । ಡಿರಿ ನೀವೆಂದರುಹಿದೆ । ಕೇಳಿರಯ್ಯ ॥ ೫ ॥

ರಾಗ ಘಂಟಾರವ ಏಕತಾಳ

ಎಂದ ಮಾತಿಗೆ ಕನಲುತ್ತ ಮೈಂದನು । ಸಂದನೇ ಪರಮಾಪ್ತ ನರಕನು । ನಿಂದೆಯಹ ದುರ್ಗತಿಯನು ॥ ೧ ॥ ತಿಕ್ಕಿ ಮುಸುವೆ ಕ್ಷಣದೊಳು ಕೃಷ್ಣನ । ಸೊಕ್ಕ ಮುರಿಯದೆ ಸುಮ್ಮನಿರ್ಪೆನೆ । ಮಕ್ಕಳಾಟಿಕೆಗೆಯ್ದನ ॥ ೨ ॥ ದ್ವಿವಿದನಾರ್ಭಟಿಸುತಲಾಗ ಪೇಳಿದ । ಜವನೆ ಬಂದಿದಿರಾಗಲಾತನ । ಬವರದೊಳು ಸಂಹರಿಪೆನು ॥ ೩ ॥ ಎಲ್ಲಿಯಾತನ ವಸತಿ ಪೇಳೀಗಲು । ನಿಲ್ಲಲಾಗದೆನುತ್ತ ಕೇಳಲ್ । ಖುಲ್ಲೆ ಪೇಳ್ದಳು ಮೈಂದಗೆ ॥ ೪ ॥

ರಾಗ ಕೇದಾರಗೌಳ ಝಂಪೆತಾಳ

ತರುಚರಾಧಿಪರಾಲಿಸಿ । ಕೃಷ್ಣನಿಹ । ಪುರವು ಪರಿವಾರವೆರಸಿ ॥ ಧರೆಯೊಳಗೆ
ಮಥುರೆಯೆಂದು । ಯಮುನೆಯೆಡೆ । ಗಿರುವುದೈ ಪುರವಿದೊಂದು ॥ ೧ ॥

ರಾಗ ಕೇದಾರಗೌಳ ಅಷ್ಟತಾಳ

ತರಳನೊ ಯವ್ವನವಾರ್ಧಿಕತನದೊಳ । ಗಿರುವನೊ ಪೇಳೆನಗೆ ॥ ಧುರದಿ
ಪೂರ್ವದೊಳಾರ ಮಡುಹಿದನೆಂಬುದ । ನರುಹೆಂದನಾಗ ಮೈಂದ ॥ ೧ ॥

ರಾಗ ಕೇದಾರಗೌಳ ಝಂಪೆತಾಳ

ತರಳತನದೊಳಗಿರ್ಪನು । ದೈತ್ಯಕುಲ । ಕೊರಳಿಗಂಕಂಶವಾತನು ॥ ಧುರದಿ
ಕಂಸಾದಿಗಳನು । ಸಂಹರಿಸಿ । ಮೆರೆವುತಿಹನೈ ಶೂರನು ॥ ೧ ॥

ರಾಗ ಕೇದಾರಗೌಳ ಅಷ್ಟತಾಳ

ಮಾನವನಿಗೆ ಸತಿಸುತರಿರ್ಪರೇನವ್ವ । ಸೇನೆಗಳಿಹುದೆ ಪೇಳೆ ॥ ಹೀನವಿಕ್ರ
ಮನೊ ಯುದ್ಧದಿ ಧೀರನೆಂಬುದ । ನೀನುಸಿರೆಂದನಾಗ ॥ ೧ ॥

ರಾಗ ಕೇದಾರಗೌಳ ಝಂಪೆತಾಳ

ನಾರಿಯರು ಲೆಕ್ಕದೊಳಗೆ । ಇರುವರ್ ಹದಿ । ನಾರುಸಾಸಿರವಾತಗೆ ॥ ಶೂರ
ಯದುಬಲಸಹಿತಲಿ । ಅವನಿಗಿದಿ । ರಾರು ಕಾಣೆನು ಜಗದಲಿ ॥ ೧ ॥

ರಾಗ ಕೇದಾರಗೌಳ ಅಷ್ಟತಾಳ

ಕುಲದೊಳು ವೀರರಾಗಿಹರುಟೆಯುವನಿಗೆ । ಚಲಿಪ ವಾಹನವಾವುದು ॥
ಖಳರಾಯನರಸಿ ನೀ ಪೇಳೆಂದು ಮೈಂದನು । ಒಲವಿಂದ ಕೇಳಿದನು ॥ ೧ ॥

ರಾಗ ಕೇದಾರಗೌಳ ಝಂಪೆತಾಳ

ಬಲರಾಮನೆಂಬೋರ್ವನು । ಅಗ್ರಜನು । ಬಲುಶೂರನಾಗಿರುವನು ॥
ಚೆಲುವ ಕೃಷ್ಣನು ಪಕ್ಷಿಯು । ಪೆಗಲಿನೊಳು । ಚಲಿಪನೈ ಕೇಳಿರಯ್ಯ ॥ ೧ ॥

ವಾರ್ಧಿಕ

ಒಡೆಯನಹ ರಾಮನಿಂದಧಿಕವಹ ಪೆಸರಿನೊಳ್ । ಪೊಡವಿಯೊಳು ಮೆರೆವ
ಬಲರಾಮನು ಧುರದೊಳಗೆ । ತಡೆಬಡಿದು ಬಲವೆನಿಪ್ಪೆರಡಕ್ಷರಂಗಳಂ ತೆಗೆದೆಮ್ಮ
ಚರಣದೊಳಗೆ ॥ ಇಡಿಸಿ ಹುಲು ನರಗರ್ವ ಮುರಿದಿಕ್ಕದಿರೆ ನಮ್ಮ । ಒಡೆಯಂಗೆ
ಸೇವಕರೆ ಸೈರಿಸೆನುತುಸಿರುತಂ । ಹೊಡೆದು ಭುಜಯುಗ್ಮಮಂ ಸಿಂಹನಾದವ
ಗೆಯ್ದು ಮಥುರೆಪಥವಂ ಪಿಡಿವುತ ॥ ೧ ॥

ರಾಗ ಘಂಟಾರವ ಏಕತಾಳ

ಬಂದರಾ ಮಥುರಾಪುರದೆಡೆಗಾಗ । ಅಂಧಕಾರಿಯೊ ಕಾಲಭೈರವ । ರಂದ
ವೆನೆ ಹೂಂಕರಿಸುತ ॥ ೧ ॥ ಎರಡು ಕೌಂಕುಳೊಳೆರಡು ವೃಕ್ಷವನೌಕಿ । ಪುರದ

ಹೊರದ್ವಾರವನು ದಾಂಟುತ । ತೆರಳಿ ತ್ವರಿತದಿ ಮುಂದಕೆ ॥ ೨ ॥ ಪೊಳೆವ ಸುಂದರ ನವರತ್ನಗೋಪುರ । ನೆಲೆನೆಲೆಯು ಸೌಧದಲಿ ರಂಜಿಪ । ಪೊಳೆವ ಚಿತ್ರವ ಕಾಣುತ ॥ ೩ ॥ ಒಡೆಯು ಶ್ರೀರಾಮುವಸತಿ ಸಾಕೇತದ । ಬೆಡಗು ತೋರ್ಪುದಿ ದೇನಿದಚ್ಚರಿ । ದುಡುಕು ನಮಗಿದು ಸಲ್ಲದು ॥ ೪ ॥ ಅರರೆ ಸಾಕೇತಪುರದಿದಿ ರೊಳು ತೋರ್ಪ । ಸರಯು ಯೂಪಸ್ತಂಭ ಚಿಹ್ನೆಯುಂ । ದೊರೆಯದೀಗೀ ನದಿಯೊಳಂ ॥ ೫ ॥ ಅಲ್ಲವೆಂದಿಗೂ ಸಾಕೇತಪುರವಿದು । ಖುಲ್ಲ ಕೃಷ್ಣನಂ ರಾಜ ನಹನೇ । ಚೆಲ್ವ ರಾಮುನ ನಗರಕೆ ॥ ೬ ॥

ರಾಗ ಭೈರವಿ ಏಕತಾಳ

ತರುಚರರೀ ಪರಿ ನೆನೆದು । ಹರಿ । ಪುರವರದೊಳಯಿಕೆ ನಡೆದಂ ॥ ಕರಕರ ದಂತವನೊರೆದಂ । ವೇ । ಲ್ವರಿಯುತ ಗೃಹಗಳ ಮುರಿದಂ ॥ ೧ ॥ ಮೆರೆದಿರ ಲಿದ ಕಾಣುತ್ತ । ಹರಿ । ಪುರಜನರಿದಿರಾಗುತ್ತ ॥ ಬರುತಿರೆ ಬಡಿದಪ್ಪಳಿಸಿ । ಕಪಿ । ವರರಂ ಪರಾಕ್ರಮುವೆರಸಿ ॥ ೨ ॥ ಲಲನೆಯರನು ಬೆರಬೆರಸಿ । ತಮ್ಮ । ನಿಳಯದಿಂ ಹೊರ ಪೊರಮಡಿಸಿ ॥ ಅಳುತಿಹ ಶಿಶುಗಳನೆಳೆದು । ಹುಡಿ । ನೆಲ ದೊಳ್ ಮಾಲಗಿಸಿ ನಲಿದು ॥ ೩ ॥ ಬಲಿಮುಖರಿರೆ ಕಂಡಿದನು । ಯದು । ಕುಲ ಜನರತಿ ಭೀತಿಯುನು ॥ ತಳೆಯುತಲವರಯ್ತಂದು । ಹರಿ । ಗಳಲುತ ಪೇಳ್ದರು ಬಂದು ॥ ೪ ॥

ರಾಗ ನವರೋಜು ಏಕತಾಳ

ಲಾಲಿಸಬೇಕೆಲೆ ದೇವ । ನಮ್ಮ । ಗೋಳನಂ ಪೇಳ್ವೆವು ಜೀಯ ॥ ಪ ॥ ಬಾಲಕ ರಂದದಿ ಸಲಹಿದೆ ನಮ್ಮನು । ಕಾಳಿಯುಮಥನ ಶ್ರೀ । ಲೋಲ ಮುಕುಂದ ॥ಅ॥ ತರುಚರರೀರ್ವರು ಬಂದು । ಸಮ್ಮ । ಪುರದೊಳು ಶೌರ್ಯದೊಳಿಂದು ॥ ಮೆರೆವ ಸಾಲ್ಗೇರಿ ಗೃಹಂಗಳನುರುಳಿಸಿ । ತರುವಿನೊಳೆಲ್ಲರ ಬಡಿದಿಕ್ಕಿದರು ॥೧॥ ತರುಣಿಯರೆಲ್ಲರ ಬೆರಸಿ । ತರ । ತರದಾ ಚೇಷ್ಟೆಯ ರಚಿಸಿ ॥ ಕರಕೆ ಸಿಕ್ಕಿದನೆಲ್ಲ ಮೊಲಂತಲೀರ್ವರು ಮಹಾ । ಪರಮಪರಾಕ್ರಮದಿಂದಿಹರಯ್ಯ ॥ ೨ ॥ ಕರುಣ ದೊಳೆಮ್ಮನಂ ಸ್ವಾಮಿ । ನೀ । ಪರಿಪಾಲಿಸೈ ಪ್ರೇಮಿ ॥ ದುರುಳರ ಮರ್ದಿಸಿ ಶರಣರ ಸಲಹುವ । ಪರಮಾತ್ಮನು ನಿನ್ನೊಂದರತ್ಯಾರಿರುವರು ॥ ೩ ॥

ರಾಗ ಭೈರವಿ ಝಂಪೆತಾಳ

ಪುರಜನರ ನುಡಿ ಕೇಳಿ । ಹರಿಯು ತನ್ನಯ ಮನದಿ । ತರುಚರರು ಯಾರಿಂಥ ದುರುಳರಾಗಿಹರು॥ಅರೆಗಳಿಗೆ ಯೋಚಿಸುತ । ಲಕ್ಷ್ಮೀನೀಸುತರಾದ । ಶರಣಮೈಂದ ದ್ವಿವಿದರೆಂದು ನಿಶ್ಚಯಿಸಿ ॥ ೧ ॥ ವರವ ತ್ರೇತಾಯುಗದೊ । ಳಿತ್ತಿಹೆನು ಪ್ರತಿ

ಯುಗದಿ । ದರುಶನವನೀವೆ ನಿಮ । ಗೆಸುತ ಪೂರ್ವದಲಿ ॥ ಹರಿತಂದರರದಕೀಗೆ । ಳಿವರೆನ್ನ ಪುರವರಕೆ । ಅರಿಯುರೀ ಕೃಷ್ಣಾವತಾರವೆಂಬುದನಂ ॥ ೨ ॥ ಎಂದು ನಿಶ್ಚಯಿಂಸಿ ಗೋ । ವಿಂದ ಪೇಳಿದನು ಯಾದು । ವೃಂದಗಳೆ ಬೆದರದಿರಿ । ಒಂದು ಕ್ಷಣದೊಳಗೆ ॥ ವಂದವುತಿಗಳ ಗರ್ವ । ಭಂಗಿಪರೆ ಗರುಡನನಂ । ಚೆಂದದಿಂ ಕಳುಹುವೆನು ಪೋಗಿ ನೀವೆನಂತ ॥ ೩ ॥

ರಾಗ ಕೇದಾರಗೌಳ ಅಷ್ಟತಾಳ

ಪಟ್ಟಣ ಜನಗಳ ಸಂತಯಿಂಸಿ ಪಿಂದಕೆ । ತಟ್ಟನೆ ಕಳುಹುತಲಿ ॥ ಪಟ್ಟದರಾಣಿ ರುಗ್ಮಿಣಿಯೋಳ್ಯೋಚಿಸಿದನಂ । ದಿಟ್ಟ ಶ್ರೀಕೃಷ್ಣರಾಯು ॥ ೧ ॥ ಸಂವುನಸರನಂ ಗೆದ್ದು ಅವ್ಮೃತಕಲಶವನ್ನು । ಗವುಕದಿಂ ತಂದನ್ನೆಸೆ ॥ ಕ್ಷಮೆಯೊಳು ತನ್ನಿದಿ ರಿಲ್ಲೆಂದಂ ಗರುಡನು । ಭ್ರಮಿಂಸಿಹನೀಗ ಕೇಳು ॥ ೨ ॥ ವಿನತಾನಂದನನ ದರ್ಪವ ಮುರಿವರೆ ಈಗ । ಅನುಕರಿಸಿದೆ ಕಾಲವು ॥ ವನಚರರಂಭಯರು ಬಂದಿಹರೊಡ ನೀಗ । ವನಿತೆ ಮರ್ದಿಪೆ ನೋಡೆಲೆ ॥ ೩ ॥ ಚಿನುಮಯನಿಂತುಸಿರುತಲಾಗ ನೆನ ಯಲಂ । ಘನವೇಗದಿಂದ ಬಂದು ॥ ವಿನಾತಾತ್ಮಭವನು ಸಂಸ್ತುತಿಸಂತ್ರಲೆರಗಿದ । ವಿಕಸಿತಾಬ್ಜಾಳಿಯಂತೆ ॥ ೪ ॥

ಭಾಮಿನಿ

ಚರಣದೊಳಗೆರಗಿರ್ಪ ಗರುಡನ । ಮುರಹರನಂ ಮನ್ನಿಸುತಲೆಂದನು । ಪುರದ ಮಧ್ಯದೊಳುಭಯ ವಾನರವೀರರಯ್ತಂದು ॥ ದುರುಳತನ ಗೆಯ್ವರನ ವೇಗದಿ । ಕರೆದಂ ತಹುದೆನ್ನೆಡೆಗೆ ಬರದಿರೆ । ಧುರದಿ ರಟ್ಟೆಯಂ ಕಟ್ಟಿ ತಾರೆಂದ ನಂತ ನೇಮಿಂಸಿದ ॥ ೧ ॥

ರಾಗ ಭೈರವಿ ಅಷ್ಟತಾಳ

ಹರಿಯೆಂದ ನುಡಿ ಕೇಳುತ್ತ । ನಾಗಾಂತಕ । ನೊರೆದನು ಗರ್ವಿಸುತ ॥ ತರು ಚರರುಭಯರ ವೇಗದಿ ಭಂಗಿಸಿ । ಬರುವೆನು ಸ್ವಾಮಿ ಕೇಳು ॥ ೧ ॥ ಹರಿ ಯೊಳಿಂತುಸಿರುತಾಗ । ಪದಾಬ್ಜಕೆ । ಯೆರಗುತ್ತ ನಡೆದ ಬೇಗ ॥ ತರು ತೂಗುತ ಕಾಲಮೃತ್ಯುಗಳಂದದೊ । ಳಿರುವರ ಕಂಡು ಪೇಳ್ದ ॥ ೨ ॥ ಎ ಕೋತಿಗಳಿರ ನಮ್ಮ । ಪಟ್ಟಣದೊಳು । ಸಲುಗೆಯೊಳ್ಬಂದ ನಿಮ್ಮ ॥ ಕೊಲ ವರೆ ಕೃಷ್ಣಗೆ ಮನಬಾರದೆನ್ನೊಳಂ । ಘಳಿಲನೆ ಕರೆತಾರೆಂದ ॥ ೩ ॥ ಎಂ ನುಡಿಗೆ ಮೈಂದನು । ಗರ್ಜನೆಯಿಂಯು । ತ್ತೆಂದನುತ್ತರಗಳನ್ನು ॥ ಮಂ ಮತಿಯೆ ನಿನ್ನ ಕೃಷ್ಣಗಿಷ್ಟರನೆಲ್ಲ । ತಂದಿಕ್ಕಮ್ಮಯ ಪಾದದಿ ॥ ೪ ॥ ಅನಿ ರೊಳ್ ದ್ವಿವಿದನಾಗ । ವೃಕ್ಷವನೆತ್ತಿ । ಕನಲುತ್ತ ಪೇಳ್ದ ಬೇಗ ॥ ಅನುವ ದೊಳು ನಿನ್ನ ಕೊಂದರಾ ಕೃಷ್ಣನಂ । ಘನವೇಗ ಬಹನಿಲ್ಲಿಗೆ ॥ ೫ ॥

ಭಾಮಿನಿ

ಕೇಳು ದ್ವಿವಿದನೆ ಧುರದೊಳೀತನ । ಸೀಳಿ ವೇತಾಳಗಳಿಗೌತಣ । ಲೀಲೆಯಿಂ ವಿರಚಿಪೆನು ನೋಡೆನುತಾಗಲಾ ವ್ಯೆಂದ ॥ ಕಾಲಭೈರವನಂತೆ ಗರ್ಜಿಸು । ತೇಳಲಾ ಕ್ಷಣ ದ್ವಿವಿದ ಪೇಳಿದ । ಖೂಳನನು ಕೊಲ್ಲದಿರು ಮಾನವ ಕಳೆದು ಕಳುಹೆಂದ ॥

ರಾಗ ಶಂಕರಾಭರಣ ಮಟ್ಟೆತಾಳ

ತರುಚರೇಂದ್ರರೆಂದ ನುಡಿಗೆ । ಗರುಡನಾಗ ಕೋಪಿಸುತ್ತ । ಭರದಿ ಮುಷ್ಟಿ ಯಿಂದ ಸದೆದ । ಮ್ಯೆಂದಗಾ ಕ್ಷಣ ॥ ೧ ॥ ದುಷ್ಟ ತಾಳು ತಾಳೆನುತ್ತ । ದಿಟ್ಟ ಮ್ಯೆಂದ ಜಗಿದು ತಿರುಗಿ । ಕೊಟ್ಟನೊಂದಕೆರಡು ಮುಷ್ಟಿ । ಯಿಂದ ಗರುಡಗೆ ॥ ॥ ೨ ॥ ತರುವನೊಂದ ಕಿತ್ತು ತೂಗು । ತೆರಗೆ ಮ್ಯೆಂದಶಿರಕೆ ಭರದಿ । ಕರದೊ ಳದರ ಸೆಳೆದು ತಿರುಗಿ । ಬಡಿದನಾ ಕ್ಷಣ ॥ ೩ ॥ ದ್ವಂದ್ವಯುದ್ಧದೊಳಗೆ ನಿನ್ನ । ನಿಂದು ತೋರ್ಪೆ ನಿಲ್ಲೆನುತ್ತ । ಮುಂದೆ ಭುಜವ ಹೊಯ್ದು ನಿಲಲು । ಕಂಡು ಮ್ಯೆಂದನು ॥ ೪ ॥ ಬೆಳಸಿ ತನ್ನ ಬಾಲವನ್ನು । ಗರುಡನಿಂಗೆ ಸುತ್ತಿಕೊಂಡು । ಸೆಳೆದು ಸೂರ್ಯಮಂಡಲಕ್ಕೆ । ಎತ್ತಿ ತೂಗಿದ ॥ ೫ ॥

ರಾಗ ಜೋಗುಳ ಅಷ್ಟತಾಳ

ಜೋ ಜೋ ಪನ್ನಗಕುಲಕೆ ಹೆಮ್ಮಾರಿ । ಜೋ ಜೋ ಕುಣಪದ ಮಾಂಸಾಪ ಹಾರಿ ॥ ಜೋ ಜೋ ದೀರ್ಘದ ನಾಸವಿಕಾರಿ । ಜೋ ಜೋ ರಣಹೇಡಿ ಪಾಪಿ ಜೋಕ್ಮಾರಿ ॥ ಜೋ ಜೋ ॥ ೧ ॥ ಯುದ್ಧದಿ ಬಲುಶೂರ ನಾನೆಂದು ಬಂದೆ। ಗುದ್ದೊಂದ ಕೊಟ್ಟು ನೀನಿಪ್ಪತ್ತ ತಿಂದೆ ॥ ಹದ್ದುಗಳರಸ ಶೌರ್ಯದಿ ಸತಿ ಹಿಂದೆ। ಮುದ್ದು ಮುಖವನೆಂತು ತೋರ್ಪೆಯೊ ಮುಂದೆ ॥ ಜೋ ಜೋ ॥ ೨ ॥

ರಾಗ ಸಾಂಗತ್ಯ ರೂಪಕತಾಳ

ವಾನರಾಧಿಪನಿಂತು ವೈನತೇಯುನನೆತ್ತಿ । ಭಾನುಮುಂಡಲದೆಡೆತಿರುಹಿ ॥ ಹೀನ ಪಾಪಿಯೆ ಪೋಗು ಕೊಲುವವರಲ್ಲೆಂದು । ಕ್ಷೋಣಿಗೆ ಬಿಸುಟನಾ ಕ್ಷಣದಿ ॥ ೧ ॥ ಗರಿಗಳೆಲ್ಲವು ಸುಟ್ಟು ಕರಗಿ ಬೆಂಡಾಗುತ್ತ । ಧರಣಿಯೊಳ್ ಬೀಳುತೇಳುತಲಿ ॥ ತರುಚರರಿನ್ನೇನ ಗೆಯ್ವರೊಯೆನುತಲಿ । ಶಿರವ ತಗ್ಗಿಸಿ ಭಯದೊಳಗೆ ॥ ೨ ॥ ಕಂಗೆಡುತಿಹನನ್ನು ಕಾಣುತ್ತ ಕಪಿಕುಲ । ಪುಂಗವನೆಂದನು ನಗುತ ॥ ಸಂಗರ ಸಾಕು ಶೌರ್ಯದಿ ನಿನಗೆಣೆಗಾಣೆ । ತುಂಗವಿಕ್ರಮರಿರೆ ಕಳುಹೊ ॥ ೩ ॥ ತರು ಚರರಿಂತೆನೆ ಗರುಡ ಹಮ್ಮೈಸುತ್ತ । ಕರಚರಣವ ನಡುಗಿಸುತ ॥ ಉರಿಯುತ್ತ ಲಿದೆ ದೇಹ । ಹರಿಯೆ ರಕ್ಷಿಸುಯೆಂದು । ಮರುಗುತ್ತ ನಡೆತಂದು ಪೇಳ್ದ ॥೪॥

ರಾಗ ಮಧುಮಾಧವಿ ಏಕತಾಳ

ಮುರಹರ ಲಾಲಿಸು ಕಪಿಗಳ್ ಸಾಹಸದಿ । ಪರಮ ವಿಕ್ರಮರಯ್ಯ ಇದಿರಿಲ್ಲ

ಜಗದಿ ॥ ಧುರದೊಳೋರ್ವನ ಕೈಯು ಹೆಣಗಿದೆ ನಾನು । ಸರಿಸರಿ ಸಮರದಿ ಕ
ಯೊಳಗವನು ॥ ೧ ॥ ಮುರಿಮುರಿ ಬಿಗಿದು ಬಾಲದೊಳೆನ್ನ ಸುತ್ತಿ । ತರ
ಮಂಡಲ ಪರಿಮಿತಕೆ ಮೇಲೆತ್ತಿ ॥ ಎಡು ಪಾರ್ಶ್ವದೊಳಿಹ ಗರಿಗಳ ಸುಟ್ಟು
ಹರುಷದಿ ತೂಗಿದ ನಾನು ಕಂಗೆಟ್ಟು ॥ ೨ ॥ ಮರುಗುತ್ತಲಿರೆ ಕೇಳಿ ನೆಲಕೆ ಅಪ್
ಳಿಸಿ । ಧುರಕೆ ಶೂರರ ಕಳುಹೆನುತಲೆ ಬೆಸಸಿ ॥ ಪರಿಪರಿ ನಿಂದೆಯು ಗೆಯ್ದುರ
ಸ್ವಾಮಿ । ಪರಮಾತ್ಮ ಸಲಹೆನ್ನ ಶರಣರ ಪ್ರೇಮಿ ॥ ೩ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಉರಗವೈರಿಯೆ ಕೇಳು ಸುರರನು । ಧುರದಿ ಸೋಲಿಸಿಯಮೃತಕಲಶವ
ಧರೆಗೆ ತಂದಿಹ ಶೂರ ನಿನಗೀ । ಪರಿಗಳೇಕೆ ॥ ೧ ॥ ಎನಲು ನಾಚುತಲೆಂದ
ಗರುಡನು । ಚಿನುಮಯನೆ ನನಗಿಂದಲಧಿಕರು । ವನಚರರ ಪರಿ ಪೇಳಲೀ ಕ್ಷಣ
ಬೆದರುತಿಹೆನು ॥ ೨ ॥ ಗರುಡ ಕೇಳೀ ಮಥುರೆಯಾಳುವ । ಧೊರೆಗಳೆಮ್ಮಗ್ರ
ಜರು ಧುರದಲಿ । ಸರಿಯು ಕಾಣೆನು ಅವರ ಶೌರ್ಯಕೆ । ಧರಣಿಯೊಳಗೆ ॥ ೩
ಹಿಂದೆ ಧುರದಿ ಪ್ರಲಂಬಮುಖ್ಯರ । ಕೊಂದು ಮೆರೆದಿಹರವರೊಡನೆ ನೀ
ನಿಂದು ವೃತ್ತಾಂತವನು ಪೇಳುತ । ಧುರಕೆ ಕಳುಹೊ ॥ ೪ ॥ ಹರಿಗೆ ತಿಳುಹಿದ
ನೆಂಬ ವಾರ್ತೆಯು । ನರುಹದಿರು ನೀನವರೊಳೊಂದನು । ತರುಚರರ ವಿಕ್ರಮ
ಗಳೆಲ್ಲವ । ನರುಹೊ ಬೇಗ ॥ ೫ ॥

ವಾರ್ಧಿಕ

ಹರಿಯು ನೇಮದಿ ಪನ್ನಗಾರಿ ಬರುತಿರಲಿತ್ತ । ಹರಿಯಗ್ರಜಾತನೊಡ್ಡೊ
ಲಗದಿ ಮಂಡಿಸಿರೆ । ಮರುಗಿ ಚರಣದಿ ಬಿದ್ದು ಪೊರಳುತಿಹನಂ ಕಂಡಿದೇನಿದಚ್ಚರಿ
ಯೆಸ್ಸುತ ॥ ಅರುಹು ಭಯವೇನೆನಲ್ ಗರುಡನತಿ ಭಕ್ತಿಯಿಂ । ಕರವ ಜೋಡಿಸಿ
ಕಾಮಪಾಲ ನೀ ಸಲಹೆಮ್ಮ । ಪುರದಿ ವಾನರವೀರರಯ್ಯಂದು ಶೌರ್ಯದಿ
ಮೆರೆವ ಪರಿಯಂ ಪೇಳ್ವೆನು ॥ ೧ ॥

ರಾಗ ಕಾಂಭೋಜಿ ಅಷ್ಟತಾಳ

ಪುರದೊಳಗಿಹ ಗೃಹಂಗಳನೆಲ್ಲ ಮುರಿದರು । ಕಾಮಪಾಲ ॥ ಪರಮಭೀತಿ
ಯುನಿತ್ತು ಜನರ ಮರ್ದಿಸುವರು । ಕಾಮಪಾಲ ॥ ೧ ॥ ಕಾಲಭೈರವನಂತೆ ಇ
ರಯ್ಯ ರೂಪಿನೊಳ್ । ಕಾಮಪಾಲ ॥ ಶೂಲಿಸಮಾನ ವಿಕ್ರಮರಯ್ಯ ಸಮ
ರದಿ । ಕಾಮಪಾಲ ॥ ೨ ॥ ಖೂಳರ ಸರಿಸದಿ ಮಾರಾಂತೆ ನಾ ಪೋಗಿ । ಕಾಮ
ಪಾಲ ॥ ಬಾಲದೊಳೆನ್ನನು ಕಟ್ಟಿ ತೂಗಿದನೋರ್ವ । ಕಾಮಪಾಲ ॥ ೩ ॥
ನಮ್ಮಯ ಪುರದೊಳಗವರ ಪೋಲುವರಿಲ್ಲ । ಕಾಮಪಾಲ ॥ ಹೆಮ್ಮೆಯಿಂ
ಪೋದರೆ ಬಡಿದು ಸಂಹರಿಪರು । ಕಾಮಪಾಲ ॥ ೪ ॥

ರಾಗ ಪಂತುವರಾಳಿ ಅಷ್ಟತಾಳ

ಏನೆಂದೆ । ತಾರ್ಕ್ಷ್ಯ । ಏನೆಂದೆ ॥ ಪ ॥ ಏನೆಂದೆ ತಾರ್ಕ್ಷ್ಯ ನೀ । ಹೀನತನ ದೊಳೀಗ । ವಾನರರನು ಬಹು । ಮಾನದಿ ಪೊಗಳುವೆ ॥ ಅ ॥ ಮಂಗಗಳ್ ಶೌರ್ಯವ ಪೊಗಳಬೇಡೀಗ । ಸಂಗರಪರಿಗಳನರಿಯುದೆ ಈಗ ॥ ಅಂಗನೆಗಳ ಮುಂದೆ ಪೇಳ್ವ ಸರಾಗ । ಭಂಗಿಸುವೆನು ನಿನ್ನ ಮೊದಲೆ ನೋಡೀಗ ॥ ಏನೆಂದೆ॥ ॥ ೧ ॥ ಧುರಪರಾಕ್ರಮಿ ಬಲರಾಮನೆಂಬುದನು । ಅರಿತು ನೀನೀ ಮಾತ ನುಡಿವೆ ಯೇಕಿನ್ನು । ಧರಣಿ ಮೂರರೊಳೆನಗಿದಿರಹರಿನ್ನು । ಇರುವರೆ ತೋರು ತೋ ರೆಲೆ ನೋಳ್ಪೆ ನಾನು ॥ ೨ ॥ ಕುಸುಮಾಂಬಕಾಗ್ರಜನಿಂತುಸಿರುತಲಿ । ಮುಸಲವ ತೂಗುತೆದ್ದನು ರೋಷದಲ್ಲಿ ॥ ಬಿಸಿ ಕಿಡಿಗಳ ನೇತ್ರದೊಳು ಕೆಡಹುತಲಿ । ಅಸಮ ವಿಕ್ರಮೀ ಬಂದ ಧುರಕೆಂದೆನುತಲಿ ॥ ೩ ॥

ರಾಗ ಭೈರವಿ ಅಷ್ಟತಾಳ

ಬಲನಿಂತು ರೋಷದೊಳು । ಸಂಗರಕೆಂದು । ಛಲದಿಂದ ಬರಲಾಗಳು ॥ ಪೊಳಲ ಜನರು ತೋಷ ತಾಳೆ ಭೂತಳವಾಗ । ವಲೆದಾಡುತಿರಲಿಕಿತ್ತ ॥ ೧ ॥ ಹೆಮ್ಮೆಯಿಂ ಬರೆ ಕಾಣುತ್ತ । ವೈಂದನು ಪೇಳ್ದ । ತಮ್ಮನೆ ಪರಿಕಿಸಿತ್ತ ॥ ನಮ್ಮೊಳು ಸಂಗರ ವಿರಚಿಸಲೋರ್ವನು । ಘಮ್ಮನೆ ಬರುತಿಹನು ॥ ೨ ॥ ಬಡಿ ದೋದು ಪೆಟ್ಟಿನೊಳು । ಶೌರ್ಯವ ತಡೆ । ಗಡಿವೆನು ನೋಡೀಗಳು ॥ ಮೃಡ ನೊಮ್ಮೆ ಬರಲು ಹಿಂದಹೆನೆ ನಾನೆಂದಿಗು । ಒಡೆಯನ ಕೃಪೆಯಿಂದಲಿ ॥ ೩ ॥ ನೀನೋರ್ವನನು ಯುದ್ಧದಿ । ಗೆದ್ದಿಹೆ ನೋಡು । ನಾನೀಗೀತನ ಧುರದಿ ॥ ಹಾನಿಯ ಮಾಳ್ಪೆನು ತಾಳು ತಾಳೆಂದೆದ್ದ । ವಾನರಾಧಿಪ ದ್ವಿವಿದ ॥ ೪ ॥ ಅನಿತ ರೊಳ್ ಬಲರಾಮನು । ಮುಂದೊತ್ತುತ । ಘನವೇಗ ನಡೆತಂದನು ॥ ಕಿನಿಸಿ ನೊಳ್ ಮುಸಲವ ತಿರುಹುತ್ತ ಪೇಳ್ದನು । ವನಚರರೊಳು ಗರ್ಜಿಸಿ ॥ ೫ ॥

ರಾಗ ಘಂಟಾರವ ಏಕತಾಳ

ಆರೆಲೊ ನಮ್ಮ ಪುರದಿ ಲೂಟಿಯನಿಕ್ಕಿ । ಕ್ರೂರ ಕರ್ಮವ ಗೈದ ವಾನರ । ವೀರರೆನ್ನಿದಿರಾಗಿರೈ ॥ ೧ ॥ ಎಂದ ಮಾತಿಗೆ ದ್ವಿವಿದ ಮೈಮುರಿದೆದ್ದು । ಮುಂದಂ ವರಿಯುತ ಸಿಂಹನಾದದೊ । ಳೆಂದ ಹಲಧರಗಾ ಕ್ಷಣ ॥ ೨ ॥ ಎಲೆಲೆ ನಮ್ಮ ವಿಚಾರಗೆಯ್ವರೆ ನೀನೀ । ಪೊಳಲಿಗಧಿಪನೆ ನಾಮವೇನೈ । ತಿಳುಹು ಎನ್ನೊಳು ನಾಚದೆ ॥ ೩ ॥ ಭೀಮವಿಕ್ರಮ ಬಲರಾಮನೆಂತೆಂಬ । ನಾಮವೆನ್ನದು ಕೇಳಿ ಬಲ್ಲೈ । ಈ ಮಥುರೆ ಯದುವೀರನು ॥ ೪ ॥

ರಾಗ ಶಂಕರಾಭರಣ ಮಟ್ಟೆತಾಳ

ಅರರೆ ಪಾಪಿ ಕೇಳೊ ಹಿಂದೆ । ಧುರದಿ ರಾವಣಾದಿಗಳನು । ತರಿದನೆಮ್ಮೊಡೆ

ಯಂನಿಂಗೆ । ರಾಮಂನೆಂಬರು ॥ ಕುರಿಯೆ ನಿನಗೆ ರಾಮನಾಮ । ವಿರುಪುದಲ್ಲವದ
ರೊಳಾದಿ । ಗಿರುವ ಬಲನಂ ಎಂಬ ಬಿರುದ । ನರಗಿಸುವೆನು ನಾ ॥ ೧ ॥ ಮರುಳೆ
ಕಪಿಯೆ ನಿನ್ನ ತೆರದ । ಧರಣಿಭಾರ ಖಳರ ನಾನು । ಧುರದಿ ಸಾಸಿರಂಗಳನ್ನು ।
ತರಿದ ಶೂರನಂ ॥ ಕರೆವರೆನ್ನ ಬಲನು ಎಂಬ । ಬಿರುದನಿತ್ತು ಧರೆಯಂ ಜನರು।
ಮರಣಕಾಲ ಬಂತು ನಿನಗೆ । ಸಾರಿ ಪೇಳ್ದೆನು ॥ ೨ ॥ ಭ್ರಷ್ಟ ನಿನಗೆ ಜನ್ಮಕಾಲ।
ತಟ್ಟನೊದಗಿ ಬಂತು ನೋಡು । ದಿಟ್ಟತನವ ತೋರ್ಪನೆನಂತ । ದ್ವಿವಿದನಾ
ಕ್ಷಣ ॥ ಮುಷ್ಟಿಯನ್ನು ಬಲಿದು ತೂಗಿ । ಕೊಟ್ಟ ರಾಮಗೊಂದನಾಗ । ಸೃಷ್ಟಿ
ನಡುಗುತಿರಲು ಫಣಿಪ । ಶಿರವ ನೊಲೆದನು ॥ ೩ ॥ ಪ್ರಳಯಕಾಲ ರುದ್ರನಂತೆ।
ಕಿಡಿಯನುಗುಳಿ ಕಾಮಪಾಲ । ನೊಲೆದು ಮುಸಲದಿಂದ ಕಪಿಯ । ಗಳಕೆ ಎರ
ಗಿದ ॥ ಹಲವ ತನ್ನ ಕರದಿ ಸೆಳೆದು । ಬಲಿಮುಖಾಖ್ಯ ತರುವ ಕೊಂಡು ।
ಹಲಧರಂಗೆ ಬಡಿದನೆತ್ತ । ಚಲಿಸದಂದದಿ ॥ ೪ ॥

ರಾಗ ಸಾಂಗತ್ಯ ರೂಪಕತಾಳ

ಧುರವ ಗೆಯ್ವರೆ ಶಸ್ತ್ರಹೀನನಾಗಿಹೆನೀಗ । ತಿರುಗಿ ಪೋಗಲು ಕಪಿ ಬಿಡನು॥
ತರುವಿನೊಳಟ್ಟಟ್ಟಿ ಬಡಿವನು ಮೂರ್ಖನು । ತೆರಳುವೆನೆಲ್ಲಿಗೆಂದೆನುತ ॥ ೧ ।
ಧರೆಯೊಳು ಹಂಬಲಿಸುತಲಿರುತಿರುತಿರೆ ಕಂಡು । ತರುಚರನೆಂದನು ನಗುತ ।
ಪರಮ ವಿಕ್ರಮದಿಂದ ಬಲನೆಂದು ಪಡೆದಿಹ । ಬಿರುದೆನ್ನ ಚರಣದ ಬಳಿಯು ॥
॥ ೨ ॥ ಪೊರಳುತ್ತಲಿದೆ ನೋಡು ವೀರ ನೀನಹೆ ಪೋಗು । ಧುರಧೀರರಿರೆ ಕಳ
ಹೀಗ ॥ ತ್ವರಿತದಿ ಕಳುಹದಿರ್ದರೆ ನಿನ್ನ ನಗರವ । ಶರಧಿಯೊಳ್ ಕವಡುವ
ಪೋಗು ॥ ೩ ॥ ಈ ರೀತಿಯೊಳು ನಿಂದೆಗೆಯ್ದು ನಿಂದಿರೆ ಕಪಿ । ವೀರರ ತಿರುಗಿ
ಈಕ್ಷಿಸುತ ॥ ಶ್ರೀರಮಾಧವನಗ್ರಜಾತನು ಹಿಂದಕೆ । ಸಾರಿದ ಮನದಿ ಚಿಂತಿಸುತ॥

ವಾರ್ಧಿಕ

ಅರಸ ಕೇಳ್ ಹಲಧರಂ ಚಿಂತಿಸುತ ಮನದೊಳಗೆ । ತರುಚರರ ದೆಸೆಯಿಂದ
ದೊರಕಿತೆನಗಪಮಾನ । ಮರುಳುತನದೊಳ್ ಪಿಂತೆ ಕೃಷ್ಣಗೊರೆಯದೆ ನಾನು
ತೆರಳಿ ಕೆಟ್ಟೆನು ಎನ್ನುತ ॥ ಒರೆಯದಿರೆ ಹರಿಗಿದನು ಪುರವ ಕೀಳುವೆನೆಂದು ।
ದುರುಳನುಸಿರಿದನಿನ್ನು ಮರೆಮಾಳ್ಪುದಲ್ಲೆಂದು । ತೆರಳಿ ಬರುವನ ಕಂಡು ಮುರ
ಹರನಿದಿರ್ಗೊಂಡು ಚರಣಕೆರಗುತಲಾ ಕ್ಷಣ ॥ ೧ ॥

ರಾಗ ಬೇಗಡೆ ಏಕತಾಳ

ಏನಿದಚ್ಚರಿ ಸ್ವಾರಿ ಬಂತೀಗ । ಅಣ್ಣಯ್ಯ ಎನಗೆ । ಸಾನುರಾಗದೊಳರುಹಿ
ನೀವ್ ಬೇಗ ॥ ನ್ಯೂನತೆಯನೆನ್ನೊಳಗೆ ನೀವದ । ನೇನ ಕಂಡಿರಿ ಮೋರೆಯು

ರು । ವ್ಯಾನ ತೋರ್ಪುದಿದಾರು ತವಂಗಪ । ಮಾನವನು ಗೆಯ್ದುಹರು ಬೆಸಸಿರಿ॥
೧ ॥ ಎನಲಂ ಹಲಧರ ನಾಚಿ ತನ್ನೊಳಗೆ । ಮುರುಗುತ್ತ ಮನದಿ । ಚಿನುವು
ಮುನೆ ಏನೆಂಬೆನೈ ನಿನಗೆ ॥ ವಿನತೆಯಾತ್ಮಜ ಬಂದಂ ಎನ್ನೊಳು । ವನಚರಂಗಳು
ಮ್ಮ ನಗರವ । ಕಿನಿಸಿನೊಳು ಲೂಟಿಯಂನು ಗೆಯ್ದುವು । ಅನುವರದಿ ತಾ
ಸೋತೆನೆಂದನು ॥ ೨ ॥ ಗರುಡನೆಂದುದ ಕೇಳುತಲಿ ಬೇಗ । ಪೋಗಿರ್ದೆ ಧುರಕೆ।
ರೆಯುದೆಲ್ಲವ ನಿನಗೆ ನಾನಾಗ ॥ ತರುಚರರು ಇಹರೀರ್ವರದರೊಳು । ದುರುಳ
ರೋರ್ವನು ಧುರದೊಳೆನ್ನನಂ । ಭರಿತ ರೋಷದೊಳ್ ಬಂದು ಗುದ್ದಿದ। ಪರಮ
ಸಾಹಸವೆಂತಂ ಪೇಳ್ವೆನು ॥ ೩ ॥ ಮುಷ್ಟಿಯಂನು ಸೈರಿಸುತ ಮುಸಲದಲಿ ।
ಕುಟ್ಟಿದೆನಯ್ಯ । ಕೆಟ್ಟ ಪಾಪಿಯುಂ ಸೆಳೆದು ಶೌರ್ಯದಲಿ ॥ ಕುಟ್ಟಿದನು ತರು
ವಿಂದ ಬಹು ಪರಿ । ಯುಟ್ಟಿಕೊಂಡಯ್ತಂದು ರೋಷದಿ । ದುಷ್ಟನಲಿ ವಿಕ್ರಮವ
ದೇಂತಂಟೊ । ದಿಟ್ಟನನು ನಾ ಪೊಗಳಲಾರೆನು ॥ ೪ ॥

ರಾಗ ಕಾಪಿ ಅಷ್ಟತಾಳ

ರೇವತೀರಮಣನೆಂದುಂದನು । ವಾಸಂ । ದೇವನು ಕೇಳಿ ಪೇಳಿದನು ॥ ಕೋವಿ
ದರ್ಮೈ ನೀವು ನಿಮ್ಮ ವಿಕ್ರಮ ಪೋಲ್ವ । ನಾವನಿಹನು ಸ್ವಾಮಿ ಈ ಮಹಿಯೊಳ
ಗಿನ್ನು ॥ ೧ ॥ ನಮ್ಮ ಶೌರ್ಯವ ಸುಡು ನೀನು । ಕಪಿ । ನಮ್ಮಿಂದಲಧಿಕನಾ
ಗಿಹನು ॥ ತಮ್ಮ ಪೋಗವನನ್ನು ಪರಿಕಿಸಿ ನೋಡೀಗ । ಹೆಮ್ಮೆಯಿಂ ಕಂಸಾದಿ
ಖಳರ ಕೊಂದಂತಲ್ಲ ॥ ೨ ॥ ಮುಸಲವ ಸೆಳೆಕೊಂಡನವನಂ । ಎನ್ನ । ವಶವಾಗು
ವುದು ಹೇಗೆಂಬುದನು ॥ ಅಸುರಾರಿ ನೀ ಬಲ್ಲೆ ದುಷ್ಟರ ತರಿದೆಮ್ಮ । ಕುಶಲ
ದೊಳಿರುವಂತೆ ಮಾಡು ನೀ ಮುಂದದಿಂದ ॥ ೩ ॥ ಧುರಕೆ ವೀರರ ಕಳುಹೆಂದು।
ಕಪಿ । ಯುರುಹಿದನ್ನೈ ಮಾತಿನ್ನೊಂದು ॥ ಬರದಿರೆ ವೀರರು ನಿಮ್ಮ ಪುರಿಯಂ
ಪೊತ್ತು । ಶರಧಿಯೊಳ್ ಕಲಕುವೆನೆಂದನೆಂಬುದ ಕೇಳಿ ॥ ೪ ॥ ಚಿತ್ತಯಿಸೀಗೆನ್ನಗ್ರ
ಜಾತ । ಉ । ನ್ಮತ್ತ ವಾನರರ ಸಂಗಾತ ॥ ಒತ್ತಿ ಕಾದಾಡಿ ನೀವ್ ದಣಿದಿರಿ
ನಂನೆಗಯ್ದು । ಸ್ವಸ್ಥದಿಂ ಮಜ್ಜನಾರೋಗಣೆಗಳ ಗೆಯ್ಸಿ ॥ ೫ ॥ ಎಂದು ಸಂತ
ಯಿಸಿ ರಾಮಂನನಂ । ತನ್ನ । ಮಂದಿರಕಯ್ದುತ್ತ ತಾನು ॥ ಇಂದೀ ಕಪಿಗಳನ್ನು
ಸಂತವಿಸುವುದಕ್ಕೆ । ನ್ನೊಂದಂ ಯಂತ್ನಗಳಿಹುದೆನುತ ಯೋಚಿಸಿದನು ॥ ೬ ॥

ವಾರ್ಧಿಕ

ಸುರರೊಡನೆ ಕಾದಿ ನಾ ಕಲ್ಪವೃಕ್ಷವ ತಂದೆ । ತರುಣಿಯರೊಳೆನ್ನ ಪೋಲುವ
ಲ್ಲವೇದೆನುತ । ಅರಸ ಸತ್ರಾಜಿತನ ಬಾಲಕಿಯು ಗರ್ವವನು ಮುರಿವೆ ನಾನೀಗ
ನುತ ॥ ಹರಿಯು ತಿಳಿದೀ ತೆರದಿ ಭಾಮೆಯುಂ ಕರೆದೆಂದ । ತರುಣಿ ಕೇಳ್

ರಾಮಾವತಾರಮಂ ನಾ ಮಾಳ್ಪೆ । ತ್ವರಿತದಿಂ ಜಾನಕಿಯು ರೂಪ ವಿರಚಿಸು ನೀನ
ತರುಚರರ ಸಂತಯಿಸಲು ॥ ೧ ॥

ಭಾಮಿನಿ

ಎರೆಯನೆಂದುದ ಕೇಳಿ ತರುಣಿಯು । ಪರಿಪರಿಯ ಸಿಂಗರವ ರಚಿಸುತ
ಬರಲು ಕಂಡಾ ಹರಿಯು ತೆಗೆ ತೆಗೆ ಸೀತೆಯಲ್ಲೆಂದ ॥ ಹರುಷದೊಳ್ ರುಗ್ಮಿಣಿ
ಯೊಳೊರೆಯಲು । ತ್ವರಿತದಿಂ ಜಾನಕಿಯು ರೂಪವ । ಧರಿಸಿ ಕೃಷ್ಣನ ಬಳಿಯ
ನಿಂದಿರೆ ಕಂಡು ನಸುನಗುತ ॥ ೧ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಬರಿದೆ ನಿನ್ನಹಂಕೃತಿಯು ಸುರರನು । ಧುರದಿ ಗೆಲಿದೆನೆನುತ್ತಲಿರುತಿಹೆ ।
ತರುಣಿ ರುಗ್ಮಿಣಿಯಾದಿಲಕ್ಷ್ಮಿಯು । ಮೂಢೆ ಕೇಳು ॥ ೧ ॥ ಬಿಡು ಬಿಡೆಲೆ ಸತಿ
ನಿನ್ನ ಗರ್ವವ । ನಡೆ ನಡೆನ್ನುತಲಾಗ ಶ್ರೀಹರಿ । ಯೊಡನೆ ಶ್ರೀರಾಮಾವತಾರವ ।
ತಾಳುತಾಗ ॥ ೨ ॥ ದಾರುಕನೆ ಪೋಗೀಗ ತರುಚರ । ವೀರರಿಗೆ ಶ್ರೀರಾಮ ಕರ
ತರೆ । ಘೋರನಟ್ಟಿಹನೆಂದು ಪೇಳೆನು । ತಾಗ ಕಳುಹೆ ॥ ೩ ॥ ತ್ವರಿತದಿಂ ದಾರು
ಕನು ಬಂದಾ । ತರುಚರಾಧಿಪರೊಡನೆ ನಿಮ್ಮನು । ಕರೆದು ತರೆ ಶ್ರೀರಾಮ ಕಳು
ಹಿದ । ನೆನ್ನನೆನಲು ॥ ೪ ॥ ಎಂದ ಮಾತಿಗೆ ಕಪಿಗಳಚ್ಚರಿ । ಗೊಂಡು ಕೈಮುಗಿ
ದಾಗ ಭಕ್ತಿಯೊಳ್ । ವಂದನೆಯ ಮನದೊಳಗೆ ಮಾಡುತ । ಲೆಂದರಾಗ ॥೫॥
ಒಡೆಯನಾಜ್ಞೆಗಳಲ್ಲದಿರ್ದಡೆ । ಬಿಡೆವು ನಿನ್ನನು ಜೀವದಾಸೆಯ । ನಿಡದಿರೆನ್ನುತ
ಕಪಿಗಳೊಳಯಿಕೆ । ಬಂದರಂದು ॥ ೬ ॥

ರಾಗ ಭೈರವಿ ಝಂಪೆತಾಳ

ದೂರದಲಿ ನೋಡುತಿರೆ ಅರಮನೆಯ ಚಿತ್ರವನು । ಶ್ರೀರಾಮನಿಳೆಯದಂದ
ದಲಿ ಶೋಭೆಯೊಳು ॥ ತೋರುವುದು ಆರರೆ ನಾವೇಕೆ ಮರುಳಾಟದಲಿ ।
ಘೋರಕೃತ್ಯವ ಗೆಯ್ದೆವೆಂದು ನಡೆತರಲು ॥ ೧ ॥ ವಾನರಾಧಿಪರಾಗ ಭಾನು
ಮಂಡಲದಂತೆ । ಭಾನುವಂಶಜ ರಾಮನಿರಲು ವಿಷ್ಟರದಿ ॥ ಜಾನಕೀಪತಿ ರಾಮ
ರಾಮೆಂದು ಚರಣದಲಿ । ದೀನಭಾವದೊಳೆರಗುತಿರಲು ಕಂಡಾಗ ॥ ೨ ॥ ವಾನ
ರಾಧಿಪರೆ ನೀವೇನು ಕಾರಣ ಬಂದು । ಹೀನಕೃತ್ಯವ ಗೆಯ್ದಿರೆನಲು ನಾಚುತಲಿ॥
ಜಾನಕೀಪತಿ ಕೇಳು ಸಖನೆಮ್ಮ ನರಕನನು । ನೀನು ಕೊಂದುದಕೀಗ ದುರುಳೆ
ಕಳುಹಿದಳು ॥ ೩ ॥

ವಾರ್ಧಿಕ

ದುರುಳ ನರಕಗು ನಿಮಗು ಮಿತ್ರತ್ವವೇನೆನಲ್ । ಹರಿಯೆ ಕೇಳಾದಿಯಲಿ
ದಾನವನು ಗರ್ವದಿಂ । ಹರಿತಂದು ನಮ್ಮೆಡೆಗೆ ನೀವಾರು ಪೇಳಿರೆಂದಬ್ಬರಿಸುತಿರೆ

ಕಾಣುತ ॥ ಧುರದಿ ನಿನ್ನಂದವಹ ಕೋಟಿ ದೈತ್ಯರನರಿದ । ತರುಚರರು ನಾವೆನಲ್ ಸಂಗರಕ್ಕಿದಿರಾಗೆ । ಶರವಿಡಿದೆವಾಗ ಖಳ ಮಿತ್ರತ್ವಮಂ ಬೆಳಸಿ ತೆರಳಿದಂ ನಿಜನಗರಿಗೆ ॥ ೧ ॥

ಭಾಮಿನಿ

ತರುಚರರೆ ಕೇಳಾನು ಪೂರ್ವದಿ । ವರವನಿತ್ತಿಹೆ ನಿಮಗೆ ಪ್ರತಿಯುಗ । ದರುಶನವನೀಯುವೆನೆನುತ್ತಲಿ ದೊರಕಿತಿದು ಸಮಯ ॥ ಇರುವೆ ನಾ ಕೃಷ್ಣಾವತಾರದಿ । ಧರೆಯ ಭಾರವನಿಳುಹಲೋಸುಗ । ಮರುಗದಿರಿ ಮನದೊಳಗೆ ತೆರಳೀಗೆನಲು ಕೇಳುತಲಿ ॥ ೧ ॥

ರಾಗ ಕೇದಾರಗೌಳ ಮಟ್ಟೆತಾಳ

ರಾಮ ರಾಮ ಸರಸಿಜೇಕ್ಷಣ । ಸಲಹೊ ಎಮ್ಮ । ಸ್ವಾಮಿ ನೀನೆ ಎನುತಲಾ ಕ್ಷಣ ॥ ಪ ॥ ಹರಿಯೆ ಎಮ್ಮ ಕೆಟ್ಟ ಕೃತ್ಯವ । ನಿನ್ನ ಮನದೊ । ಳಿರಿಸಬೇಡವಿದಕೊ ಮುಸಲವ ॥ ಪರಮ ಶೌರ್ಯದಿಂದ ಸೆಳೆದು । ಧುರದಿ ನಿನ್ನ ಜೇಷ್ಠನನ್ನು । ದುರುಳತನದಿ ಮನಕೆ ಬಂದ । ತೆರದಿ ನಾವು ಸದೆದ ಪಾಪವ ॥ ಹರಿಸಿ ಪೂರ್ಣ । ದಯದಿ ನೀನು ಪೊರೆಯೊ ಕೇಶವ । ಸಾರ್ವ ನಿನ್ನ । ಚರಣ ಭಕ್ತಿಯಿತ್ತು ಮೋಕ್ಷವ ॥ ರಾಮ ರಾಮ ॥ ೧ ॥ ಎಂದು ಹರಿಗೆ ನಮಿಸಿ ನಡೆದರು । ವಿಂಧ್ಯದೆಡೆಗೆ । ಬಂದು ಸಿಂಹಮುಖಿಯ ಕಂಡರು ॥ ಮಂದಮತಿಯೆ ದೂರ ಪೇಳಿ । ನಿಂದೆಗಾಗಿ ಒಡೆಯನೊಡನೆ । ಇಂದು ಕಳುಹಿ ಮಾನ ಕಳೆದೆ । ಕೊಂದು ಕಳೆವೆವೆನುತ ಪೊಯ್ದರು ॥ ರೋಷದಿಂದ । ಹಿಂದಲೆಯನೌಕಿ ಬಡಿದರು । ಪಾಪಿ ಪೋ । ಗೆಂದೆನುತ್ತ ಸೆರೆಯ ಬಿಟ್ಟರು ॥ ರಾಮ ರಾಮ ॥ ೨ ॥

ರಾಗ ಶಂಕರಾಭರಣ ರೂಪಕತಾಳ

ಮರುಗುತ್ತ ಸಿಂಹಾಸ್ಯೆ ತೆರಳಲು ಬಳಿಕಿತ್ತ । ತರುಚರಾಧಿಪರತ್ತ ಸುಖದಿ ॥ ಇರಲು ವಿಂಧ್ಯಾದ್ರಿಯೊಳ್ ಶ್ರೀರಾಮಸ್ಮರಣೆಯಿಂ । ಮಂರಷರನಿತ್ತ ಸಂತಸದಿ ॥ ೧ ॥ ತರುಣಿಯಂರನು ಕೂಡಿ ಮೆರೆದಿರೆ ಮಥುರೆಯೊಳ್ । ನರಕಾಸುರನ ಶಕ್ತಿಯಾಗ ॥ ತೆರಳಿದಳ್ ತನ್ನಯ ಪಿತ ಜರಾಸಂಧಗೆ । ಒರೆಯುವೆನೆಂದು ಶೋಕಿಸುತ ॥ ೨ ॥ ದೂರದಿ ಕಂಡಳಂ ಮಾಗಧ ಸಭೆಯೊಳ । ಗೇರಿರೆ ಸಿಂಹವಿಷ್ಟರವ ॥ ಧಾರಿಣಿಯೊಳು ಬಿದ್ದು । ಹಲುಬಿ ಹಂಬಲಿಸುತ್ತ । ಕ್ರೂರೆ ಗೋಳಿಡುತಡಿಗಡಿಗೆ ॥ ೩ ॥

ರಾಗ ನಾದನಾಮಕ್ರಿಯೆ ಅಷ್ಟತಾಳ

ಇಳೆಗೆ ಓಲೆಯ ಮಂರಿದಿಕ್ಕುತ । ತನ್ನ । ಗಳದ ಮಂಗಳಸೂತ್ರ ಹರಿ

ಯುತ್ತ ॥ ಅಳುತ ಮಂಡೆಯು ಕುಟ್ಟಿಕೊಳ್ಳುತ್ತ । ಹುಡಿ । ನೆಲದೊಳು
ಧೊಪ್ಪನೆ ಬೀಳುತ್ತ ॥ ೧ ॥ ತಂದೆಯು ಚರಣವ ಪಿಡಿವುತ । ಕಣ್ಣ । ನಿಂದಲ
ನೀರನ್ನು ಸುರಿಸುತ್ತ ॥ ಮೂಗಿ । ನಿಂದ ಮೂಗುತಿಯನ್ನ ಕಳಚುತ । ನೊಂದ
ಹೆಬ್ಬುಲಿಯಂತೆ ಇರಲಾಗ । ನೃಪ । ಸಂದೇಹಗೊಂಡು ಕೇಳ್ದನು ಬೇಗ ॥ ೨ ॥
ಅಳಲುವುದೇತಕೆ ಸುಕುಮಾರಿ । ನಿನ್ನ । ನೊಲಿದು ರಕ್ಷಿಪೆ ನಾನು ವಯ್ಯಾರಿ ।
ವಿಲಯರುದ್ರನ ಒನ್ಮೆ ಬಡಿವೆನು । ನಾನು । ಇಳೆಮೂರ ಹುರಿದೀಗ ತಿಂಬೆನು
॥ ೩ ॥ ಹರಿವಿಧಿಪುರಹರರೇ ಬರೊ । ಮತ್ತೆ । ಸುರಪಾಗ್ನಿ ವಾರುಣ ಮಾರುತರೊ
ತರಣಿಜ ಧನಪ ಮುಂತಾದರೊ । ವಿಕ್ಕ । ನರಕುರಿಗಳು ಕೇಡ ಗೆಯ್ದರೊ ॥೪
ಪೇಳು ಹೇಳೌ ಬಿಡು ವ್ಯಥೆಯನ್ನು । ಬೇಗ । ಹೇಳೆಂದು ತೆಗೆದಪ್ಪಿ ಕೇಳ್ದನು
ಕೇಳೆಂದು ಕಣ್ಣೀರನೊರಸುತ್ತ । ಸುದ್ದಿ । ಹೇಳಿದಳ್ ಕೊರಳನ್ನೆ ಕಟ್ಟುತ್ತ ॥೫

ರಾಗ ಮಾರವಿ ಮಟ್ಟೆತಾಳ

ಪಿತನೆ ಕೇಳೊ ಎನ್ನ ಪರಿಯ । ನೆಲ್ಲ ಮರುಕದಿ ॥ ವ್ಯಥೆಯ ಕೇಳ್ವ ದಾ
ನೀನು । ಪೇಳ್ವೆ ತ್ವರಿತದಿ । ನಾನು । ಪೇಳ್ವೆ ತ್ವರಿತದಿ ॥ ೧ ॥ ಮೊನ್ನೆ ದಿವ
ಕೃಷ್ಣನೆಂಬ । ಪಾಪಿ ಧುರದಲಿ ॥ ಎನ್ನ ಪತಿಯ ತರಿದನಲ್ಲೊ । ಎತ್ತ ಪೋಗಲಿ
ನಾನಿ । ನ್ನೆತ್ತ ಪೋಗಲಿ ॥ ೨ ॥ ಶೂರ ಖಳರನೆಲ್ಲ ತರುಬಿ । ಮುರನು ತೆ
ಳಲು ॥ ಚೋರ ಕೃಷ್ಣನೆಲ್ಲರನ್ನು । ತರಿದ ಧುರದೊಳು । ತಾ । ತರಿದ ಧು
ದೊಳು ॥ ೩ ॥ ಸುರಪನುಚ್ಚೈಶ್ರವವು ಐರಾ । ವತಗಳೆಲ್ಲವ ॥ ತರುಣಿವಿಂಡ
ಗಳನು ತರುಬಿ । ನಡೆದ ಮಾಧವ । ತಾ । ನಡೆದ ಮಾಧವ ॥ ೪ ॥ ಪತಿ
ಸಖಿರು ಮ್ಯಂದ ದ್ವಿವಿದ । ರೊಡನೆ ಪೇಳಿದೆ ॥ ಮತಿವಿಹೀನರೆನ್ನ ಪೊಯ್ದು
ರರಿಯ ತರಿಯಂದೆ । ಎನ್ನ । ಅರಿಯ ತರಿಯಂದೆ ॥ ೫ ॥ ಪಿತನೆ ಕೇಳ್ವರಿ
ಮುಂದೆ । ಗತಿಯು ಕೆಟ್ಟೆನು ॥ ಪತಿವಿಹೀನಳಾಗಿ ಜಗದೊ । ಳೆಂತು ಬಾಳ್ವೆನು
ನಾ । ನೆಂತು ತಾಳ್ವೆನು ॥ ೬ ॥

ಭಾಮಿನಿ

ಅಂತಕನ ಹೆತ್ತಯ್ಯನೋ ಕ । ಲ್ಪಾಂತ ರುದ್ರನೊ ಮಾಗಧ ಪೃಥ್ವೀ
ಕಾಂತನೋ ಹಾ ಎನುತಲಾ ಸಭೆಯೊಳಗೆ ನಡುಗಿದರು ॥ ಕುಂತವನು ನೆಗಹು
ನೋಡಿ ದಿ । ಗಂತವನು ಧೂಮಾಯಮಾನದೃ । ಗಂತಮಂಡಲನಾಗಂತೆದ್ದ
ಗದ್ದುಗೆಯ ಹೊಯ್ದು ॥ ೧ ॥

ರಾಗ ಪುನ್ನಾಗ ತೋಡಿ ಅಷ್ಟತಾಳ

ಪೇಳಲಾರೆ ನಾನು । ಶೋಕಾಗ್ನಿಯ । ತಾಳಲಾರೆನಿನ್ನು ॥ ಪ ॥ ಹಿ

ಕಂಸನಿಂಗೆ । ಮಗಳನಿತ್ತು । ನೊಂದೆ ವ್ಯಥೆಯೊಳಗೆ ॥ ಅಂಧಕಾರಿಗೆ ಸಮನು ನರಕನಂ । ನಂದನೆಗೆ ಕುಂದಿಲ್ಲವೆನ್ನುತ । ಲಂದು ಕೊಟ್ಟುದಕಿಂದು ಬವಣೆಯು। ಬಂದುದೇಯಡಿಗಡಿಗೆ ಶಿವ ಶಿವ ॥ ಪೇಳಲಾರೆ ನಾನು ॥ ೧ ॥ ಗೊಲ್ಲರಥಮನೀತ। ಕೃಷ್ಣನು ಬಹು । ಕಳ್ಳ ಜಾರನೆಂತ ॥ ಮಲ್ಲದೈತ್ಯರ ಆಟವಿಗೊರ್ವನೆ । ಕೊಳ್ಳಿಯಾದನೆ ಇವನ ರಣದಲಿ । ಹಲ್ಲ ಕೀಳದೆ ಬಿಡಲು ಮಾಗಧ । ವಲ್ಲಭನೆ ನಾನೆಂತು ಹರ ಹರ ॥ ಪೇಳಲಾರೆ ನಾನು ॥ ೨ ॥ ಬಾಲಕೃಷ್ಣನೊಳು । ಯುದ್ಧದಿ ಹದಿ । ನೇಳು ಬಾರಿಯೊಳು ॥ ಕಾಳಗಕೆ ನಾ ಪೋದ ಕಾಲದಿ । ಖೂಳನೆಮ್ಮಯ ಸೈನ್ಯ ಕೆಡಹುತ । ಜಾಲತನದೊಳಗಡಗಿ ಪೋಗಿಯೆ । ಶೂಲವಾದನೆ ಅರರೆ ಇಂದಿಗೆ ॥ ಪೇಳಲಾರೆ ನಾನು ॥ ೩ ॥

ಕಂದ

ತರಳೆಯ ಮನ್ನಿಸಿ ಸೇನೆಯ । ನೆರಹಿದನೈದಕ್ಷೌಹಿಣಿ ದುರುಳರ ತ್ವರೆಯೊಳ್॥ ಶಿರವರಿದೀ ಕ್ಷಣ ಹರಿಯಂ । ತರಣಿಜನಲ್ಲಿಗೆ ಕಳುಹುವೆನೆನುತಲೆ ಮಾಗಧಂ ॥೧॥

ರಾಗ ಮಾರವಿ ಏಕತಾಳ

ಎಂದುತ್ಸಾಹದಿ ಮಾಗಧ ಸಮರಕೆ । ಮಂದಿಗಳೆಲ್ಲವನು ॥ ಸಂದಣಿಸಂತ ರಥ ಹಯ ಗಜ ಸಹಿತಲೆ । ಮುಂದರಿದಯ್ದಿದನು ॥ ೧ ॥ ಶರಧಿಯ ರವವೆನೆ ಘೋರ್ಗರೆಯುತಲಾ । ದುರುಳನು ಸೇನೆಯನು ॥ ತೆರಳಿಚಿ ಬಂದಾ ಮಥುರಾ ಪುರಿಯನು । ಪರಿಕಿಸುತಾಗವನು ॥ ೨ ॥ ಮಧುಸೂದನಪುರಹೊರಗಿನುದ್ಯಾನದಿ । ಮುದಮುಖ ನೆಲಸಿರಲು ॥ ಮುದದಿಂದಂಬರಮಣಿ ತಾ ಪಡುವಲಿ । ನುದಧಿಯ ಪೊಗುತಿರಲು ॥ ೩ ॥ ಆ ರಜನಿಯೊಳಾ ಸೇನೆಯನೊಂದೆಡೆ । ಘೋರನೆ ತರುಬುತಲಿ ॥ ಮಾರನೆದಿನ ಪುರಮುತ್ತಿಗೆಯೆನ್ನುತ । ಸಾರಿಸಿ ಡಂಗುರವ ॥ ೪ ॥ ಪರಿವಿಡಿದೊಂದೆಡೆ ಮಲಗಿರೆ ವನದಲಿ । ಅರಿತಿದನೆಲ್ಲವನು ॥ ಪರಿಕಿಸಿ ವನಪಾಲಕರದ ಶ್ರೀಹರಿ । ಗೊರೆದರು ಕಂಡುದನು ॥ ೫ ॥

ರಾಗ ಆರ್ಯಾ ಲಾವಣಿ

ಜಯ ಜಯ ಮುರಲೀಧರ ಗೋವಿಂದ । ಜಯ ಜಯ ನಿತ್ಯಾನಂದ ॥ ಜಯ ರಾಧಾಕುಚಸಾರಸಹಂಸ । ಜಯ ಕಂಠೀರವಕರಿಕಂಸ ॥ ೧ ॥ ಯಮುನಾನದಿತಟವನದೊಳು ಮಾಗಧ । ಜಮುಕಾಯ್ಸಿಯೆ ಮಾರ್ಬಲಗಳನು ॥ ಕುಮತಿಯು ವೀರಾವೇಶದಿ ಬಲಸಹ । ಕಮಲಾಪ್ತನ ಬರ ನೋಡುವನು ॥ ೨ ॥ ಶರಧಿಯು ರವವೆನೆ ಗೊರೆಯುತ ರಿಪುಶ್ರೇಣೀ । ಹರಗಳು ನಿದ್ರೆಯಲಿ ॥ ಕರಿರಥ ವಾಜಿಗಳೈದಕ್ಷೌಹಿಣಿ । ಪರುಟವಿಸಿದೆ ಬಲ್ ರೆಷೋಕಿನಲಿ ॥ ೩ ॥

ರಾಗ ಭೈರವಿ ಅಷ್ಟತಾಳ

ವನಪಾಲರೆಂದುದನು । ಕೇಳುತಲಾಗ । ವನಜಾಕ್ಷ ಮನದಿ ತಾನು ॥ ಘನ
ಪಾಪಿ ಮಗಧನ ತರಿವರೀಗೊಂದೆತ್ನ । ವನು ಗೆಯ್ಯಬೇಕೆನ್ನುತ ॥ ೧ ॥ ಬಲ
ರಾಮನೊಡನೆಲ್ಲವ । ಯೋಚಿಸುತಾಗ । ಖಳನೊಳು ಸಂಗರವ ॥ ತಿಳಿಯ
ದಂದದಿ ಪೋಗಿ ನಿದ್ರಿಪ ವೇಳ್ಯದಿ । ಗೆಲಬಹುದೆಂದೆನುತ ॥ ೨ ॥ ಕರೆಸಿಯಕ್ರೂರ
ನನ್ನು । ಸಾತ್ಯಕಿ ಗದ । ಸ್ಮರ ಕೃತವರ್ಮರನ್ನು ॥ ಕುರಿತುರಗವು ರಥವೈದ
ಕ್ಷೌಹಿಣಿ ಸೈನ್ಯ । ಪೊರಟರು ಧುರಕೆನ್ನುತ ॥ ೩ ॥ ಗರುಡನ ಪೆಗಲನೇರಿ । ಚಕ್ರವ
ಕೊಂಡು । ತೆರಳಿದ ನರಕವೈರಿ ॥ ತ್ವರೆಯೊಳಂ ಬಲರಾಮ ಮುಖ್ಯರೆಲ್ಲರು
ಪಿಂತೆ । ತೆರಳಿದರೆಡಬಲದಿ ॥ ೪ ॥ ವಿಪಿನದಿ ನೆಲಸಿರುವ । ಮಗಧೇಶನ । ಅಪರಿ
ಮಿತದ ಬಲವ ॥ ಗುಪಿತದಿ ನಿದ್ರೆಯೊಳಿಹರನು ಮುತ್ತಿದ । ರಪರರಾತ್ರೆಯೊ
ಳಿವರಂ ॥ ೫ ॥

ಭಾಮಿನಿ

ಮೊಳಗುತಿಹ ನಿಸ್ಸಾಳತತಿಗಳಿ । ಗಳುಕುತಿರೆ ದಿಕ್ಕರಿಯು ಕಮಠನ । ತಲೆ
ಕಂಪಿಯೆ ಜಗದೊಳಗೆ ಗರ್ಭಿಣಿಸತಿಗಳೊಡಲೊಡೆದು ॥ ಇಳಿದುದವನಿಗೆ ಗರ್ಭ
ವೆನೆ ದಳ । ದುಳವ ಹಾಯ್ದು ಸುರಾರಿ ಪರಬಲ । ಜಲಧಿಯಲಿ ಮೊಳಗಿಸಿದನಾ
ಕ್ಷಣ ಪಾಂಚಜನ್ಯವನು ॥ ೧ ॥

ರಾಗ ಸೌರಾಷ್ಟ್ರ ಮಟ್ಟೆತಾಳ

ಭೋರನೆದ್ದರಂದು ಸುಭಟರು । ಘೋರನಿದ್ರೆ ತ್ಯಜಿಸುತಾಗ । ಭೋರನೆದ್ದ
ರಂದು ಸುಭಟರು ॥ ಪ ॥ ಸುತ್ತಿಕೊಂಡ ರಿಪುಸಮೂಹವ । ಕಂಡು ನಡುಗಿ ।
ಚಿತ್ತದೊಳಗೆ ತಾಳಿ ಭೀತಿಯ ॥ ಕತ್ತಿಗಳನು ಬಿಸುಟು ಒರೆಯ । ನೆತ್ತಿಕೊಂಡು
ಪೊಯ್ದರಾಗ । ವತ್ತಿಲಿರುವ ತಮ್ಮ ಜನರ । ಮುತ್ತಿ ಗುದ್ದಿ ಕೆಡಹುತಿಹರು ॥
॥ ೧ ॥ ಕೆಲರು ಬರಿಯ ಗಜವನೇರುತ । ಅಸ್ತ್ರಶಸ್ತ್ರ । ಗಳು ವಿಹೀನರಾಗಿ ನಡೆ
ಸುತ ॥ ಕೆಲರು ತುರಗಹೀನರಥವ । ನಲಿದು ಹತ್ತಿಕೊಂಡು ಕೂಡೆ । ಚಲಿಸ
ದಿರಲು ಇಳಿದು ಹಯವ । ಕೆಲರು ತಿರುಗಿ ಕುಳಿತರಾಗ ॥ ೨ ॥ ನಿದ್ರೆಯಿಂದ
ಮರುಳರಂದದಿ । ಇರುವ ಜನರ । ಗುದ್ದಿ ಗುದ್ದಿ ಕೆಡಹಿ ಹರುಷದಿ ॥ ಉದ್ದ
ವಾದಿ ಯದುಸಮೂಹ । ಪೆದ್ದು ಶರವ ಸುರಿಸುತಿರಲು । ಉದ್ಧರಿಸಿಯೆನುತ್ತ
ಕೆಲರು । ಬಿದ್ದು ಬಿದ್ದು ಪೊರಳುತಿಹರು ॥ ೩ ॥ ಮಗಧಪಾಲ ಕಂಡು ಪರಿಗಳ ।
ಕಂಪಿತನಾಗಿ । ಹಗೆಗಳೊಡನೆ ನಮ್ಮ ಛಲಗಳ ॥ ಮಿಗುವುದೀಗ ಕಾರ್ಯವೆನುತ ।
ನಗಧರನ್ನ ಹುಡುಕುತಿರಲು । ಬಗೆಯು ತೋರ್ಪನೆನುತ ರಾಮ । ಮಗಧ
ನಿದಿರು ನಿಂದು ಪೇಳ್ದ ॥ ೪ ॥

ರಾಗ ಮಾರವಿ ಮಟ್ಟೆತಾಳ

ಎಲವೊ ಖಳನನೇಕ ಬಾರಿ ಛಲದಿ ಕಾದಿದೆ । ಗೆಲುವುಯಿಲ್ಲ ಕಡೆಯ ಕಾಲ
ಂದಂ ಒದಗಿದೆ ॥ ೧ ॥ ಗೊಲ್ಲರಧಮ ನಿನ್ನ ಕೊಲುವುದಾವ ಗಣ್ಯವು । ಖುಲ್ಲ
ನಗೆ ಬಂತು ನೋಡು ಕಡೆಯ ಕಾಲವು ॥ ೨ ॥ ದುರುಳ ನಿನ್ನ ತೆರದ ಖಳರ
ಂದೆ ಧುರದಲಿ । ಶಿರವ ಧರಣಿಗುರುಳಿಸಿಹೆವು ನಡೆಯೊ ಗುಣದಲಿ ॥ ೩ ॥
ುರವ ಬಗಿದಂ ತೆಗೆವೆ ನೋಡ ಧುರದೊಳಳಿದರ । ಪರಿಕಿಸಿಂದು ನರಕ ಕಂಸ
ಮುಖ್ಯದೈತ್ಯರ ॥ ೪ ॥

ರಾಗ ಶಂಕರಾಭರಣ ಮಟ್ಟೆತಾಳ

ದುರುಳನೆಂದ ಮಾತ ಕೇಳಿ । ಕೆರಳಿ ರಾಮ ಮುಸಲವನ್ನು । ತಿರುಹಿ ಗುರಿಯ
ಟ್ಟು ಭರದಿ । ಶಿರಕೆಯೆರಗಿದ ॥ ೧ ॥ ಬರುವ ಹತಿಗೆ ತಪ್ಪಿ ಮಗಧ । ತರುವ
ತ್ತು ಬಡೆಯಲಾಗ । ಮುರಿದ ತರುವ ಮಧ್ಯಪಥದಿ । ರೌಹಿಣೇಯನು ॥ ೨ ॥
ರಳುತಾಗ ಮಗಧಪಾಲ । ಶಿರಕೆ ಮುಷ್ಟಿಯಿಂದಲೆರಗೆ । ಬರುವ ಮುಷ್ಟಿ
ೂಂದಕೆರಡ । ನಿತ್ತ ರಾಮನು ॥ ೩ ॥ ಕೆಟ್ಟಿತೀಗ ಸಮಯವಲ್ಲ । ಬಟ್ಟೆಯರಿಯ
ಹವು ಸೈನ್ಯ । ಕೆಟ್ಟ ನಿಶಿತಕಾಲವೆಂದು । ಮಗಧ ನೋಡಿದ ॥ ೪ ॥ ಸೋತಂ
ೋಗಂತಿಹನ ಕಂಡು । ಪೀತವಸನ ನಗುತಲಾಗ । ಪೂತು ಮಝರೆ ವೀರನೆಂದು।
ಂದೆಗೆಯ್ದನು ॥ ೫ ॥ ದುಷ್ಟ ಮಗಧಸೈನ್ಯ ಕಂ । ಗೆಟ್ಟು ಓಡೆ ಕೆಲರು ಮತ್ತೆ।
ಟ್ಟತನದಿ ಬಹರ ಕೃಷ್ಣ । ನಟ್ಟಿ ಹೊಯ್ದನು ॥ ೬ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಕೆಟ್ಟೆವೆನ್ನುತ ಕೆಲರು ಬಾಯೊಳ । ಗಿಟ್ಟು ಬೆರಳನು ಕೆಲರು ಕೈದುವ । ಬಿಟ್ಟು
ಮ್ಮನೆಯೊದರುತಿರ್ದರು । ಧಾತ್ರಿಯೊಳಗೆ ॥ ೧ ॥ ಹೊರಳುತಿರೆ ಕುದುರೆ
ಳು ಕರಿರಥ । ಉರುಳುತಿರೆ ಸೇನೆಗಳು ಧರೆಯಲಿ । ಕರಮುರಿದು ತೊಡೆ
ರಿದೀ ಗೋಳಿಡೆ । ಹರಿಯು ಕಂಡು ॥ ೨ ॥ ಕೊಲ್ಲದಿರಿ ಕೈಮಾಡದವರನು ।
ಲ್ಲದಿರಿ ವಿರಥರನು ಪ್ರತಿಭಟ । ರಲ್ಲದವರನು ಕೊಲ್ಲಬೇಡಿಂ । ತೆಂದ ಹರಿಯು॥
೩ ॥ ಬಿಲ್ಲ ಬಿಸುಟರ ಶಸ್ತ್ರಹೀನರ । ಕೊಲ್ಲದಿರಿ ಬಿಡಿಯೆನಲು ಯಾದವ ।
ಸಂತೋಷದಲಿ ಸಮರವ । ಬಿಟ ರಾಗ ॥ ೪ ॥

ರಾಗ ಭೈರವಿ ಝಂಪೆತಾಳ

ಮರೆಯ ಹೊಕ್ಕಿಹ ಜನರ । ಕರುಣದಲಿ ರಕ್ಷಿಸುತ । ಹರಿಯು ಸಂತೋಷ
ಳ । ಗರುಣನುದಯದೊಳು ॥ ತೆರಳಿದನು ಪುರಕೆ ಬಲರಾಮ ಕೃತವರ್ಮ

ಗದ । ವರ ಮನ್ಮಥಾಕ್ರೂರ ಸಾತ್ಯಕಿಗಳೊಡನೆ ॥ ೧ ॥ ಪರಮಪುರಂಪನು ಪುರಕೆ । ತಿರುಗುತಿಹ ಕಾಲದೊಳು । ತರಣಿ ಪೂರ್ವಾದ್ರಿಯನು । ಪರಿಶೋಭಿಸಿರಲು ॥ ಸರಕಾರಿ ಯಾದವರ ಪಡೆಸಹಿತ ಬರುತಿರಲಂ । ಪುರಜನರು ಭಕ್ತಿಯೊಳಗೆರಗಿ ಸ್ತುತಿಸಿದರು ॥ ೨ ॥ ಮಂದಿರಕೆ ನಡೆತಂದು । ತಂದೆತಾಯ್ಗಳಿಗರುಹಿ । ಚೆಂದದಿಂ ಮಜ್ಜನವ । ಗೆಯ್ದು ಭೋಜನವ ॥ ಮಂದಹಾಸದೊಳೆಸಗಿ ಓಲಗಕೆ ನಡೆತಂದು । ಮಂಧರಾಧರ ತನ್ನ ಮನದಿ ಯೋಚಿಸಿದ ॥ ೩ ॥

ವಾರ್ಧಿಕ

ವಾರಿಧಿಯ ಮಧ್ಯದ ಕುಶಸ್ಥಳೀ ನಗರದೊಳ್ । ಧಾರಿಣಿಪನೇಕವೀರನಿಗೊಂದು ಸಮಯದಲಿ । ಕ್ರೂರ ಮುನಿ ದುರ್ವಾಸ ಶಪಿಸಲಾ ಪುರವಾಗ ಸುಟ್ಟು ಭಸ್ಮಿತವಾದುದು ॥ ವೀರನೃಪನರಸಿ ಪತಿವ್ರತೆಯೆನ್ನ ಭಜಿಸಂತಲಿ । ನಾರಿಮಣಿಯೋರ್ವಳಾ ರಾಷ್ಟ್ರದೊಳು ಕುಳ್ಳಿರಲು । ಸಾರಿ ಪೇಳಿದೆ ವರವ ಬೇಡೆನಲ್ಕಾ ತರುಣಿ ಎರಗಿ ಸ್ತುತಿಸುತಲೆಂದಳಂ ॥ ೧ ॥

ಭಾಮಿನಿ

ಹರಿಯೆ ಕೇಳ್ ಮುನಿಶಾಪದಿಂದೀ । ಪುರದ ಪ್ರಾಣಿಗಳೆಲ್ಲ ಗತಿಸಿತು । ಪರಮಪದಗಳನಿತ್ತು ಸಕಲರ ಪೊರೆವುದೊಂದೀಗ ॥ ವರವ ಮತ್ತೊಂದೆನಗೆ ನೀನೀ । ಪುರಿಯನಾಳ್ವುದು ಮುಂದಕೆನ್ನುತ । ತರುಣಿ ಮುಕ್ತಿಯನಯ್ದೆ ಗುಪಿತದಿ ಕಾರ್ಯ ನಡೆಸುವೆನು ॥ ೧ ॥

ರಾಗ ರೇಗುಪ್ತಿ ಅಷ್ಟತಾಳ

ದೊರಕಿತು ಸಮಯವಿದೆನಗೆ । ಇದ । ನೊರೆಯಬಾರದು ಸಕಲರಿಗೆ ॥ ದುರುಳ ಮಾಗಧನುಪಟಳದಿಂದೀ ಪುರವನ್ನು । ತೊರೆದರೆನ್ನುತಲಾಗಲೆಂದನಗ್ರಜನೊಳು ॥ ೧ ॥ ಲಾಲಿಸಗ್ರಜನೆನ್ನ ನುಡಿಯ । ಕಡು । ಖೂಳ ಮಾಗಧನುಪಟಳವ ॥ ತಾಳುವುದೆಂತಿನ್ನು ಹದಿನೆಂಟು ಬಾರಿಯೊಳು । ಕಾಳಗಕಯ್ತಂದು ತಪ್ಪಿಕೊಂಡಿಹನೀಗ ॥ ೨ ॥ ಇಂದೊ ನಾಳೆಗೊ ಸೈನ್ಯ ಕೂಡಿ । ಜರಾ । ಸಂಧನು ಬಹನಯ್ಯ ಖೋಡಿ ॥ ಕೊಂದು ಹೋಹನೊ ಯಂದುವೃಂದವನೆಲ್ಲ । ಮಂದಿರ ಕೊಯ್ವನೊ ಸೆರೆವಿಡಿಯುತ ತಾನು ॥ ೩ ॥ ಯತಿಶಾಪವಿಹುದು ಆತನಿಗೆ । ಸರಿ । ತೃತಿಯನ್ನುಲ್ಲಂಘಿಸದ್ಹಾಗೆ ॥ ಮತಿಗೆಟ್ಟು ನಾವೀ ಪುರಿಯೊಳಗಿರ್ದರೆ । ವ್ಯಥೆಗಳುಂಟೆಮಗಾತನಿಂದ ಲಾಲಿಪುದಣ್ಣ ॥ ೪ ॥ ದುರ್ಗವಿದಲ್ಲವು ನಮಗೆ । ಬೇರೆ । ದುರ್ಗವು ನೂತನದೊಳಗೆ ॥ ದುರ್ಗಮವಾದ ಕೋಟೆಗಳಿಂದಲಿಹ ಜಲ । ದುರ್ಗವೊಂದಿಹುದು ಸಮುದ್ರದ ಮಧ್ಯದಿ ॥ ೫ ॥

ರಾಗ ಭೈರವಿ ಏಕತಾಳ

ಅದಕೆ ಕುಶಸ್ಥಳಿಯೆಂದಂ । ಪೆಸ । ರಿದೆ ಕೇಳ್ ಗುಣಸಿಂಧಂ ॥ ಉದಧಿ
ಯೊಳ್ ಮುಳುಗಿಹುದೀಗ । ನಾ । ವದಕೀಗಯ್ದುವ ಬೇಗ ॥ ೧ ॥ ದುರಂಳನಿ
ಗಸದಳವೆನುತ । ಸಂ । ಕರುಷಣನನು ಒಡಗೊಳುತ ॥ ತೆರಳೆ ರತ್ನಾಕರ
ನೆಡೆಗೆ । ಬಂ । ದೆರಗಿ ಸಮುದ್ರನು ಹರಿಗೆ ॥ ೨ ॥ ಸ್ವಾರಿಯಿಂದೇನೆಂದೆನುತ ।
ಸಾರಾ । ವಾರನು ಉಪಚರಿಸುತ್ತ ॥ ಭೂರಿಭಕ್ತಿಯೊಳ್ ನಲಿಯುತ್ತ । ಲಿರೆ ।
ವಾರಿಜನೇತ್ರನು ನಗುತ ॥ ೩ ॥ ಶರಣಸಂದರುಶನಕಂದು । ನಾ । ಹರಿ
ತಂದೆನು ಗುಣಸಿಂಧು ॥ ಶರಧಿ ಕೇಳ್ ಭಕ್ತರ ವಶದಿ । ಎನ್ನ । ಹರಣವು
ಇಹುದೈ ಮಂದದಿ ॥ ೪ ॥ ಧಾರಿಣಿಯೀರೇಳರನು । ಕಂ । ಸಾರಿಯೆಂ ನೀ
ಸಲಹಂವನು॥ಕಾರಣವೇನಾಗಮನ । ಎನ್ನಾ । ಗಾರಕೆ ರುಗ್ಮಿಣಿರಮಣ ॥ ೫ ॥

ರಾಗ ಕೇದಾರಗೌಳ ಅಷ್ಟತಾಳ

ಕಾರ್ಯವುಂಟೆಮಗೆ ಕೇಳ್ ನಿನ್ನೊಳಗಡಗಿಹ । ಚಾರಂ ಕುಶಸ್ಥಳಿಯಂ ॥
ವಾರಿಧಿರಾಜ ನೀ ಕೊಡಲದರೊಳು ಪರಿ । ವಾರ ಸಹಿತಲಿರ್ಪೆನಂ ॥ ೧ ॥ ಪನ್ನ
ಗಾರಿಧ್ವಜನೆಂದ ಮಾತಿಗೆ ಸಿಂಧು । ಉನ್ನತ ಹರುಷವ ತಾಳ್ದು ॥ ಹನ್ನೆರಡು
ಯೋಜನದಳತೆ ಕುಶಸ್ಥಳಿ । ಯನ್ನು ಕೊಟ್ಟನು ಹರಿಗೆ ॥ ೨ ॥ ಹರುಷದೊಳ್
ಮುರಹರ ವಿಶ್ವಕರ್ಮನ ನೆನ । ವರಿಕೆಯು ಗೆಯ್ಯಲಾಗ ॥ ಹರಿತಂದು ವಂದಿಸೆ ।
ಪುರವ ಶೃಂಗರಿಸೆನೆ । ವಿರಚಿಸಿದನು ಮುದದಿ ॥ ೩ ॥ ಹೊನ್ನ ಕಲಶ ಸೌವರ್ಣ
ಮಂದಿರಗಳ । ಉನ್ನತಹರ್ಮ್ಯದಿಂದ ॥ ಬಿನ್ನಣವಹ ಚಿತ್ರಪತ್ರಪತಾಕೆಯೊಳ್ ।
ಚೆನ್ನಾಗಿ ಶೃಂಗರಿಸೆ ॥ ೪ ॥ ಪೊಳೆವ ರತ್ನದ್ವಾರ ವಜ್ರಕವಾಟಗಳ್ । ಚೆಲುವ
ವೀದಿಗಳಿಂದಲಿ ॥ ತಿಳಿನೀರ ಕೊಳಗಳ ಸುತ್ತಣುದ್ಯಾನವ । ಥಳಿಲನೆ ವಿರಚಿಸಿದ
॥ ೫ ॥ ದ್ವಾರ ಸಾಸಿರದಿಂದ ಗೆಯ್ದಿಹ ನಗರಕೆ । ದ್ವಾರಕಾಪುರವೆನ್ನುತ ॥ ವಾರಿ
ಜಾಕ್ಷನಂ ನಾಮವಿತ್ತು ಯಾದವರನ್ನು । ಭೋರನೆ ಕರೆತಂದನಂ ॥ ೬ ॥

ಭಾಮಿನಿ

ಚಿತ್ತದಲಿ ಸಂತೋಷ ತಾಳ್ದು ಯ । ದೂತ್ತಮನು ಕುಲಸಹಿತ ಪುರಜನ ।
ವೊತ್ತವನು ತಂದಿರಿಸಿದನಂ ತತ್ಪುರಗೃಹಂಗಳಲಿ ॥ ಎತ್ತಲಿದು ನಾವಾರು
ಮಥುರೆಯಿಂ । ದೆತ್ತಲೆನ್ನುತ ಪೊಗಳೆ ಸರ್ವರು । ಚಿತ್ತಜನ ಪಿತನಿರ್ದ
ನೈಕುಂಠಕ್ಕೆ ಮಿಗಿಲೆನಿಸಿ ॥ ೧ ॥

ರಾಗ ಸುರುಟಿ ಏಕತಾಳ

ಮುರಹರನೀ ತೆರದಿ । ದ್ವಾರಕಾ । ಪುರದೊಳು ಸಂತಸದಿ ॥ ಇರುತಿರೆ

ತನ್ನೊಳು ನೆನೆಯುತಲೊಂದಿನ । ತರುಣಿ ರುಗ್ಮಿಣಿಯೊಡನೆಂದನು ಮೋದದಿ॥ ॥ ೧ ॥ ಚಂದಿರಾಸ್ಯೆ ಕೇಳೆ । ಮಲಯಜ । ಗಂಧಿನಿ ಗುಣಶೀಲೆ ॥ ಹಿಂದೆ ನಾವ್ ಮಥುರೆಯೊಳಿರುತಿರೆ ದೈತ್ಯರು । ಬಂದು ಪೀಡಿಸುತಿರೆ ದಣಿದೆವು ಸಂತತ ॥ ॥ ೨ ॥ ಇಲ್ಲಿಗೆ ಕರ್ಬುರರು । ಎಂದಿಗು । ಖುಲ್ಲರು ಬರರವರು ॥ ವಲ್ಲಭೆ ಕೇಳ್ ವೈಕುಂಠದ ತೆರದೊಳು । ಚೆಲ್ವಿನೊಳೆಸೆವುದು ದ್ವಾರಕೆನಗರವು ॥ ೩ ॥ ಎರೆಯನ ನುಡಿ ಕೇಳಿ । ಪೇಳ್ದಳು । ತರುಣಿಯು ಮುಂದ ತಾಳಿ ॥ ವರ ವೈಕುಂಠಕೆ ಮಿಗಿಲೆನಿಪುದು ಸರಿ । ಕೊರತೆಯೊಂದಿದೆಯುದನರುಹುವೆ ರಮಣ ॥೪॥

ರಾಗ ಶಂಕರಾಭರಣ ತ್ರಿವುಡೆತಾಳ

ಲಾಲಿಸೆನ್ನಯ ನುಡಿಯ ಶ್ರೀಹರಿ । ಬಾಲನಹ ಮನ್ಮಥನಿಗೆ ॥ ಶೀಲೆ ರತಿಯರ್ಧಾಂಗಿಯಾಗಿರೆ । ಪೂರ್ವದೊಳಗೆ ॥ ೧ ॥ ದುರುಳ ಶಂಬರನಲ್ಲಿ ತನ್ನಯ । ಎರೆಯನಹ ಮನ್ಮಥನನು ॥ ತರುಣಿ ರತಿ ಸಲಹಿದಳು ಜ್ಯೇಷ್ಠಳು । ಎಂಬ ವಾರ್ತೆ ॥ ೨ ॥ ಪುರದೊಳಗೆ ಹರಹಿರ್ದ ಕಾರಣ । ಸ್ಮರನರಸಿಯವಮಾನದಿ ॥ ಬರುವೆನನ್ಯರೊಳ್ ಜನಿಸಿ ಮುಂದಕೆಂ । ದೆನುತ ಭರದಿ ॥ ೩ ॥ ತನುವ ನೀಗುತ ಪೋಗೆ ಸುದತಿಯು । ನೆನೆಯುತೆನ್ನಯ ತನುಜನು ॥ ದಿನದಿನದಿ ಶೋಕಿಪನು ಶ್ರೀಹರಿ । ಲಾಲಿಸಿನ್ನು ॥ ೪ ॥ ರತಿಯು ಮುಂದುದ್ಭವಿಸಿ ಎನ್ನಯ । ಸಂತನ ಸೇರುವಳೆಂದಿಗೊ ॥ ಪತಿಯೆ ಕೇಳೀಗೊಂದು ಕಾರ್ಯವ । ನೆಸುತಿಹೆನು ॥೫॥

ವಾರ್ಧಿಕ

ರಕ್ಕಸಾಂತಕ ಕೇಳು ಎನ್ನಗ್ರಜಾತನಹ । ರುಗ್ಮಭೂಪನ ಸುತೆಯು ರೂಪು ಯುವ್ವನಶೀಲೆ । ರುಗ್ಮವತಿಯೆಂಬಳಂ ಸ್ಮರನಿಂಗೆ ಪರಿಣಯವನಕ್ಕರಿಂ ಗೆಯ್ವುದೀಗ ॥ ತಕ್ಕವಳು ವರಸಾಮ್ಯವಹುದೆನ್ನ ಮತವ ನೀ । ಮಿಕ್ಕು ಬೇರೊಂದೆಣಿಸಬೇಡ ಶ್ರೀಹರಿಯೆಂದು । ರುಗ್ಮಿಣಿಯು ಚರಣಕೊಂದಿಸಿ ಬೇಡಿಕೊಳುತಿರಲ್ ದುಃಖವಂ ತ್ಯಜಿಸೆನ್ನುತ ॥ ೧ ॥

ರಾಗ ಕೇದಾರಗೌಳ ಝಂಪೆತಾಳ

ತರುಣಿಯನು ಸಂತಯಿಸುತ । ದಾರುಕನ । ಕರೆದೆಂದನೊಂದು ಮಾತ ॥ ತೆರಳು ಕುಂಡಿನನಗರಿಗೆ । ಲೇಖನವ । ಬರೆದೀವೆ ರುಗ್ಮನೃಪಗೆ ॥ ೧ ॥ ಹರುಷದಿಂದಿತ್ತವನಿಗೆ । ಸುತೆಯನ್ನು । ತರಳನಾಗಿಹ ಮದನಗೆ ॥ ಕರುಣದಿಂದೀವುದೆಂದು । ಉಪಚರಿಸಿ । ಬರುವುದೈ ತ್ವರಿತವೆಂದು ॥ ೨ ॥ ಎಂದಾಗ ಲೇಖನವನು । ಬರೆದಿತ್ತು । ಚೆಂದದಿಂ ಕಳುಹಿಸಿದನು ॥ ಇಂದಿರೇಶಗೆ ನಮಿಸುತ । ದಾರುಕನು । ಮಂದಹಾಸದೊಳೆಯ್ದುತ ॥ ೩ ॥

ರಾಗ ಮಧುಮಾಧವಿ ತ್ರಿವುಡೆತಾಳ

ಇತ್ತ ಕುಂಡಿನಿಪುರದೊಳೊಂದಿನ । ಪೃಥ್ವಿಪಾಲಕ ರುಗ್ಮ ಹರುಷದೊ । ಳಿತ್ತನೋಲಗ ಸಚಿವಸೇನಾ । ವೊತ್ತದೊಡನೆ ವಿನೋದದಿ ॥ ೧ ॥ ಜನಪ ಯೋಚಿಸುತಾಗ ತನಯು । ತನುಜೆಗಾದುದು ಷೋಡಶಾಬ್ದವು । ವನಜ ಮುಖಿಯುಳನಾರಿಗೀವೆನೆಂ । ದೆನುತ ಸಚಿವನೊಳೆಂದನು ॥ ೨ ॥ ಧಾರಿಣೀ ಪಾಲಕರೊಳೆನ್ನ ಕು । ಮಾರಿಗಹ ವರನಾರಿಹರು ಪೇಳ್ । ವೀರವಿಕ್ರಮ ರೂಪು ಯೌವನ । ಚಾರು ಸಜ್ಜನಶೀಲರು ॥ ೩ ॥

ರಾಗ ಸುರುಟಿ ಏಕತಾಳ

ಧಾರಿಣೀಪಾಲ । ಕೇಳ್ । ಶೂರ ಗುಣಶೀಲ ॥ ನಾರಿರೂಪನು । ಪೋಲ್ವ । ವೀರರಿಹುದನ್ನು ॥ ೧ ॥ ಒಡೆಯ ಪೇಳ್ವೆನಂ । ನಿನ್ನ । ಹುಡುಗಿ ಪೋಲ್ವನು ॥ ಹುಡುಗನೋರ್ವನು । ಸಿಂಧೂ । ಪೊಡವಿಯೊಳಗಿನ್ನು ॥ ೨ ॥ ಪೃಥ್ವಿಪಾಲ ಸೈಂ । ಧವನ । ಪುತ್ರನಾತನು ॥ ಚಿತ್ರರಥನು । ಶುದ್ಧ । ಕ್ಷತ್ರಿಕುಲಜನು ॥ ॥ ೩ ॥ ಮೆರೆವ ಸುಂದರಾ । ಕೃತಿಯಂ । ತರುಣನಾ ವರ ॥ ಸರಿಯ ಕಾಣೆನು । ಬೇರೆ । ಧರಣಿಯೊಳಗಿನ್ನು ॥ ೪ ॥ ಕೊಡು ಕೊಡವನಿಗೆ । ಸಿಂಧು । ಪೊಡವಿಪ ಸುತಗೆ ॥ ಬಿಡು ಬಿಡು ವ್ಯಥೆಯನು । ಬೇರೆ । ಹುಡುಕಬೇಡಿನ್ನು ॥ ೫ ॥

ರಾಗ ಪಂತುವರಾಳಿ ಅಷ್ಟತಾಳ

ಭಾಪುರೇ । ಮಂತ್ರಿ । ಭಾಪುರೇ ॥ ಪ ॥ ಭಾಪುರೆ ಮಂತ್ರಿ ಜಯದ್ರಥ ಾದಿರಾಹ । ಭೂಪರ ಕಾಣೆನು । ಈ ಪೃಥಿವಿಯೊಳಗಿನ್ನು ॥ ಅ ॥ ಸಿಂಧು ಪಾಲನ ಸುತ ಸುಗುಣನೆಂಬುದನು । ಹಿಂದೆ ಕೇಳಿರ್ಪೆನು ಪೇಳ್ವುದಿನ್ನೇನು ॥ ಬಂಧುತ್ವ ಸರಿಯಾಯಿತ್ತು ಕೇಳಯ್ಯ ನೀನು । ನಂದನೆಯನ್ನಾತಗೀವೆನು ನಾನು ॥ ೧ ॥ ಎಂದು ರುಗ್ಮನು ಪತ್ರ ಬರಿಯುತ್ತಲಾಗ । ಚಂದದಿ ಮಂತ್ರಿಯೊ ಳಿತ್ತದ ಬೇಗ ॥ ಸಿಂಧುಪಾಲನಿಗಿತ್ತು ಕರೆತಾರೆಂದೆನುತ । ಮಂದಹಾಸದಿ ಕಳು ಹಲು ಪೋಗಲತ್ತ ॥ ೨ ॥ ಧರಣಿಪಾಲಕ ಜಯದ್ರಥನೊಡ್ಡೋಲಗದಿ । ಇರೆ ಸಿಂಹಾಸನದಿ ಕಾಣುತ ಮಂತ್ರಿ ಮುದದಿ ॥ ಬರಲುಪಚರಿಸಿ ಕ್ಷೇಮವ ಕೇಳ ಲಾಗ । ಹರುಷದೊಳಿತ್ತ ಲೇಖನವನ್ನು ಬೇಗ ॥ ೩ ॥

ವಾರ್ಧಿಕ

ಧರಣಿಪತಿ ರುಗ್ಮಭೂಪನು ಬರೆದ ಪತ್ರಮಂ । ತೆರೆದು ವಾಚಿಸಲಾಗಲೆನ್ನ ಸುತೆ ರುಗ್ಮವತಿ । ಮೆರೆವ ಯೌವನಶೀಲೆ ಚಾರುಚಂದ್ರಿಕೆಗೀಗ ಪರಿಣಯವ ರಚಿಸುವೆನು ॥ ಪರಮ ಮಂಗಲವತಿಗೆ ಸರಿಯಾಹ ವರ ನಿನ್ನ । ತರಳನಾಗಿಹ

ಚಿತ್ರರಥನೆಂದು ನಂಬಿಹೆನು । ತ್ವರಿತದಿಂದಯ್ತಂದು ಲಗ್ನವಂ ನಿಶ್ಚಯಿಸಿ ತೆರ
ಳಿರೆಂದಿತಿ ಬಿನ್ನಹ ॥ ೧ ॥

ರಾಗ ಭೈರವಿ ಝಂಪೆತಾಳ

ಎಂದು ಬರೆದಿಹ ಪತ್ರ ಸಿಂಧುಪತಿ ವಾಚಿಸುತ । ಚೆಂದವಾಯಿತು ಎನ್ನು
ತಾಗ ॥ ನಂದನನ ಜನ್ಮಪತ್ರಿಕೆಯಂ ಕೊಂಡಾ ಕ್ಷಣವೆ । ಮಂದಹಾಸದಿ ಪೊರಟ
ನಂದು ॥ ೧ ॥ ಸಾರಿ ಬಂದಾ ಜಯದ್ರಥನು ಕುಂಡಿನಪುರದಿ । ಧಾರಿಣಿಪನರ-
ಮನೆಯು ಪೊಕ್ಕು ॥ ಭೂರಿ ತೋಷದಿ ಬಹನ ಕಂಡಾಗ ವೈದರ್ಭ । ಭೋರ
ನಯ್ತಂದು ಮನ್ನಿಸುತ ॥ ೨ ॥ ವಿಂಸುನಿಪೀಠವನಿತ್ತು ಕುಶಲಪ್ರಶ್ನೆಯ ಗೆಯ್ದು ।
ಶಶಿನಿಭಾನನೆಯನ್ನು ಮಂದದಿ ॥ ವಸುಧೆಪತಿ ಕೇಳ್ ನಿನ್ನ ತರಳನಿಂಗೀಯುವೆನು।
ಉಸಿರಬೇಹಂದು ನಿನ್ನ ಮನವ ॥ ೩ ॥ ಚೆಂದವಾಯಿತು ರುಗ್ಮ ನಮ್ಮ ಬಂಧುತ್ವ
ವನು । ಹಿಂದೆ ಪಡೆದಿಹ ಸಂಕೃತದಿಂದ ॥ ಇಂದು ಗಂಟಿಕ್ಕಿದನು ಬ್ರಹ್ಮನೆಂದೆನು
ತಾಗ । ಸಿಂಧುಪತಿ ಸಂತೋಷದಿಂದ ॥ ೪ ॥ ಬರಿಸು ಜೋಯಿಸರನ್ನು ತ್ವರಿತದಿಂ
ವಧುವರರ । ವರಸಾಮ್ಯ ಜನ್ಮಪತ್ರಿಕೆಯು ॥ ಧರಣಿಪನೆ ನೋಡಿಸೆಂದೆನಲಾಗ
ಕರೆಸಲ್ಕೆ । ಹರಿತಂದನಾ ಪುರೋಹಿತನು ॥ ೫ ॥

ಭಾಮಿನಿ

ಧರಣಿದೇವನ ಚರಣ ವಂದಿಸಿ । ಹರುಷದಿಂದಲಿ ರುಗ್ಮಭೂಪನು । ತರಳೆ
ಯನು ಒಲಿದೀವೆ ಸಿಂಧುನೃಪಾಲನಾತ್ಮಜಗೆ ॥ ಪರಿಕಿಸೈ ಕೂಟಾದಿಗಣಗಳ ।
ತ್ವರೆಯೊಳಿನೆ ಭೂಸುರನು ಗುಣಿಸುತ । ಬೆರಳನೆಣಿಸಿಯೆ ತನ್ನ ಮನದೊಳು
ತಿಳಿದು ನಸುನಗುತ ॥ ೧ ॥

ರಾಗ ಬೇಗಡೆ ಏಕತಾಳ

ಕೇಳು ಭೂವರ ಪೂರ್ವಫಲದಿಂದ । ದೊರಕಿದನು ವರ ನಾ । ಪೇಳ್ವುದೇನ್ನ
ಮನಸಿಗಾನಂದ ॥ ಬಾಲೆಗೀ ವರ ಸಕಲ ದಾಂಪ । ತ್ಯಾನುಕೂಲತೆ ಸರಿಯಂ
ಕೇಳೈ । ಮೇಲೆ ಕಂಟಕವಿಹುದು ಲಗ್ನಕೆ । ಪೇಳಲಾರೆನು ಕಾರ್ಯವೆಂತುಟೊ।
॥ ೧ ॥ ವಿರಚಿಸೈ ಪುರಹರನು ಕಾಯುವನು । ಭೂದೇವರಿಂಗೆ । ತುರಗ ಧೇನು
ಸಹಸ್ರ ದಾನವನು ॥ ಹರುಷದೊಳಗಿತ್ತೆಲ್ಲ ದೇವರಿ । ಗೆರಗಿ ಪ್ರಾರ್ಥನೆಗೆಯ್ಯು
ನಾಳಿನ । ಬರುವ ಸಪ್ತಮೀದಿನದಿ ಲಗ್ನವ । ಧರಣಿಪಾಲನೆ ಗೆಯ್ಯೊ ಮುದದಲಿ

ರಾಗ ಸೌರಾಷ್ಟ್ರ ತ್ರಿವುಡೆತಾಳ

ಧರಣಿದೇವನ ನುಡಿಯ ಕೇಳುತ । ಧರಣಿಪಾಲಕ ತೋಷದಿಂದಲಿ । ಪ
ಣಯದ ಪತ್ರಿಕೆಯ ಸಿಂಧುನೃ । ಪಾಲಗಿತ್ತು ॥ ೧ ॥ ಬಂಧುವರ್ಗಗಳೊಡ

ದಿಬ್ಬಣ । ಸಂದಣಿಸಿ ಬಹುದೆಂದು ಕಳುಹುತ । ಲೆಂದನಾ ಮಂತ್ರಿಯೊಳಂ
ಸಂತಸ । ದಿಂದಲಾಗ ॥ ೨ ॥ ಬರೆಸು ಲೇಖನ ಮಗಧಪಾಲಗೆ । ಧರಣಿಪತಿ
ಶಿಶುಪಾಲ ಮುಖ್ಯರ । ಕರೆಸು ಮಿತ್ರವಿಡೂರಥಾಖ್ಯನ । ವೇಗದಿಂದ ॥ ೩ ॥
ಪುರವ ಶೃಂಗರಗೆಯ್ಸು ವಿಬುಧರ । ಸರಣಿಗಕ್ಷತೆಯಿತ್ತು ಹರುಷದಿ । ಪರಿಣ
ಯಂದ ಮಂಟಪವ ರಚಿಸೆಂ । ದೆನುತ ಪೇಳೆ ॥ ೪॥ ಧರಣಿಪನ ಕಟ್ಟಾಜ್ಞೆಯಂದದಿ।
ಬರೆಸಿ ಲೇಖನ ಕಳುಹಿ ಪುರವನಂ । ಪರಮ ಶೃಂಗರ ಗೆಯ್ಸುತಿರೆ ದಾ । ರುಕನಂ
ಬಂದಃ ॥ ೫ ॥ ಎರಗುತಾ ಕ್ಷಣ ರುಗ್ಮಭೂಪಗೆ । ಹರಿಯಂ ಬರೆದಿಹ ಪತ್ರ
ವೀಯಲುಂ । ಅರರೆ ಏನೆಂದೆನುತಲದ ವಾ । ಚಿಸಿದನಂದು ॥ ೬ ॥

ರಾಗ ಕೇದಾರಗೌಳ ಅಷ್ಟತಾಳ

ಸ್ವಸ್ತಿ ಶ್ರೀಮಂತ್ಕುಂಡಿನಾಪುರ ರುಗ್ಮಭೂ । ಪೋತ್ತಮ ಭಾವಯ್ಯಗೆ ॥
ಅತ್ಯಂತಪ್ರಿಯ ಕೃಷ್ಣ ರಚಿಪ ವಿಜ್ಞಾಪನಾ । ಇತ್ತ ನಾವ್ ಕ್ಷೇಮಿಂಗಳಂ ॥ ೧ ॥
ಬರೆಯಬೇಹುದಂ ನಿಮ್ಮ ಕುಶಲವ ದಯಂದಿಂದ । ಪರಿತರುವಾಯಂ ಕೇಳಿ ॥
ಅರಿಕೆಯೊಂದಿದೆ ಚಿಕ್ಕದದನು ನೀವೀಗಳು । ನೆರವೇರಿಪುದು ಭರದಿ ॥ ೨ ॥ ಎನ್ನ
ಕುಮಾರ ಮನ್ಮಥನಿಂಗೆ ನಿಮ್ಮಯ । ಕನ್ನಿಕೆಯಂನು ಮುದದಿ ॥ ಮಂನ್ನ ತಂಗಿಯಂ
ನಿತ್ತು ಸಲಹಿದ ತೆರದೊಳ । ಗಿನ್ನು ಲಗ್ನವ ಮಾಳ್ಪುದಂ ॥ ೩ ॥ ಹರುಷದಿಂದೀ
ಕಾರ್ಯ ಗೆಯ್ವಿರೆಂಬುದ ನಂಬಿ । ಬರೆದಿಹೆ ಲೇಖನವ ॥ ತರುಣಿ ರುಗ್ಮಿಣಿಯಂಭಿ
ಮಂತವು ಇಂತಿಹುದಯ್ಯ । ಪರಿಪೂರ್ಣ ದಯವಿರಲಿ ॥ ೪ ॥

ರಾಗ ಮಾರವಿ ಏಕತಾಳ

ಬರೆದಿಹ ಪತ್ರವ ಕಾಣುತ ರುಗ್ಮನು । ಹರಿನಾದವ ಗೆಯ್ದು ॥ ತರಳೆಯ
ಕೊಡುವೆನೆ ಗೊಲ್ಲಕುಮಾರಗೆ । ಪರಿಕಿಸಬಹುದಿಂದಂ ॥ ೧ ॥ ಹಿಂದೆನ್ನನಂಜೆಯ
ಳವಿನೊಳೊಯ್ದನ । ಬಂಧಿಸದಿದುರ್ದಕೆ ॥ ಇಂದೀ ಪರಿಯೊಳು ಲೇಖನ ಬರೆ
ದರೆ । ಬಂದಿತು ಅತಿ ಸಲಿಗೆ ॥ ೨ ॥ ಸಾರು ಸಾರೆನ್ನಿದಿರಿರಬೇಡೆನುತಲೆ । ದಾರುಕ
ನಂ ಪಿಡಿದು ॥ ಭೋರನೆ ನೂಕುತ ಹರಿಯನಂ ನಿಂದಿಪ । ಧಾರಿಣಿಪನ ಕಂಡಂ॥

ಭಾಮಿನಿ

ಅರಸ ಕೇಳ್ ಶ್ರೀಕೃಷ್ಣರಾಯನ । ಜರೆದಂ ತನ್ನನಂ ನೂಕೆ ದಾರುಕ ।
ೊರೆದನೆಲೆ ಕಡುಪಾಪಿ ನೋಡಿಕೊ ಮುಂದೆ ಬರುವುದನು ॥ ಕರವ ಮುರಿ
ದುರಿ ಬಿಗಿದು ನಿನ್ನಯ । ತರಳೆಯನ್ನೊಯ್ವುದನಂ ಪರಿಕಿಸು । ಬರಿಯ
ಮಾತೇಕೆನುತ ಬಂದನು ಹರಿಯ ಬಳಿಗಾಗ ॥ ೧ ॥

ವಾರ್ಧಿಕ

ಚರಣಕಭಿನಮಿಸುತ್ತ ದೈನ್ಯದಿಂ ದಾರುಕಂ । ಹರಿಯೆ ಕೇಳೈ ಗೊಲ್ಲರಥವು

ರಿಗೆ ತರಳೆಯಂ । ಕರುಣಿಸುವನಲ್ಲವೆಲೆ ದುರುಳ ಪೋಗೆಂದೆನುತ ಕೆರಳಿ ನೋಕಿದ ನೆನ್ನನು ॥ ಪರಮಪುರುಷನೆ ಮುಂದೆ ನಿನ್ನ ಮನದಂದವೇನೆ । ದುರುಳನಂ ಶಿರವರಿದು ತರಳೆಯಂ ತಹೆನೆಂದು । ತಿರುಹುತಿರೆ ಚಕ್ರಮಂ ಕಂಡಾಗ ರುಗ್ಮಿಣಿಯುಂ ಚರಣಕೆರಗುತಲೆಂದಳು ॥ ೧ ॥

ರಾಗ ತುಜಾವಂತು ಝಂಪೆತಾಳ

ಅರಸ ಕೇಳೀಗೆನ್ನ ನುಡಿಯಂ ಸಂತಸದಿ । ತೆರಳುವುದೀ ಸೈನ್ಯಸಹ ನಾವೀಗ ಭರದಿ ॥ ತರಳೆಯುನು ಕೊಡುವಂತೆ ಕೇಳ್ವೆ ನಾ ಮುಂದದಿ । ಪರಿಣಯುವ ಗೆಯ್ಯದಿರೆ ಭಂಗಿಪುದು ರಣದಿ ॥ ೧ ॥ ಕೊಂದು ಕಳೆಯದಿರೆನ್ನ ಸಹಜನನು ಪ್ರೀತ । ಹಿಂದಾದ ಭಂಗವನು ನೆನೆದು ಭಯಪಡುತ ॥ ಕಂದಳನು ಕೊಡುತಿಹನಂ ಪರಿಕಿಸೈ ಕಾಂತ । ಮುಂದರಿಯಬಾರದೆನೆ ಹರಿಯೆಂದ ನಗುತ ॥ ೨ ॥

ರಾಗ ಕೇದಾರಗೌಳ ಅಷ್ಟತಾಳ

ತರುಣಿ ನೀ ಪೇಳಿದ ನುಡಿಯೆಂನ್ನ ಮನಸಿಗೆ । ಸರಿಬಂತು ಧುರದೊಳಗೆ ॥ ದುರುಳನ ಮಾನವ ಕಳೆಯುವುದಲ್ಲದೆ । ಹರಿಸೆನು ಪ್ರಾಣವನ್ನು ॥ ೧ ॥ ನಂದಜನೀ ಪರಿಯುಸಿರಂತ್ತಲಾ ಕ್ಷಣ । ಚಂದದಿ ಸೇನೆಯುನು ॥ ಸಂದಣಿಪರೆ ಕೃತವರ್ಮಸಾತ್ಯಕಿಗಳಿ । ಗೆಂದನು ವೇಗದಲಿ ॥ ೨ ॥ ಪರುಟವಿಸುತ ಮಾರ್ಬಲಗಳು ಬರುತಿರೆ । ಎರಗುತ್ತ ಹಲಧರಗೆ ॥ ಒರೆದನು ಶ್ರೀಹರಿ ರುಗ್ಮಂಗೆ ಬರೆದಿಹ । ಪರಿಗಳನೆಲ್ಲವನು ॥ ೩ ॥ ಗೊಲ್ಲರಿಗೆನ್ನಯ ತನುಜೆಯ ಕೊಡೆನೆಂಬ । ಖುಲ್ಲನ ರಣದಿ ನಾವು ॥ ಹಲ್ಲನು ಕೀಳ್ವರೆ ಬೇಗೇಳೆಮ್ಮಗ್ರಜ । ಉಲ್ಲಾಸದೊಳಗೆ ನೀವು ॥ ೪ ॥ ನರಹರಿಯಿಂತೆನೆ ಹಲಧರ ರೌದ್ರದೊಳ್ । ಹರಿನಾದವನೆ ಗೆಯ್ಯುತ್ತ ॥ ಶಿರವರಿದಾತನ ತರಳೆಯಂ ತಹೆನಯ್ಯ । ಪರಿಕಿಸು ಶೌರ್ಯಗಳ ॥ ೫ ॥

ಭಾಮಿನಿ

ರಾಮನಿಂತೆನೆ ಕೇಳ್ದು ಶ್ರೀಹರಿ । ಕಾಮ ಸಾತ್ಯಕಿ ಸಾಂಬ ರಣನಿ । ಸ್ಸೀಮ ಕೃತವರ್ಮಾದಿ ಯಾದವಪಡೆಯ ಕೂಡುತ್ತ ॥ ಭಾಮಿನಿಯರೊಡಗೊಂಡು ಕುಂಡಿನ । ಭೂಮಿಪಾಲನ ಬಳಿಗೆ ಗಮಿಸಲು । ವ್ಯೋಮದುಂದುಭಿ ಮೊಳಗೆ ಶುಭಸೂಚನೆಯು ತೋರಿದುದು ॥ ೧ ॥

ರಾಗ ಸಾಂಗತ್ಯ ರೂಪಕತಾಳ

ಧರಣಿ ಕಂಪಿಸುವಂತೆ ಸೇನೆಯನೊಡಗೊಂಡು । ಮುರಹರ ಹಲಧರರಾಗ ॥ ಹರಿತಂದು ಕುಂಡಿನಾಪುರವರೋದ್ಯಾನದೊ । ಳಿರಲು ಡೇರೆಯನಿಕ್ಕುತಿವರು ॥ ೧ ॥ ಅನಿತರೊಳ್ ಸೈಂಧವ ಬಂಧುವರ್ಗವ ಕೂಡಿ । ವನಿತೆಗಳ್ ಕಲಶಗನ್ನಡಿಯ ॥ ಘನವಾದ್ಯಘೋಷದಿ ದಿಬ್ಬಣದೋಂದಿಗೆ । ವಿನಯದಿಂದಯ್ತರುತಿರಲು ॥

॥ ೨ ॥ ಹದ್ದುಗಳೆರಗೆ ಸ್ಯಂದನದಗ್ರಭಾಗದೊಳ್ । ಬಿದ್ದುಕೊಂಡವು ತುರಗೆಗಳು ॥
ತಿದ್ದೆ ವಾಯಸ ವಾಮಭಾಗದೊಳ್ ರೋದಿಸು । ತಿದ್ದರೀರ್ವರು ವಿಪ್ರವರರು ॥
॥ ೩ ॥ ಅಶುಭಸೂಚನೆಗಳ ಮನದೊಳಗೆಣಿಸದೆ । ವಸುಧೇಶ ಸ್ಪಂಧವನಂದು ॥
ಕುಶಲದಿಂ ದಿಬ್ಬಣದೊಂದಿಗೆ ನಡೆತಂದ । ನೆಸೆವ ಕುಂಡಿನಪುರದೆಡೆಗೆ ॥ ೪ ॥

ರಾಗ ಮಧುಮಾಧವಿ ತ್ರಿವುಡೆತಾಳ

ಸಿಂಧುನೃಪನಯ್ತರಲು ಕಾಣುತ । ಲಂದು ದ್ವಾರದೊಳಿರುವ ಚಾರರು ।
ಚಂದದಿಂದಯ್ತಂದು ರುಗ್ಮಗೆ । ವಂದಿಸುತ ಬಿನ್ನವಿಸಲು । ಹರುಷದಿಂದ ॥ ೧ ॥
ತ್ವರಿತದಿಂ ಭೂಪಾಲನಾ ಕ್ಷಣ । ತರುಣಿಯರನೊಡಗೊಂಡು ವಾದ್ಯದ । ರವದೊ
ಳಿದಿರ್ಗೊಳ್ಳುತ್ತ ವಿಭವದಿ । ಕರೆದುತಂದುಪಚರಿಸುತ । ಮೋದದಿಂದ ॥ ೨ ॥
ಇರಲು ಪಾಂಡ್ಯಾಧಿಪ ವಿಡೂರಥ । ನರಸ ಮಾಗಧ ಚೈದ್ಯ ಮುಖ್ಯರು । ತೆರಳಿ
ಬಂದಿಹರೆಂದು ಚಾರರು । ಅರಿಕೆಗೆಯ್ಯಲು ರುಗ್ಮನು । ವೇಗದಿಂದ ॥ ೩ ॥
ಮುದದೊಳವರನು ಕರೆದುತಂದಾ । ಸನವನಿತ್ತುಪಚರಿಪ ವೇಳ್ಯದಿ । ಚದುರೆ
ರುಗ್ಮಿಣಿ ಬಂದು ಅಗ್ರಜ । ಪದಕೆ ನಮಿಸಲು ಕಾಣುತ । ರಂಗ್ಮಭೂಪ ॥ ೪ ॥
ಅರರೆ ಏನಾಶ್ಚರ್ಯವೋರ್ವಳೆ । ತೆರಳಿ ಬಂದೆಯ ಪರಿಣಯಕೆ ನಿನ । ಗೊರೆದ
ರ್ಯಾರೌ ತಂಗಿ ಲೇಖನ। ಬರೆಯುವರೆ ತ್ವರೆಯಾದುದು । ಸಮಯವಿರದೆ ॥೫॥

ಭಾಮಿನಿ

ಅಣ್ಣ ಲಾಲಿಸು ಎಮ್ಮ ತರಳಗೆ । ಹೆಣ್ಣನೀಯುವೆ ಕಾರ್ಯವೆಮ್ಮದು ।
ಅಣ್ಣದಿರು ಮನದೊಳಗೆ ಪತ್ರಿಕೆ ಬರೆಯಲಿಲ್ಲೆನುತ ॥ ಚಿಣ್ಣ ಮನ್ಮಥನೊಡನೆ
ರಮಣನು । ನಿನ್ನ ಪುರದುಪವನದಿ ದಿಬ್ಬಣ । ವನ್ನು ಕೂಡಿಹ ಬೇಗ ಮನ್ನಿಸಿ
ಕರೆದುತಾರೀಗ ॥ ೧ ॥

ರಾಗ ಕೇದಾರಗೌಳ ಅಷ್ಟತಾಳ

ಎಂದ ಮಾತಿಗೆ ರುಗ್ಮ ಕಿಡಿಯಿಡುತೆಂದನು । ಸಿಂಧುನೃಪಾತ್ಮಜಗೆ ॥ ನಂದನೆ
ಯನ್ನೀವುದಲ್ಲದೆ ನಿಮ್ಮಯ । ಕಂದನಿಂಗೀವರ್ಯಾರು ॥ ೧ ॥

ರಾಗ ತೋಡಿ ಆದಿತಾಳ

ಹಿತವ ಕೇಳೀಗಣ್ಣ ನಿನ್ನ । ಸುತೆಯನೆನ್ನ ಕುವರನಿಂಗೆ । ಸತಿಯ ಮಾಳ್ಪ
ಕೊರೆಯ ನೋಡಾ । ಇತರರಿಂಗೆ ಸಲುವಳಲ್ಲ ॥ ೧ ॥

ರಾಗ ಕೇದಾರಗೌಳ ಅಷ್ಟತಾಳ

ಹೆತ್ತು ಸಾಕಿದ ದಾತ ಮನಕೆ ಬಂದವರಿಗೆ । ಇತ್ತು ಲಗ್ನವ ಗೆಯ್ಯಲು ॥
ಸುತ್ತೋರ್ವರಪ್ಪಣೆ ಕೇಳ್ವುದೇತಕೆ ತಂಗಿ । ಸ್ವಸ್ಥದಿ ನಡೆ ಪುರಕೆ ॥ ೧ ॥

ರಾಗ ತೋಡಿ ಆದಿತಾಳ

ಸೋದರಿಕೆಯಂನ್ನು ಬಿಟ್ಟು । ಪೋದರೆ ಕಂಡವರೆಲ್ಲ । ಮೋದದಿಂದ ನೀಡಿ ಪರಂ । ಭೇದವಿಲ್ಲದೀಯೊ ಸಂತೆಯು ॥ ೧ ॥

ರಾಗ ಕೇದಾರಗೌಳ ಅಪ್ಪತಾಳ

ಮರಿಯಾದೆ ನಿಮಗಂಟೆ ನಿಂದೆಗೆಯ್ದರೆ ತಂಗಿ । ಬರೆದಂ ಲೇಖನವ ನೀನು॥ ತೆರಳಿದೆ ಕೃಷ್ಣನ ಹಿಂದೆ ಚೋರತ್ವದಿ । ಮರೆಯಲಿಲ್ಲವ್ವ ನಾನು ॥ ೧ ॥

ರಾಗ ತೋಡಿ ಆದಿತಾಳ

ಅಂದು ನೀನಂ ಧುರವ ಗೆಯ್ದು । ಮುಂದಲೆಯಂ ಕೊಯ್ಸಿಕೊಂಡಂ । ದಿಂದಂ ಪೊದಗಿ ಬಂತು ಮತ್ತೆ । ನಂದನೆಯನೀಯದಿರಲು ॥ ೧ ॥

ರಾಗ ಕೇದಾರಗೌಳ ಅಪ್ಪತಾಳ

ಧುರಕೆ ಕಲ್ಪಾಂತಭೈರವನೀಗ ನಡೆತರೆ । ತರಳೆಯಂ ಚೋರರಿಂಗೆ ॥ ಕರುಣಿಸು ವವನಲ್ಲ ಬರಹೇಳು ರಣಕೀಗ । ಉರವ ಬಗಿವೆ ನೋಡೆಲೆ ॥ ೧ ॥

ವಾರ್ಧಿಕ

ದುರುಳತನದೊಳಗಿನಿತು ಮಾತನಾಡಿದೆ ನಿನ್ನ । ಕರವ ಬಿಗಿಸುತ ರುಗ್ಮ ವತಿಯಂ ಕೊಂಡೊಯ್ಯದಿರೆ । ತರುಣಿಯೇ ನಾನೆನುತ ಪಿಂತಿರುಗಿ ನಡೆತಂದು ಒರೆದಳಾ ಹರಿಗೆಲ್ಲವ ॥ ಶರಧಿ ಘೋರ್ಗರೆವಂತೆ ಸಿಂಹನಾದವ ಗೆಯ್ದು । ಪರಿಕಿಸೆಂದೆನುತ ಹರಿ ವರ ಪಾಂಚಜನ್ಯಮಂ । ಧರಣಿ ಕಂಪಿಸುವಂತೆ ಮೊಳ ಗಿಸಲಂ ಯಾದವರಂ ಭರದಿ ಲಗ್ಗೆಯು ಮುಂತ್ರಲು ॥ ೧ ॥

ಭಾಮಿನಿ

ಕೇಳಿ ರುಗ್ಮನಂ ಸಿಂಧುಪಾಲನ । ಮೇಳವಿಸಿಕೊಂಡಾಗ ಸೇನಾ । ಜಾಲ ದೊಂದಿಗೆ ಬಂದು ನಿಲ್ಲಲು ಕಂಡಂ ಶ್ರೀಹರಿಯುಂ ॥ ಏಳುತಿರೆ ಚಕ್ರವನು ತಿರು ಹುತ । ತಾಳಿ ಕೋಪವನಾಗ ಸಾತ್ಯಕಿ । ಖೂಳರನು ಸಂಹರಿಪೆ ನಾನೆಂದೆನುತ ಪೊರಮಂಡಲಂ ॥ ೧ ॥

ರಾಗ ಶಂಕರಾಭರಣ ಮಟ್ಟೆತಾಳ

ಧುರಕೆ ಬರುವ ಸಾತ್ಯಕಿಯಂ । ಪರಿಕಿಸುತ್ತ ಪಾಂಡ್ಯಭೂಪ । ತರುಬಿ ಪೇಳ್ದನಾ ವಿದೂರ । ಥಾಖ್ಯಕೋಪದಿ ॥ ಮರುಳೆ ನಿಲ್ಲು ಒಂದಂ ಶರದಿ । ಶಿರವ ನರಿವೆ ನೋಡೆನುತ್ತ । ಗುರಿಯನೆಸೆಯೆ ಕ್ರೋಧದಿಂದ । ತರಿದಂ ಸಾತ್ಯಕಿ ॥ ॥ ೧ ॥ ದುರುಳ ನಿನ್ನ ಸಖನಿಗಾಗಿ । ಮರಣಕಾಲ ಬಂತು ನಿನಗೆ । ತಿರುಗಿ ಪೋಗು ನಿ ನ್ನ ಪುರಕೆ । ಸಾರಿ ಪೇಳ್ದನು ॥ ಧುರಸಮರ್ಥನಾದರಿದರ । ಪರಿಯ ನೋಡು ನೋಡೆನುತ್ತ । ಉರು ಕಠೋರ ಶರವನೆಸೆದ । ಪಾಂಡ್ಯಭೂಪಗೆ ॥೨॥

ತರಿಯುತದ ವಿಡೂರಥಾಖ್ಯ । ಶರಗಳನ್ನು ತೂರಂತಿರಲು । ಬರುವ ಶರಕೆ ನೂರು ಮಡಿಯು । ನೆಸೆದನಾಗಳೆ ॥ ಉರಗತಿವೀರವೈಂದ್ರುಶಿಖಿಯು । ಶರಗಳೆಸೆಯೆಂ ಭೂಮಿಪಾಲ । ಗರುಡಸೂರ್ಯ ವರುಣಶರದೊ । ಳಾಗ ಸಾತ್ಯಕಿ ॥ ೩ ॥ ಮುರಿದು ಕೆಡಹುತೊಂದು ಶರವ । ಗುರಿಯುನಿಟ್ಟು ಹರಿಯು ನೆನೆದು । ಉರಕೆ ಬಿಡಲು ಪಾಂಡ್ಯನಾಗ । ಧರಣೆಗುರುಳಿದ ॥ ಪರಿಕಿಸುತ್ತ ಚಿತ್ರರಥನು । ಶರವ ತೂರುತಾಗ ಬರಲು । ತಿರುಗಿಸುತ್ತ ಸಾತ್ಯಕಿಯು । ಸ್ಮರನು ತಡೆದನು ॥ ೪ ॥

ರಾಗ ಸೌರಾಷ್ಟ್ರ ಮಟ್ಟೆತಾಳ

ಸಿಂಧುಪಾಲಸುತನೆ ಭಾಪುರೆ । ನಿಲ್ಲು ನಿಲ್ಲು । ಸಿಂಧುಪಾಲಸುತನೆ ಭಾಪುರೆ ॥ ಪ ॥ ಎನಗೆ ಸಲುವ ನೃಪಕುಮಾರಿಯು । ಒಲಿಪೆನೆಂದು । ನೆನೆದು ವ್ಯರ್ಥ ಸಾಯುಬಂದೆಯು ॥ ಮನುಮಥಾಂಕಶರದಿ ನಿನ್ನ । ತನುವನುಳುಹಿ ಕೊಂಡು ಕಡೆಗೆ । ಜನಪಸುತೆಯುನೊಲಿಸಬಹುದು । ವಿನಯದಿಂದ ಸಾರು ಸಾರು । ಇನಜನೆಡೆಗೆ ಪೋಪೆಯಲ್ಲಯ್ಯ ॥ ತಾಳು ತಾಳೆಂ । ದೆನುತ ಬಿಟ್ಟ ಶರದ ವೃಷ್ಟಿಯ ॥ ಸಿಂಧುಪಾಲಸುತನೆ ಭಾಪುರೆ ॥ ೧ ॥ ಕೇಳೊ ನಿನ್ನ ಸತಿಯು ಪೂರ್ವದಿ । ಶಂಬರಾಖ್ಯ । ನಾಲಯದೊಳತಿ ವಿನೋದದಿ ॥ ಖೂಳ ನೊಡನೆ ಮೆರೆದು ನಿನ್ನ । ಬಾಲನಂತೆ ಸಲಹಿ ಕಡೆಗೆ । ಕೀಳು ನಿಂದೆಗಾಗಿ ಗತಿಸಿ । ಕಾಲನಗರದೊಳಗೆ ಇಹಳು । ಏಳು ನಿನ್ನ ತೆರಳಿಸುವೆನು ॥ ನಿನಗೆ ಸಲುವ । ಬಾಲೆಯೆಡೆಗೆಯೆನುತ ಹೊಡೆದನು ॥ ಭಳಿರೆ ಕೃಷ್ಣತನಯ ಭಾಪುರೆ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಎಂದ ಮಾತನು ಕೇಳಿ ಮನ್ಮಥ । ಸಿಂಧುಪಾಲನ ಸುತಗೆ ಶರಗಳ । ಒಂದು ನೂರೆಸೆಯುತ್ತ ಗರ್ಜಿಸು । ತಿರ್ದನಾಗ ॥ ೧ ॥ ಬರುವ ಶರಗಳ ಖಂಡಿಸುತ್ತಲಿ । ಪರಮರೋಷದಿ ಚಿತ್ರರಥನುರು । ಶರಗಳನು ಬಿಡಲಾಗ ಮನ್ಮಥ । ಕೆರಳಿ ಮನದಿ ॥ ೨ ॥ ಪರಮ ರೌದ್ರಾಸ್ತ್ರಗಳ ತೆಗೆಯುತ । ಹರಿಯ ಶ್ರೀಚರಣಾರ ವಿಂದಕೆ । ಎರಗಿ ಗುರಿಯಿಂದಿಡಲು ಮೂರ್ಛೆಯು । ತಳೆದನಾಗ ॥ ೩ ॥

ರಾಗ ಆನಂದಭೈರವಿ ಆದಿತಾಳ

ಧರೆಯೊಳು ಬಿದ್ದಿಹ ಸುತನ । ಪರಿಕಿಸಿ ಸೈಂಧವ ವ್ಯಸನ ॥ ಮೆರೆಯುತ ವೇಗದಿ ಬಂದು । ತರಳನಸಪ್ಪುತಲೆಂದು ॥ ೧ ॥ ಸರಸೀರುಹದಳನಯನ । ತರಳನೆ ಚಂದಿರವದನ ॥ ಹರುಷದಿ ಕಣ್ದೆರೆದೀಗ । ಮರುಕದಿ ನೋಡೈ ಬೇಗ ॥ ॥ ೨ ॥ ಪರಿಣಯ ಗೆಯ್ಯುವೆನೆಂದು । ತ್ವರಿತದಿ ಬಂದೆನು ಇಂದು ॥ ಧರೆ ಯೊಳು ನೀ ಮಲಗಿದರೆ । ಅರಿಗಳು ತಾವ್ ನಗದಿಹರೆ ॥ ೩ ॥ ಪಾತಕಿ ನಾ

ನಿನ್ನಗಲಿ । ಭೂತಳದೊಳಗೆಂತಿರಲಿ ॥ ಮಾತೆಯು ತಾನೆಂತಿಹಳೊ । ಜಾತನೆ ಪೋಗುವ ಪಳೊ ॥ ೪ ॥ ಕರುಣದಿ ಏಳೇಳೆಂದು । ಮರುಗುತ್ತಿರೆ ನೃಪನೆಂದು ॥ ಶಿರವನೆ ಎತ್ತುತಲಾಗ । ತರಳನು ಎದ್ದನು ಬೇಗ ॥ ೫ ॥

ಭಾಮಿನಿ

ತೋರು ತೋರೀಗೆನ್ನ ವೈರಿಯು । ಸಾರಿಸುವೆ ಯಮನೂರಿಗೆನ್ನುತ । ಲಾರಂಭಟಿಸಲು ಕಂಡು ಸೈಂಧವ ತಡೆದು ನಿಲ್ಲಿಸಂತ ॥ ವೀರ ನೀನಹೆ ಬೇಡ ಸಂಗರ । ಪೋರನನು ನಾನರಿವೆನೆನುತಲೆ । ಶೂರತನದಿಂ ಬರಲು ಕಂಡಾ ಕ್ಷಣದಿ ಹಲಧರನು ॥ ೧ ॥

ರಾಗ ಮಾರವಿ ಏಕತಾಳ

ಎಲೆಲೆ ಜಯದ್ರಥ ಇದಿರಾಗೆನ್ನುತ । ಬಲಭದ್ರನು ಭರದಿ ॥ ಹಲವನು ತಿರುಹುತಲೆರಗಲು ಹಠಿಗಾ । ಗಳುಕದೆ ಸೈಂಧವನು ॥ ೧ ॥ ದುರುಳನೆ ಎನ್ನ ಕುಮಾರಗೆ ಸಲುತಿಹ । ತರಳೆಯನೊಯ್ವುದಕೆ ॥ ತರಣಿಜ ಬರೆ ನಾ ಬಿಡೆ ಪೋಗೆಂದನು । ಧರಣಿಪ ಸೈಂಧವನು ॥ ೨ ॥ ಎನ್ನ ಕುವರ ಮನ್ಮಥನಿಗೆ ಸಲ್ಲುವ। ಕನ್ನಿಕೆ ಹೊರತಿವಳು ॥ ನಿನ್ನಯ ತರಳಗೆ ದೊರಕುವಳಲ್ಲೈ । ಪನ್ನಿಗಳೇಕೀಗ ॥ ॥ ೩ ॥ ಧುರದೊಳು ಎನ್ನನು ಗೆಲಿದಾ ಮೇಲಕೆ । ತರಳಗೆ ಪರಿಣಯವು ॥ ಮರುಳೇ ಹಲಧರ ತಾಳೆಂದೆನುತಲಿ। ಎರಗಿದ ಕುಂತದೊಳು ॥ ೪ ॥ ಬರುತಿಹ ಕುಂತವ ಮುರಿದಿಕ್ಕುತ ಹಲ । ಧರನತಿ ರೋಷದಲಿ ॥ ತಿರುಹುತ ಮುಸಲವ ಶಿರಕೆರಗಲು ನೃಪ । ನುರುಳಿದ ಮೂರ್ಛೆಯಲಿ ॥ ೫ ॥

ರಾಗ ಕೇದಾರಗೌಳ ಅಷ್ಟತಾಳ

ಧರೆಯೊಳು ಮೂರ್ಛೆಯೊಳುರುಳಿದ ಸೈಂಧವ । ನಿರವನ್ನು ಕಾಣುತಲಿ ॥ ಹರನಂತೆ ಕಣ್ಣೆಸೊಳ್ ಕಿಡಿಗೆದರುತ ರುಗ್ಮ । ಧುರಕೆ ಮುಂದಯ್ತಂದನು ॥ ೧ ॥ ಬಂದ ರುಗ್ಮನ ಕಾಣುತ್ತಾಗ ಸಂತೋಷದಿ । ಇಂದಿರೆಯರಸ ತಾನು । ಮುಂದು ವರಿದು ನಿಂತು ಪೇಳಿದ ಭಾವಯ್ಯ । ಬಂದಿರೆ ರಣಕೆ ನೀವು ॥ ೨ ॥ ಬಂದವರಾ ವಲ್ಲ ನೀವೆಮ್ಮ ನಗರಿಗೆ । ಇಂದು ಚಿತ್ತಯಿಸಿದಿರೆ ॥ ಮಂದಬುದ್ಧಿಯ ಭಾವ ನಿಮಗೆಲ್ಲ ಕ್ಷೇಮವೆ । ಎಂದು ಕೇಳ್ದನು ರುಗ್ಮನು ॥ ೩ ॥ ಅನುಜೆಯನಿತ್ತಿರಿ ಎನಗೆ ಪೂರ್ವದಿ ನೀವು । ಅನುಬಂಧದವರೆನ್ನುತ ॥ ತನುಜೆಯ ಪರಿಣಯ ಮಾಳ್ಪಿರೆನ್ನುತ ನಾವು । ಘನ ವೇಗ ಬಂದೆವಯ್ಯ ॥ ೪ ॥ ಕರೆದವರಾರೊ ನಿಮ್ಮನು ಭಂಡತನದೊಳು । ಹರಿತಂದುದೇತಕಯ್ಯ ॥ ಮರಿಯಾದೆಶೂನ್ಯರು ನಿಮ್ಮ ಮೋರೆಗಳನ್ನು । ಪರಿಕಿಸಬಾರದೀಗ ॥ ೫ ॥ ಕರೆವುದೇತಕೊ ನಮ

ತರಳನ ಲಗ್ನಕೆ । ಮರುಳೆ ಕೇಳ್ ನಮ್ಮ ಕಾರ್ಯ ॥ ಮರಿಯಾದೆ ನೋಡ್ವರೆ ಕೆಲಸವೆಂತಹುದಯ್ಯ । ಮರುಳು ಬುದ್ಧಿಯು ಭಾವಯ್ಯ ॥ ೬ ॥ ಚೋರತನದಿ ಹಿಂದೆ ನಾರಿಯನೊಯ್ದಿಹ । ಕ್ರೂರ ಬುದ್ಧಿಯು ಪಾಪಿಯೆ ॥ ಚೋರನ ಸುತ ಗೆಂತು ತರಳೆಯನೀವೆನಂ । ಸಾರು ಸಾರೀಗ ಬೇಗ ॥ ೭ ॥

ರಾಗ ಶಂಕರಾಭರಣ ಮಟ್ಟೆತಾಳ

ದುರುಳ ಕೇಳು ಚೋರರಂತೆ । ಜುಟ್ಟು ಕೊಯ್ಸಿಕೊಂಡು ಪಿಂತೆ । ಹರಿಯಂ ಕೊಲದೆ ಕುಂಡಿನಕ್ಕೆ । ಬರೆನು ಎನುತಲಿ ॥ ಪೊರಟು ಭೋಜಕಟಕಪುರದೊ । ಳಿರ್ದ ಪಾಪಿ ಕೊಲದೆ ಎನ್ನ । ಪುರವ ಪೊಕ್ಕಿಯೆಂತು ನಿನ್ನ । ಕೇಶ ಬೆಳೆದುದೆ॥ ॥ ೧ ॥ ಎಲೆಲೆ ಗೊಲ್ಲರಧಮ ನಿನ್ನ । ಕೊಲುವುದಾವ ಗಣ್ಯವೀಗ । ಹುಲಿಯಂ ಮುಂದೆ ಧುರಕೆ ಎಳೆಯು । ಕರುವು ನಿಲುವುದೆ ॥ ಬಲು ಸಮರ್ಥನಹುದು ಮಗಧ! ನಳವಿಗಂಜಿ ಶರಧಿಯೊಳಗೆ । ನಿಳಯ ಗೆಯ್ದು ಲಂಡಿ ಬರಿದೆ । ಗಳಹ ಲೇತಕೊ । ೨ ॥ ಇಳೆಯ ಭಾರ ಖಳರ ನಾನು । ಬೆಳಸಿ ಕೊಲುವ ನೆಪದಿ ಕೇಳೊ। ಜಲಧಿಯೊಳಗೆ ನಿಳಯ ಗೆಯ್ದು । ನೆಲಸಿಕೊಂಡಿಹೆ ॥ ಛಲದಿ ಪಿಂದೆ ರಣದಿ ನಿನ್ನ। ಕೊಲದೆ ಬಿಟ್ಟು ಸಲಹಿದಕ್ಕೆ । ಲಲನೆಯೊರ್ವಳೀಗಳೆನ್ನ । ಸುತಗೆ ದೊರೆತಳು ॥ ॥ ೩ ॥ ಹರಿಯ ನುಡಿಗೆ ರೋಷತಾಳಿ । ಸರಳ ಮಳೆಯ ಕರೆಯಲಾಗ । ಪರಮ ಪುರುಷ ಖಂಡಿಸುತ್ತ । ಪೇಳ್ದನಾ ಕ್ಷಣ ॥ ಮರುಳೆ ನಿನ್ನ ಸಹಸ ನೋಳ್ಪೆ । ಶರವ ಬಿಡು ಬಿಡೆಂದು ಧನುವ । ಮುರಿದು ಕೆಡಹೆ ಖಡ್ಗ ಕೊಂಡು । ಪೊಯ್ದ ರುಗ್ಮನು ॥ ೪ ॥ ಅಸಿಯಂ ತುಂಡಿಸುತ್ತ ಕೃಷ್ಣ । ನಸುನಗುತ್ತಲಿರಲು ಕಂಡು । ಎಸೆವ ಗದೆಯಂ ತೂಗಿ ಹರಿಯು । ಪೊಯ್ದನಾ ಕ್ಷಣ ॥ ಅಸುರವೈರಿ ಗದೆಯ ಸೆಳೆಯು । ತೆಸೆಯೆ ತಿರುಗಿ ನೃಪನ ಗಳಕೆ । ವಸುಂಧೆಯೊಳಗೆ ಬಿದ್ದು ಪೊರಳು । ತಿರಲು ಕಾಣುತ ॥ ೫ ॥

ಭಾಮಿನಿ

ಫಡ ತೊಲಗು ರಣಹೇಡಿ ಎನ್ನೊಳು । ನಡೆವುದೇ ವಿಕ್ರಮವು ಕೇಳ್ ಕುಲ। ಗೆಡುಕ ಬಂಧುದ್ರೋಹಿ ಪಾತಕಿ ಎನುತ ಮುಂದಲೆಯ ॥ ಹಿಡಿದು ಧರಣಿಗೆ ಕೆಡಹಿ ಕೊರಳಿಗೆ । ಖಡಗವನ್ನಿಡುತಿರಲು ಶ್ರೀಪತಿ । ಮಡದಿ ರುಗ್ಮಿಣಿ ಕಂಡು ನುಡಿದಳು ನಡುಗಿ ಭೀತಿಯಲಿ ॥ ೧ ॥ ದೇವ ರಕ್ಷಿಸು ಭಕ್ತಜನಸಂ । ಜೀವ ರಕ್ಷಿಸು ಕೊಲುವೆಯೆಂತೈ । ಭಾವನನು [illegible]ಕಟ ಬಿಡು ಬಿಡು ಚರಣಕೊಂದಿಪೆನಂ॥ ಜೀವದಾನವನಿತ್ತು ದಯದಲಿ । ಕಾ[illegible]ವೆ[illegible] ಶ್ರೀಹರಿಯ[illegible] ಸಾಹಸ । ಭಾವು ದೆನ್ನುತ ನೃಪನ ರಟ್ಟೆಯ ಕಟ್ಟಿ ನಿಲಿಸಿದನು ॥ ೨ ॥

ರಾಗ ಸಾಂಗತ್ಯ ರೂಪಕತಾಳ

ಅಣ್ಣನ ವಿಧಿಯಂನ್ನು ಕಾಣುತ್ತ ರುಗ್ಮಿಣಿ । ಮನ್ನಿಸುತೆಂದಳಾ ಕ್ಷಣದಿ ॥ ಚಿಣ್ಣಗೆ ಸಂತೆಯಂನ್ನು ಇತ್ತು ಸಂತೋಷದೊ । ಳಿನ್ನು ಲಗ್ನವ ಮಾಳ್ಪುದೆ ನಾವು ॥ ೧ ॥

ರಾಗ ಮಾರವಿ ಏಕತಾಳ

ಸಂಡು ಸುಡು ನಿನ್ನಯ ಬಡಿವಾರಂಗಳ । ನಡೆ ನಡೆ ಸಾರಿದೆನು ॥ ಕಡು ಪಾಪಿಯೆ ಎನ್ನಿದಿರೊಳು ನಿಲದಿರು । ಹುಡುಗಿಯಂ ಕೊಡೆ ನಾನು ॥ ೧ ॥

ರಾಗ ಸಾಂಗತ್ಯ ರೂಪಕತಾಳ

ಬರಿದೇತಕಯ್ಯ ಆಗ್ರಹ ನಿನ್ನ ಕೋಮಲ । ಕರವೀಗ ಬಂಧನದಿಂದ ॥ ಕೊರೆ ಯುತ್ತಲಿದೆ ವ್ಯರ್ಥ ಸುತೆಯುನ್ನು ಕೊಟ್ಟೆವು । ಹರುಷದಿಂದುಂಪಚರಿಸಯ್ಯ ॥

ರಾಗ ಮಾರವಿ ಏಕತಾಳ

ಸರಸವು ಸಲ್ಲದು ನಡೆ ನಡೆ ನಾನೀ । ಪುರವನಂ ತ್ಯಜಿಸೀಗ ॥ ತೆರಳುವೆ ಕಡೆ ಯೊಳು ನಿಮ್ಮರದಂದದಿ । ವಿರಚಿಸಬಹುದಾಗ ॥ ೧ ॥

ರಾಗ ಸಾಂಗತ್ಯ ರೂಪಕತಾಳ

ಕರವ ಬಿಚ್ಚುವೆನಣ್ಣ ನಿಲ್ಲಿರೆನುತ ಬಂದು । ತ್ವರಿತದಿ ಬಂಧನ ಬಿಡಿಸೆ ॥ ಧರೆಯನು ನೋಡುತಲಿಹ ಪಿತಗೆ ವಂದಿಸುತಾಗ । ತರಳೆಯಾಗಿಹ ರುಗ್ಮವತಿಯು ॥ ೧ ॥ ತಂದೆ ಲಾಲಿಸು ಎನ್ನ ಪತಿಯು ಪ್ರದ್ಯುಮ್ನನೇ । ಎಂದೆ ಭಾವಿಸುತಿರ್ದೆ ನಾನು ॥ ಇಂದುಧರನ ಕೃಪೆಯಿಂದೀಗ ಸರಿಯಾಯ್ತು । ಚೆಂದದಿ ಲಗ್ನವ ಗೆಯ್ಯೊ ॥ ೨ ॥

ವಾರ್ಧಿಕ

ತರಳೆಯಿಂತೆನೆ ಕೇಳ್ದು ಮನದ ಸಂದೇಹಮಂ । ಪರಿತ್ಯಜಿಸಿ ರುಗ್ಮನೃಪ ಹರುಷದಿಂ ಶ್ರೀಹರಿಯೊ । ಳೊರೆದನಜ್ಞಾನದಿಂ ಗೆಯ್ದುದೆಲ್ಲವ ಮರೆತು ಹರಿ ತಹುದು ನೀವೀಗಳು ॥ ಪರಿಣಯವ ರಚಿಪೆನೆಂದರಿಕೆಗೆಯ್ವುತ್ತಿರಲ್ । ಹರಿಯು ಸಂತೋಷದಲಿ ಸರ್ವರನ್ನೊಡಗೊಂಡು । ಅರಮನೆಗೆ ಬರುವುದಂ ಪರಿಕಿಸುತ ಸಿಂಧುನೃಪ ಪುರಕೆ ತೆರಳಿದ ದುಗುಡದಿ ॥ ೧ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಹರಿಯು ಮನ್ನಿಸುತಾಗ ರುಗ್ಮನು । ಸುರುಚಿರಾಸನವಿತ್ತು ಸಕಲರ । ಪರಿ ವಿಡಿದು ಕುಳ್ಳಿರಿಸಿ ಗಂಗೋ । ದಕಗಳಿತ್ತು ॥ ೧ ॥ ಕರೆಸಿ ಪೌರೋಹಿತರ ವಿಬು ಧರ । ಸರಣಿಗಳನೊಡಗೊಂಡು ಹರುಷದಿ । ಮೆರೆವ ವಾದ್ಯದ ರವವು ಭೋರಿಡು । ತಿರಲು ಭೂಪ ॥ ೨ ॥ ಜಲಜನೇತ್ರೆಯರಿಂದ ಸುತೆಯನು । ಬೆಡ ಗಿನಿಂ ಶೃಂಗರಿಸಿ ಮಂಟಪ । ದೆಡೆಗೆ ಕರೆತರೆ ಕಲಶಗನ್ನಡಿ । ವಿಡಿದು ಬೇಗ ॥ ೩ ॥

ರಾಗ ಕೇದಾರಗೌಳ ಅಷ್ಟತಾಳ

ಜನಪಾಲ ರುಗ್ಮನು ಹರುಷದಿ ತನ್ನಯ । ತನುಜೆಯನೆತ್ತಿಕೊಂಡು ॥ ಘನ ವೇಗ ಮಂಟಪದೊಳಗೆ ತಂದಿಳುಹುತ್ತ । ಚಿನುಮಯನೊಡನೆಂದನು ॥ ೧ ॥ ಮುರಹರ ಲಾಲಿಸು ಪೆತ್ತು ಸಾಕಿದೆ ನಾನು । ಸರಸಿಜಮುಖಿಯುಳನು ॥ ಸ್ಮರ ನಿಂಗೆ ತಕ್ಕವಳ್ ಮುಂದೆ ನಿಮ್ಮವಳೀಕೆ । ಕರುಣದಿ ರಕ್ಷಿಪುದು ॥ ೨ ॥ ಒರೆಯುತ್ತಲೀ ಪರಿ ಭೂಮಿಪಾಲನು ತನ್ನ । ತರಳೆಯು ಮನ್ಮಥನ ॥ ಕರದೊಳು ಕರ ವಿಟ್ಟು ಧಾರೆಯನೆರೆದನು । ಪರಮ ಸಂತೋಷದಿಂದ ॥ ೩ ॥

ರಾಗ ಕಲ್ಯಾಣಿ ಅಷ್ಟತಾಳ

ಧಾರೆಯನೆರೆಯಲು ಮುದದಿ । ವಿಪ್ರ । ವಾರವು ವೇದದ ರವದಿ ॥ ಭೂರಿ ಪುತ್ರರು ಪೌತ್ರರಾಗಲೆಂದ್ವರಸುತ್ತ । ಭೋರನೆ ಮಂತ್ರಾಕ್ಷತೆಗಳ ತಳಿದರು ॥ ॥ ೧ ॥ ಭೇರಿ ತಮ್ಮಟೆ ಕಹಳೆಗಳು । ಅಲ್ಲಿ । ಭೋರಿಡೆ ಸಕಲ ವಾದ್ಯಗಳು ॥ ವಾರಿಧಿಘೋಷಗಳೆನೆ ಸರ್ವ ಜನಗಳು । ಭೂರಿ ತೋಷವ ಗೊಳ್ಳೆ ಪರಿಣಯ ಕಾಲದಿ ॥ ೨ ॥ ಸುದತಿಯರೆಲ್ಲರು ಕೂಡಿ । ಆ । ಮದುವಣಿಗರನು ಕೊಂಡಾಡಿ ॥ ಮುದದಿಂದಲರಸಿನೆಣ್ಣೆಯ ಗೆಯ್ಸಿ ವೇಗದಿ । ವಿಧ ವಿಧ ಸೇಸೆಯನಿಡಿಸಿ ಪಾಡಿದರು ॥ ೩ ॥

ರಾಗ ಧವಳಾರ ಆದಿತಾಳ

ಮುಂತ್ತಿನ ಹಸೆಯೊಳು ಚಿತ್ತಜನನ್ನು । ಮತ್ತಕಾಶಿನಿಯರು ಮುದದಿ ಕುಳ್ಳಿರಿಸಿ ॥ ಚಿತ್ತರಂಜನೆಗೆಯ್ವ ವರ ರುಗ್ಮವತಿಯನ್ನು । ಒತ್ತಿನೊಳ್ ನಿಲಿಸುತರಿಸಿನವನ್ನಚ್ಚಿಸುತಲಿ ॥ ಅರ್ತಿಯೊಳು ಸೇಸೆ ತಳಿದರು ॥ ಶೋಭಾನೆ ॥ ೧ ॥ ನಾಗವಲ್ಲಿಯು ಕ್ರಮುಕ ನಾರಿಕೇಳದೊಳು । ನಾಗವೇಣಿಯು ಮಡಿಲ ತುಂಬುತ್ತ ವರು ॥ ಪೂಗ ಚಂಪಕ ಮೊದಲಾದ ಪುಷ್ಪಗಳಿಂದ । ಭೋಗಿಶಯನಸತಿಯಂತಲಂಕರಿಸುತಲಿ ॥ ಬೇಗದಲಿ ಸೇಸೆ ತಳಿದರು ॥ ಶೋಭಾನೆ ॥ ೨ ॥ ಸಲಲಿತಾಂಗಿಯರೆಲ್ಲ ಕೂಡಿ ಸಂಭ್ರಮದಿ । ಚೆಲುವ ದಂಪತಿಗಳ ಪೊಗಳುತ್ತ ಮುದದಿ ॥ ಪಲವುತರದ ಗಾಯನದಿಂದ ಪಾಡುತ್ತ । ಪೊಳೆವ ರತ್ನದ ಆರತಿಯನೆತ್ತುತಲಿ ॥ ಹರಸುತಲಿ ಸೇಸೆ ತಳಿದರು ॥ ಶೋಭಾನೆ ॥ ೩ ॥

ವಾರ್ಧಿಕ

ಹರುಷದಿಂ ಖೇಚರರು ಕುಣಿದಾಡಲಂಬರದಿ । ಸುರರು ಸಂತಸದಿಂದ ಪುಷ್ಪವೃಷ್ಟಿಯ ಸುರಿಸೆ । ಪರಮವಿಭವದಿ ಲಗ್ನ ಗೆಯ್ದು ನೃಪವರನಾಗ ನೆರೆದಿರ್ದ ಭೂಸುರರಿಗೆ ॥ ಪರಿತುಷ್ಟರಾಗುವಂತಿತ್ತು ದಕ್ಷಿಣೆಗಳು । ಮುರಹರಾದಿಗಳನ್ನು

ಮನ್ನಿಸುತ ವಿಭವದೊಳ್ । ಪರಿಪರಿಯಂ ಭೋಜನದಿ ಸಂತಯಿಸಿ ಸರ್ವರಂ ಮೆರವಣಿಗೆ ರಚಿಸುತಾಗ ॥ ೧ ॥

ರಾಗ ಕೇದಾರಗೌಳ ಅಷ್ಟತಾಳ

ಪರಮಸಂತೋಷದಿ ಪರಿಣಯಂಗೆಯ್ಮುತ್ತ । ವಿರಚಿಸಿಯವಭೃಥವ ॥ ತರಳೆಗೆ ವಿಧ ವಿಧ ಬಳುವಳಿಗಳನಿತ್ತು । ವೆರಸಿ ದಿಬ್ಬಣವನಾಗ ॥ ೧ ॥ ವಾರಿಜಾಕ್ಷನ ಸತಿಸುತರೊಡನಾ ರುಗ್ಮ । ದ್ವಾರಕಾಪುರವರಕೆ ॥ ನಾರಿಸಹಿತ ಬಂದು ನಿಳಯಂಪ್ರವೇಶವ । ಕಾರುಣ್ಯದಿಂ ಗೆಯ್ಸಿದ ॥ ೨ ॥ ಇಂತೀ ಚಾರಿತ್ರವ ಶಂಕ ಮುನಿರಾಯನು । ಪಿಂತೆ ಪರೀಕ್ಷಿತಗೆ ॥ ಸಂತಸದಿಂ ಪೇಳ್ದ ಮುರಹರಚರಿತೆಯಂ । ನಿಂತು ಗೆಯ್ದೆನು ಕೃತಿಯಂ ॥ ೩ ॥ ಅಪ್ಪುತಪ್ಪುಗಳಿರೆ ಪ್ರಾಜ್ಞರಾದವರಿದ । ನೊಪ್ಪವ ಮಾಡಿಕೊಂಡು ॥ ಅಪ್ಪ ಶ್ರೀಕೃಷ್ಣನ ಚಾರಿತ್ರವನುದಿನ । ತಪ್ಪದೆ ಪಠಿಸುವುದು ॥ ೪ ॥ ವರತೀರ್ಥಾವಳಿತುಂಗಾನದಿಯ ದಕ್ಷಿಣದೊಳ । ಗಿರುವ ಪನಸಪುರದ ॥ ಉರಗೇಂದ್ರಶಾಸ್ತ್ರಿಯ ತರಳ ನೃಕೇಸರಿ । ವಿರಚಿಸಿದೆನು ಕೃತಿಯಂ ॥ ೫ ॥ ಪರಮ ಶುಭಕೃತು ಜ್ಯೇಷ್ಠ ಪೌರ್ಣಮಿಯೊಳು । ಪರಿಪೂರ್ಣ ಗೆಯ್ದಿಹೆನಂ ॥ ವರಕವಿಗಳ ದಿವ್ಯಚರಣಕಟಾಕ್ಷವು । ಗುರುಹಿರಿಯರ ದಯದಿ ॥ ೬ ॥

ರಾಗ ಭೂಪಾಳಿ ತ್ರಿವುಡೆತಾಳ

ಮಂಗಳಂ । ಜಯ । ಮಂಗಳಂ ॥ಪ॥ ನಾರದನ ಪಿತ ತಾತದೇವಗೆ । ಮಾರನಯ್ಯಗೆ ಕೃಷ್ಣಗೆ ॥ ನಾರಿರುಗ್ಮಿಣಿಮೋಹದರಸಗೆ । ದ್ವಾರಕಾಪುರವಾಸಗೆ ॥ ಮಂಗಳಂ । ಜಯಂ । ಮಂಗಳಂ ॥ ೧ ॥ ಯೋಗಿಹೃದಯನಿವಾಸ ದೇವಗೆ । ಶೇಷನಾದೇಹಸುತಲ್ಪಗೆ ॥ ಭಾಗವತಜನಪ್ರೇಮಿ ಕೃಷ್ಣಗೆ । ನಾಗಭೂಷಣಸಖನಿಗೆ ॥ ಮಂಗಳಂ । ಜಯ । ಮಂಗಳಂ ॥ ೨ ॥ ದುರುಳ ಹಿರಣ್ಯಕನ ಮರ್ದಿಸಿ । ತರಳನನಂ ಪಾಲಿಸಿದಗೆ ॥ ಧರೆಯೊಳ್ ತೀರ್ಥಾವಳಿಯೊಳ್ ನೆಲೆಸಿಹ । ಸಿರಿಯರಸ ನರಸಿಂಹಗೆ ॥ ಮಂಗಳಂ । ಜಯ । ಮಂಗಳಂ ॥ ೩ ॥

ಯಕ್ಷಗಾನ ರುಗ್ಮವತೀಕಲ್ಯಾಣ ಮುಗಿದುದು

ಪಾವಂಜೆ ಗುರುರಾವ್ ಅಂಡ್ ಸನ್ಸ್ ಇವರಿಂದ ಉಡುಪಿ ಶ್ರೀಕೃಷ್ಣಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯದಲ್ಲಿ ಪ್ರಕಟಿಸಲ್ಪಟ್ಟಿತು

S. ೩೩೨/O. 1001/ R. 1147 1000—10-1972